ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಜತ್ ಅರ್ಧಶತಕ

ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ (63 ರನ್) ಶುಕ್ರವಾರ ಗುವಾಹಟಿಯಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಅರ್ಧಶತಕ ದಾಖಲಿಸಿದರು

ಬಿಸಿಲಿನ ತಾಪ..

ಶುಕ್ರವಾರ ಹುಬ್ಬಳ್ಳಿಯಲ್ಲಿ ಮಾರುಕಟ್ಟೆಗೆ ಬಂದ ವಿದ್ಯಾರ್ಥಿನಿಯೊಬ್ಬರು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಮುಖಕ್ಕೆ ಬಟ್ಟೆ ಕಟ್ಟಿಕೊಂಡು, ಕೊಡೆ ಹಿಡಿದು ಸಾಗಿದರು

UNIVERSAL
GROUP OF INSTITUTIONS
@ BENGALURU

25 Years of EXCELLENCE
Produced 8053+ OFFICERS

UNIVERSAL SCHOOL OF ADMINISTRATION
ACCREDITED WITH GRADE B++ NAAC

ಯೂನಿವರ್ಸಲ್ ಸಂಸ್ಥೆಯೊಂದಿಗೆ ನಿಮ್ಮ ಯಶಸ್ಸಿನ ಪಯಣ ಆರಂಭಿಸಿ

ಯೂನಿವರ್ಸಲ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್, ಬೆಂಗಳೂರು ಪದವಿ ಜೊತೆಗೆ ಇಂಟಿಗ್ರೇಟೆಡ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಾ ಬಂದಿದೆ.
ನಮ್ಮ ಗುಣಮಟ್ಟದ ಶಿಕ್ಷಣದಿಂದ ದೇಶಕ್ಕೆ ಸಾವಿರಾರು ಐಎಎಸ್, ಐಪಿಎಸ್ ಮತ್ತು ಕೆಎಎಸ್ ಅಧಿಕಾರಿಗಳನ್ನು ಕೊಟ್ಟಿದ್ದೇವೆ.
ಈ ನಮ್ಮ ಯಶಸ್ಸಿನ ದಾರಿಯಲ್ಲಿ ಸದಾ ನಮ್ಮ ಜೊತೆಗಿರುವ ಎಲ್ಲಾ ನಮ್ಮ ವಿದ್ಯಾರ್ಥಿಗಳಿಗೂ ಮತ್ತು ಪೋಷಕರಿಗೂ ಧನ್ಯವಾದಗಳು.

FOR THE FIRST TIME IN KARNATAKA

ಪದವಿ ಜೊತೆಗೆ ಇಂಟಿಗ್ರೇಟೆಡ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

PUC SCIENCE (PCMB) → with NDA & PILOT Exam Coaching, NEET, JEE & KCET
PUC COMMERCE & ARTS → with INTEGRATED PROGRAM IN MANAGEMENT (IPM)
PUC COMMERCE & ARTS → with IAS Foundation, CLAT & CUET

BA, B.Com & BSc
Degree with integrated IAS/IPS Coaching

BBA with AI Training, CAT & MAT Coaching

"Gateway" TO PUBLIC SERVICES | ನವಯುಗ ಆರಂಭ

ADMISSIONS OPEN FOR 2026-27

AIR 89
UPSC CAPF
(Assistant Commandants)
Mr. Santhosha H.M
An inspiring example of hard work and determination

ಯೂನಿವರ್ಸಲ್ ಸಂಸ್ಥೆಯಿಂದ ಕರ್ನಾಟಕದ ಅತ್ಯಂತ ಕಿರಿಯ UPSC ಟಾಪರ್

"ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಪಡೆದ ವ್ಯವಸ್ಥಿತ ತರಬೇತಿ ಮತ್ತು ಅನುಭವಿ ಶಿಕ್ಷಕರ ಮಾರ್ಗದರ್ಶನ ನನ್ನ ಯಶಸ್ಸಿಗೆ ಬಲವಾದ ನೆಲೆ ನಿರ್ಮಿಸಿತು. ಶಿಸ್ತಿನ ಅಭ್ಯಾಸ ಮತ್ತು ನಿರಂತರ ಬೆಂಬಲದಿಂದ ನನ್ನ ಆತ್ಮವಿಶ್ವಾಸ ಹೆಚ್ಚಾಯಿತು. AIR 89 ಸಾಧಿಸಿ ಕರ್ನಾಟಕದ ಅತ್ಯಂತ ಕಿರಿಯ ಅಧಿಕಾರಿಗಳಲ್ಲಿ ಒಬ್ಬನಾಗಿರುವುದು ನನಗೆ ಹೆಮ್ಮೆಯ ವಿಷಯ. ಈ ಸಾಧನೆಗೆ ಯೂನಿವರ್ಸಲ್ ನೀಡಿದ ಬೆಂಬಲವೇ ಪ್ರಮುಖ ಕಾರಣವಾಗಿದೆ."

SHRI. R. UPENDRA SHETTY
Founder Chairman

Contact Our Vijayanagar, Bengaluru Branch For
IAS/IPS/KAS Coaching Classes
Address: 2922/20, Next to Canara Bank, Near Attiguppe Bus Stop, RPC Layout, Vijayanagar, Bengaluru - 560040.
Join our Youtube Channel @ugibengaluru

FOR ADMISSION ENQUIRY CALL
6366816611
9686664983
6366155647

SCAN FOR CAMPUS TOUR

ugibengaluru | ugibengaluru | ugibengaluru | ugibengaluru | ugibengaluru | universalinstitutions | UPSC IAS Current Affairs

UNIVERSAL
GROUP OF INSTITUTIONS
@ BENGALURU
25 Years of EXCELLENCE
Produced 8053+ OFFICERS
Every step of your legal journey starts from here
PUC COMMERCE & ARTS with
CLAT, CUET & IAS
Foundation Coaching
OUR CLAT ACHIEVERS
AIR - 100 STATE RANK - 11th Sheikh Ehsaan Khaleelullah
AIR - 1102 STATE RANK - 2nd Bhuvan Sai
AIR - 1217 STATE RANK - 90th Skanda H R
AIR - 2464 STATE RANK - 11th C H Vishnupriya
STATE RANK - 57 Anirudha K
STATE RANK - 61 Guruprasad
STATE RANK - 111 Thanmai B V Naidu
STATE RANK - 160 Chittha Saagar
STATE RANK - 170 Shiva Yogish A
STATE RANK - 198 Balaji B N
STATE RANK - 248 Midhila Jayan
STATE RANK - 266 Samyami Sanketh
STATE RANK - 317 Katepogu Makshasri
STATE RANK - 446 Vaishnavi Hegde
PUC COMMERCE & ARTS with
INTEGRATED PROGRAM IN MANAGEMENT (IPM) Coaching
ಪಿಯುಸಿ ನಂತರ ಭಾರತದ ಪ್ರಸಿದ್ಧ IIMs (Indian Institute of Management) ಗಳಲ್ಲಿ IPM (Integrated PROGRAM IN MANAGEMENT) ಮಾಡಲು, ಪಿಯುಸಿ ಜೊತೆಗೆ ಇಂಟಿಗ್ರೇಟೆಡ್ IPM Entrance Exam ಗೆ ಕೋಚಿಂಗ್ ನೀಡಲಾಗುವುದು.
Top IIMs offer Integrated Program In Management
IIM Indore
IIM Rohtak
IIM Ranchi
IIM Shillong
IIM Jammu
IIM Bodh Gaya
IIM Amritsar
IIM Sirmaur
FOR THE FIRST TIME IN KARNATAKA
PUC SCIENCE
with
NDA & PILOT
NEET, JEE & KCET
Exam Coaching
19 DISTINCTIONS IN 2ND PUC ARTS & COMMERCE ANNUAL EXAM 2025-26
100% RESULTS
STATE RANK 8TH
ACHYUTHA SUMASREE 98.50 %
PRATISHTA SHETTY 94.67 %
DHANYA P GOWDA 94.50 %
POORVI M PUTRAN 94.50 %
SAMANVITA PUJAR 94.50 %
MONISHA L R 94.33 %
RENUSREE CHUNDRU 94.33 %
HITHA DHANANJAYA 93.83 %
BALAJI B N 93.17 %
NAVYASHREE N 93.17 %
KEERTHANA S 93.17 %
ANIRUDHA K 92.50 %
ARCHITHA S 92.50 %
THANMAI B V 90.83 %
NATASHA SAIKIA 90.50 %
UNIVERSAL SCHOOL OF ADMINISTRATION
ACCREDITED WITH GRADE B++ NAAC
BA, B.Com & BSc
Degree with integrated IAS/IPS Coaching
BBA with AI Training, CAT & MAT Coaching
ಐತಿಹಾಸಿಕ ದಾಖಲೆ ಸೃಷ್ಟಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು
• 2021-22 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಟಾಪ್ 9 ರ್‍ಯಾಂಕ್‌ಗಳು
• 2022-23 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಟಾಪ್ 8 ರ್‍ಯಾಂಕ್‌ಗಳು
• 2023-24 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ BA ವಿಭಾಗದಲ್ಲಿ ಎಲ್ಲಾ ಟಾಪ್ 10 ರ್‍ಯಾಂಕ್‌ಗಳು ಮತ್ತು B.Com ವಿಭಾಗದಲ್ಲಿ ಟಾಪ್ 2 ರ್‍ಯಾಂಕ್‌ಗಳನ್ನು ಪಡೆದ ಏಕೈಕ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.
• 2024-25 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ BA ವಿಭಾಗದಲ್ಲಿ ಟಾಪ್ 6 ರ್‍ಯಾಂಕ್‌ಗಳು
BANGALORE UNIVERSITY TOPPERS
1ST RANK 2021-22 Sushma
1ST RANK 2022-23 Santhosha HM
1ST RANK 2023-24 Sammed Chandru
1ST RANK 2024-25 KS Vishnu Kumar
2ND RANK 2024-25 S Ramakrishna Teja
3RD RANK 2024-25 R Sagar Kamlay
4TH RANK 2024-25 B Vaishnavi Shivraj
5TH RANK 2024-25 P Manaswini
10TH RANK 2024-25 Tokala Bhuvanasri
FOR COLLEGE ADMISSION ENQUIRY CALL
6366816611, 9686664983
www.universalinstitutions.com
info@universalinstitutions.com
SCAN FOR COLLEGE LOCATION
College Address: Gururayanapura, Kolur Village, Tavarekere Hobli, Ramohalli Post, Bengaluru South Taluk, Bengaluru-74

prajavani.net prajavani | ಶನಿವಾರ, ಏಪ್ರಿಲ್ 11, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 100 | ಪುಟ 24 | www.prajavani.net

ವಿಶ್ವನಾಥ್‌ಗೆ ಚಿನ್ನ
ಭಾರತದ ತಾರೆ ವಿಶ್ವನಾಥ್ ಸುರೇಶ್ ಅವರು ಮಂಗೋಲಿಯಾದಲ್ಲಿ ನಡೆದ ಏಷ್ಯಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,550 | ನಿಫ್ಟಿ 24,050 | $/₹ 92.83 | ಚಿನ್ನ (Std. 10g) ₹1,57,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,55,900 (ಬೆಂಗಳೂರು)

ಮತ ಪತ್ರ ಬಳಕೆ: ಮಸೂದೆಗೆ ರಾಜ್ಯಪಾಲರ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಅಧಿವೇಶನದಲ್ಲಿ ಮಂಡನೆಯಾಗಿದ್ದ 11 ಮಸೂದೆಗಳ ಪೈಕಿ, ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರದ ಬದಲು ಮತ ಪತ್ರ ಬಳಕೆಗೆ ಅವಕಾಶ ಕಲ್ಪಿಸುವ ಮಸೂದೆಯನ್ನು ಬಿಟ್ಟು, ಉಳಿದವುಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಚುನಾವಣೆಗಳಲ್ಲಿ ಮತ ಪತ್ರ ಬಳಸುವುದಕ್ಕೆ ಸಂಬಂಧಿಸಿದ 'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ 2026' ರಾಜ್ಯಪಾಲರ ಪರಿಶೀಲನೆ ಹಂತದಲ್ಲಿದೆ ಎಂದು ಲೋಕಭವನದ ಮೂಲಗಳು ತಿಳಿಸಿವೆ. ▶6

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಚಾರಣ: ಸುರಕ್ಷೆ ಅರಣ್ಯರೋದನ

ಟಿಕೆಟ್ ಬುಕ್ಕಿಂಗ್‌ಗೆ ಸೀಮಿತವಾದ 'ಅರಣ್ಯ ವಿಹಾರ' ಪೋರ್ಟಲ್

• ಜಯಸಿಂಹ ಆರ್.

ಬೆಂಗಳೂರು: ರಾಜ್ಯದ ಪ್ರಮುಖ ಅರಣ್ಯ–ಪರ್ವತ ಪ್ರದೇಶದಲ್ಲಿ ಪ್ರವಾಸಿಗರ ಚಾರಣವನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಆರಂಭಿಸಿದ್ದ 'ಅರಣ್ಯ ವಿಹಾರ' ಪೋರ್ಟಲ್, ಬುಕ್ಕಿಂಗ್‌ಗಷ್ಟೇ ಸೀಮಿತವಾಗಿದೆ. ಸುರಕ್ಷಿತ ಚಾರಣ ಕೈಗೊಳ್ಳುವ ಬಗ್ಗೆ ಇಲಾಖೆಯು ಯಾವುದೇ ನಿಯಮ ರೂಪಿಸಿಲ್ಲ.

ಕೊಡಗಿನ ತಡಿಯಾಂಡಮೋಳ್ ಚಾರಣದ ವೇಳೆ ಈಚೆಗೆ ನಾಪತ್ತೆಯಾಗಿದ್ದ ಕೇರಳದ ಶರಣ್ಯಾ, ಮೂರು ದಿನಗಳ ನಂತರ ಸುರಕ್ಷಿತವಾಗಿ ಪತ್ತೆಯಾದರು. ಚಿಕ್ಕಮಗಳೂರಿನ ಮಾಣಿಕ್ಯಧಾರಾ ಜಲಪಾತದ ಬಳಿ ನಾಪತ್ತೆಯಾಗಿದ್ದ ಕೇರಳದ ಶ್ರೀನಂದಾ ಶುಕ್ರವಾರ ಶವವಾಗಿ ಪತ್ತೆಯಾಗಿದ್ದಾರೆ. ಎರಡು ಘಟನೆಗಳ ಕಾರಣದಿಂದ, ಸುರಕ್ಷಿತ ಚಾರಣದ ಬಗ್ಗೆ ಸಾಮಾಜಿಕ ವಲಯದಲ್ಲಿ ಚರ್ಚೆ ಆರಂಭವಾಗಿದೆ.

ಸುರಕ್ಷಿತ ಚಾರಣ ಕೈಗೊಳ್ಳಲು 'ಪ್ರಮಾಣಿತ ಕಾರ್ಯಾಚರಣೆ ವಿಧಾನ–ಎಸ್‌ಒಪಿ' ಸಿದ್ಧಪಡಿಸುವಂತೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಸೂಚಿಸಿದ್ದಾರೆ. ಆದರೆ, ಈಗ ಇರುವ ಕೆಲವು ನಿಯಮಗಳನ್ನೂ ಪಾಲಿಸುತ್ತಿಲ್ಲ ಎಂಬುದು ಚಾರಣಿಗರ ಆರೋಪ.

ಕೋವಿಡ್ ನಂತರದಲ್ಲಿ ರಾಜ್ಯದ ವಿವಿಧ ಅರಣ್ಯ–ಪರ್ವತ ಪ್ರದೇಶಗಳಲ್ಲಿ ಚಾರಣ ಕೈಗೊಳ್ಳುವವರ ಸಂಖ್ಯೆ ದಿಢೀರ್ ಏರಿಕೆಯಾಯಿತು. ಜತೆಗೆ, ಚಾರಣದ ಸಂದರ್ಭದಲ್ಲಿ ದಟ್ಟಣೆಯ ಜತೆಗೆ ದುರಂತಗಳ ಸಂಖ್ಯೆಯೂ ಹೆಚ್ಚಾಯಿತು.

ಅದನ್ನು ನಿಯಂತ್ರಿಸುವ ಉದ್ದೇಶದಿಂದ ಇಲಾಖೆಯು ತಾನು ಗುರುತಿಸಿದ ಆಯ್ದ ಚಾರಣಗಳಿಗೆ ದಿನವೊಂದರಲ್ಲಿ ಭೇಟಿ ನೀಡಬಹುದಾದ ಚಾರಣಿಗರ ಸಂಖ್ಯೆಗೆ ಮಿತಿ ಹೇರಿತು. ಅದನ್ನು ಅನುಷ್ಠಾನಕ್ಕೆ ತರುವ ಉದ್ದೇಶದಿಂದ 2024ರ ಅಕ್ಟೋಬರ್‌ನಲ್ಲಿ 'ಅರಣ್ಯ ವಿಹಾರ' ಪೋರ್ಟಲ್ ಆರಂಭಿಸಿ, ಮುಂಗಡ ಬುಕ್ಕಿಂಗ್ ಕಡ್ಡಾಯಗೊಳಿಸಿತು.

'ಇಲಾಖೆಯ ನಿಯಂತ್ರಣ ಕ್ರಮ ಟಿಕೆಟ್ ಬುಕ್ಕಿಂಗ್ ಅನ್ನು ತನ್ನ ಉದ್ದೇಶವಾಗಿರಿಸಿಕೊಂಡಂತಿದೆ. ಅರಣ್ಯ ವಿಹಾರ ಪೋರ್ಟಲ್‌ನಲ್ಲಿ ಪಟ್ಟಿ ಮಾಡಲಾದ ತಾಣಗಳಲ್ಲಿ ಚಾರಣ ಕೈಗೊಳ್ಳುವ ಮುನ್ನ ಟಿಕೆಟ್ ಇದೆಯೇ ಮತ್ತು ಸರಿಯಾದ ಸಮಯಕ್ಕೆ ಹೋಗಿ ಬರುತ್ತಾರೆಯೇ ಎಂಬುದನ್ನಷ್ಟೇ ಸಿಬ್ಬಂದಿ ಪರಿಶೀಲಿಸುತ್ತಾರೆ' ಎಂಬುದು ಬೆಂಗಳೂರಿನ ನಾಗದೇವನಹಳ್ಳಿಯ ನಿವಾಸಿ–ಚಾರಣಿಗ ನಿತ್ಯಾನಂದ ಅವರ ಆರೋಪ. ▶6

ಅನಧಿಕೃತ ಆಯೋಜನೆ

'ರಾಜ್ಯದಲ್ಲಿ ಚಾರಣ ಆಯೋಜಿಸುವ ವ್ಯಕ್ತಿಗಳು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ ತರಬೇತಿ ಮತ್ತು ಪ್ರಮಾಣ ಪತ್ರ ಹೊಂದಿರಬೇಕು. ಇಲ್ಲವೇ ಹಿಮಾಲಯ ಪರ್ವತಾರೋಹಣ ಕ್ಲಬ್‌ನ ಪ್ರಮಾಣ ಪತ್ರ ಹೊಂದಿರಬೇಕು. ಚಾರಣದ ವೇಳೆ ಆ ವ್ಯಕ್ತಿಗಳು ಕಡ್ಡಾಯವಾಗಿ ಹಾಜರಿರಬೇಕು ಎಂಬುದು ನಿಯಮ. ಅದರೆ ತರಬೇತಿ ಮತ್ತು ಪ್ರಮಾಣ ಪತ್ರ ಹೊಂದಿಲ್ಲದೇ ಇರುವ ಹಲವು ವ್ಯಕ್ತಿಗಳು ರಾಜ್ಯದಲ್ಲಿ ಚಾರಣ ಆಯೋಜಿಸುತ್ತಿದ್ದಾರೆ' ಎಂಬುದು ಟೀಮ್ ಅಡ್ವೆಂಚರರ್ಸ್ ತಂಡದ ಸಹಸಂಸ್ಥಾಪಕ ಹರಿಪ್ರಸಾದ್. ಆರ್.ವಿ ಅವರ ಕಳವಳ.

'ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಪ್ರಕಟಿಸುವ ಮೂಲಕ ಚಾರಣಕ್ಕೆ ಚಾರಣಿಗರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ಚಾರಣ ನಡೆಸುತ್ತಾರೆ. ಅನುಮತಿ ಇಲ್ಲದೆ ರಾತ್ರಿ ಚಾರಣ ನಡೆಸುತ್ತಾರೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ನಾಪತ್ತೆಯಾಗಿದ್ದ ಕೇರಳದ ವಿದ್ಯಾರ್ಥಿನಿ ಶವವಾಗಿ ಪತ್ತೆ

ಚಿಕ್ಕಮಗಳೂರು: ಚಂದ್ರದ್ರೋಣ ಪರ್ವತಶ್ರೇಣಿಯ, ಮಾಣಿಕ್ಯಧಾರಾ ಜಲಪಾತದ ಬಳಿ ನಾಪತ್ತೆ ಆಗಿದ್ದ ಕೇರಳದ ವಿದ್ಯಾರ್ಥಿನಿ ಮೃತದೇಹ 3 ದಿನದ ಬಳಿಕ ಶುಕ್ರವಾರ ಪತ್ತೆಯಾಗಿದೆ.

ಜಲಪಾತದ ಸಮೀಪದ ವೀಕ್ಷಣಾ ಗೋಪುರದ ಎದುರಿನ ಪ್ರಪಾತದಲ್ಲಿ ಬಾಲಕಿಯ ದೇಹ ಇರುವುದು ಮೊದಲು ಡ್ರೋನ್ ಕ್ಯಾಮೆರಾದಲ್ಲಿ ಗೋಚರಿಸಿತು. ಬಳಿಕ ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ತೆರಳಿ ಅದೇ ಬಾಲಕಿಯ ಮೃತದೇಹ ಎಂಬುದನ್ನು ಖಚಿತಪಡಿಸಿದರು.

ವೀಕ್ಷಣಾ ಗೋಪುರದ ಎದುರು ಅಂದಾಜು ಇಪ್ಪತ್ತು ಮೀಟರ್‌ನಷ್ಟು ಇಳಿಜಾರಿನ ಪ್ರದೇಶ ಇದ್ದು, ಅಲ್ಲಿಂದ ಮುಂದಕ್ಕೆ 2 ಸಾವಿರ ಅಡಿ ಪ್ರಪಾತದಲ್ಲಿ ಶವ ಪತ್ತೆಯಾಗಿದೆ. ಬಾಲಕಿ ಕಾಲು ಜಾರಿ ಬಿದ್ದಿರಬಹುದು ಅಥವಾ ಆಕೆಯೇ ಜಿಗಿದಿರಬಹುದು ಎಂದು ಶಂಕಿಸಲಾಗಿದೆ. ಬೇರೆ ಕಾರಣಗಳಿದ್ದರೆ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಗೊತ್ತಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ▶6

ಪಟ್ಟಿಯಲ್ಲಿಲ್ಲ ನೂರಾರು ತಾಣ

ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ 100ಕ್ಕೂ ಹೆಚ್ಚು ಚಾರಣ ತಾಣಗಳಿವೆಯಾದರೂ, ಅರಣ್ಯ ಇಲಾಖೆಯು ಅರಣ್ಯ ವಿಹಾರ ಪೋರ್ಟಲ್, 12 ಜಿಲ್ಲೆಗಳ ಆಯ್ದ 33 ಸ್ಥಳಗಳಿಗಷ್ಟೇ ಬುಕ್ಕಿಂಗ್ ಸೀಮಿತಗೊಳಿಸಿದೆ.

ಹಲವು ಜನಪ್ರಿಯ ಚಾರಣ ತಾಣಗಳನ್ನು ಪೋರ್ಟಲ್‌ನಲ್ಲಿ ಪಟ್ಟಿ ಮಾಡದೇ ಇರುವ ಬಗ್ಗೆ ಇಲಾಖೆಯ ಅಧಿಕಾರಿಗಳನ್ನು ಪ್ರಶ್ನಿಸಿದಾಗ, 'ಧಾರ್ಮಿಕ ಕೇಂದ್ರಗಳಿರುವ ಬೆಟ್ಟ–ಪರ್ವತಗಳು ಮತ್ತು ಸಣ್ಣ ಚಾರಣ ತಾಣಗಳನ್ನು ಪೋರ್ಟಲ್‌ನಲ್ಲಿ ಸೇರಿಸಿಲ್ಲ' ಎಂಬ ಉತ್ತರ ಸಿಗುತ್ತದೆ. ಆದರೆ, ಕಠಿಣ ಸವಾಲಿನ ಮತ್ತು ಅಪಾಯದ ಸಾಧ್ಯತೆ ಇರುವ ಚಾರಣ ತಾಣಗಳು ಈ ಪಟ್ಟಿಯಲ್ಲಿ ಇಲ್ಲ.

ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಪಟ್ಟಣದ 30 ಕಿ.ಮೀ. ಅಂತರದಲ್ಲಿ 10ಕ್ಕೂ ಹೆಚ್ಚು ಚಾರಣ ತಾಣಗಳಿವೆ. ಆದರೆ ಪೋರ್ಟಲ್‌ನಲ್ಲಿ ಇಡೀ ಜಿಲ್ಲೆಗೆ ಎರಡು ತಾಣಗಳನ್ನಷ್ಟೇ ಪಟ್ಟಿ ಮಾಡಲಾಗಿದೆ. ▶6

ಹಿಂದಿಗೆ ಗ್ರೇಡ್: ಪ್ರಶ್ನಿಸಿದ್ದ ಅರ್ಜಿದಾರರಿಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ, ಅಂಕಗಳ ಬದಲಿಗೆ ಗ್ರೇಡ್ ನೀಡುವ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಜಾಗೊಳಿಸಿರುವ ಹೈಕೋರ್ಟ್, ಅರ್ಜಿದಾರರಿಗೆ ₹1 ಲಕ್ಷ ದಂಡ ವಿಧಿಸಿದೆ.

ಈ ಕುರಿತು ಬೆಂಗಳೂರಿನ ಎಚ್.ಎನ್.ಚಂದನಾ ಮತ್ತು ಎಸ್.ವೆಂಕಟೇಶ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

'ಇದೊಂದು ಪ್ರಚಾರದ ಹಿತಾಸಕ್ತಿ ಹೊಂದಿರುವ ಅರ್ಜಿಯಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, 'ಅರ್ಜಿದಾರರಿಗೆ ತಲಾ ₹50 ಸಾವಿರ ದಂಡ ವಿಧಿಸಿತು. ದಂಡದ ಮೊತ್ತವನ್ನು ಎರಡು ವಾರಗಳಲ್ಲಿ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಬೇಕು. ಇಲ್ಲವೇ, ಮೊತ್ತವನ್ನು ಭೂ ಕಂದಾಯ ಬಾಕಿಯಾಗಿ ವಸೂಲಿ ಮಾಡಲು ಜಿಲ್ಲಾಧಿಕಾರಿಗೆ ಸೂಚಿಸಿ' ಎಂದು ಸರ್ಕಾರಕ್ಕೆ ನಿರ್ದೇಶಿಸಿತು. ▶6

ಅಧಿಸೂಚನೆ ಕರಡು ಪ್ರಕಟ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ಹಾಗೂ ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟು (ಎನ್‌ಎಸ್‌ಕ್ಯೂಎಫ್) ವಿಷಯಗಳಿಗೆ ಗ್ರೇಡ್ ನೀಡುವ ಕರಡು ಅಧಿಸೂಚನೆಯನ್ನು ಶಾಲಾ ಶಿಕ್ಷಣ ಇಲಾಖೆ ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು 7 ದಿನಗಳ ಅವಕಾಶ ನೀಡಿದೆ. ▶6

'ಗೃಹಲಕ್ಷ್ಮಿ' ಹಣ ಕಡಿತ: ಕ್ರಮಕ್ಕೆ ಸೂಚನೆ

ಬೆಂಗಳೂರು: 'ಗೃಹಲಕ್ಷ್ಮಿ' ಯೋಜನೆಯಡಿ ಮಹಿಳೆಯರ ಖಾತೆಗೆ ಜಮೆಯಾಗುವ ಹಣವನ್ನು ಖಾಸಗಿ ಫೈನಾನ್ಸ್ ಕಂಪನಿಗಳು ಮತ್ತು ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಹಳೆಯ ಸಾಲದ ಬಾಕಿ ನೆಪದಲ್ಲಿ ಬಲವಂತವಾಗಿ ಕಡಿತಗೊಳಿಸುತ್ತಿರುವ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

ಮುಖ್ಯಮಂತ್ರಿ ಆದೇಶದ ಅನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಖಾಸಗಿ ಫೈನಾನ್ಸ್ ಕಂಪನಿಗಳು ಗೃಹಲಕ್ಷ್ಮಿ ಹಣದಲ್ಲಿ ಕಡಿತ ಮಾಡುತ್ತಿರುವ ಬಗ್ಗೆ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ವಿಧಾನ ಪರಿಷತ್ತಿನ ಸದಸ್ಯ ದಿನೇಶ್ ಗೂಳಿಗೌಡ, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನ ಸೆಳೆದಿದ್ದರು. ಈ ಕುರಿತು ಕ್ರಮ ಜರುಗಿಸುವಂತೆ ಮನವಿ ಸಲ್ಲಿಸಿದ್ದರು. ▶11

Karunya
DEEMED UNIVERSITY
SOLVING HUMAN PROBLEMS
NAAC Accredited A++

ARISE AND SHINE

CATEGORY 1 Institution UGC GoI.

NAAC A++ Grade

Accreditation
ACCA — B. Com and Management Programs
NBA NATIONAL BOARD of ACCREDITATION — Engineering and Management Programs
ICAR — B.Sc. (Hons.) Agriculture Program

QS I-GAUGE PLATINUM Engineering SUBJECT RATINGS

THE World University Rankings 2025 Asia 401 - 500 Band

QS UNIVERSITY RANKINGS ASIA 694 - Overall Ranking 2026

INDIA'S TOP RANKED UNIVERSITY

Admissions Open 2026

Counselling @ Bengaluru

Locations : **Jesus Calls Prayer Tower,** Netaji Road, Frazer Town.

Jesus Calls Prayer Tower, CM Tower, Jayanagar.

11th & 12th APRIL 2026
9AM to 5PM

GET UPTO 100% SCHOLARSHIP*

Karunya Sets a New Benchmark in **Placements!**
2069+ OFFERS Secured by Students!
455+ Top-Tier Companies Partnered for Recruitment!

SPECIAL JEE & Inventors Scholarship

Why Choose Karunya?

- **Industry Powered** Programs
- **100% Placement** Opportunities
- Opportunity to learn from professors listed among the **World's Top 2% Scientists**
- Work with **MNC'S & Earn While Studying**
- International Internships in over **85+ Countries**
- Industry **5.0 Curriculum**

Programs Offered at KARUNYA

B.Tech.
- **Aerospace Engineering**
- **Aerospace Engineering** Spl. Unmanned Aerial Vehicles
- **Aerospace Engineering** Spl. Artificial Intelligence & Machine Learning
- **Aerospace Engineering** Spl. Aircraft Maintenance
- **Artificial Intelligence & Data Science**
- **Biomedical Engineering**
- **Biomedical Engineering** Spl. Artificial Intelligence & Machine Learning
- **Biotechnology**
- **Biotechnology** Spl. Genome Engineering & Technology
- **Biotechnology** Spl. Artificial Intelligence
- **Civil Engineering**
- **Civil Engineering** Spl. Building Information Modelling and Digital Twin
- **Civil Engineering** Spl. Geospatial Technology
- **Computer Science & Engineering**
- **Computer Science & Engineering** Spl. Artificial Intelligence & Machine Learning
- **Computer Science & Engineering** Spl. Cyber Security
- **Computer Science & Engineering** Spl. Quantum Computing
- **Computer Science & Engineering** (Artificial Intelligence)
- **Computer Science & Engineering** (Artificial Intelligence & Machine Learning)
- **Computer Science & Engineering** (Cyber Security)
- **Electronics & Communication Engineering**
- **Electronics & Communication Engineering** Spl. Artificial Intelligence & Machine Learning
- **Electrical & Electronics Engg.**
- **Electrical & Electronics Engg.** Spl. Artificial Intelligence & Machine Learning
- **Food Processing & Engineering**
- **Food Processing & Engineering** Spl. Internet of Things
- **Mechanical Engineering**
- **Mechanical Engineering** Spl. Artificial Intelligence & Machine Learning
- **Robotics & Automation**
- **Robotics & Automation** Spl. Artificial Intelligence & Data Science
- **Robotics & Automation** Spl. Artificial Intelligence & Machine Learning

M.Tech.
- **Aerospace Engineering**
- **Artificial Intelligence & Data Science**
- **Biotechnology**
- **Biomedical Instrumentation**
- **Computer Science & Engineering**
- **Computer Science & Engineering** (Artificial Intelligence & Machine Learning)
- **Cyber Security**
- **Food Processing & Engineering**
- **Robotics & Automation**
- **Structural Engineering**
- **Virtual Prototyping & Digital Manufacturing**
- **VLSI Design**

B.Sc.
- **Artificial Intelligence & Data Science**
- **Forensic Science**
- **Information Security & Digital Forensics**
- **Media Production & Digital Marketing**
- **Energy Science & Technology**
- **Semiconductor Technology**
- **Medical Laboratory Technology**
- **Radiography & Imaging Technology**
- **Operation Theatre & Anaesthesia Technology**

B.Sc. (Hons.)
- **Agriculture**
- **Psychology**

M.Sc.
- **Agriculture** (Agronomy)
- **Agriculture** (Genetics & Plant Breeding)
- **Artificial Intelligence & Data Science**
- **Forensic Science**
- **Horticulture** (Fruit Science)
- **Biotechnology**
- **Food Science & Technology**

B.Com.
- (Specialisation in Professional Accounting & Financial Technology)
- **Online B.Com**

PG Diploma
- **Medical & Analytical Laboratory Technology**

Management
- **MBA**
- **Online MBA**

Karunya Institute of Technology and Sciences,
Karunya Nagar, Siruvani Main Road, Coimbatore - 641 114. Tamil Nadu, India.
E-mail: admissions@karunya.edu • Website: www.karunya.edu
Call: 94425 03407 / 22
Toll Free: 1800 42 54 300, 1800 88 99 888

Scan QR Code to Start the Admission Process

*Conditions apply

Pure Since 1925
BHIMA
ಲೆಗಸಿ ಫೆಸ್ಟ್
100%*
ವರೆಗೆ ರಿಯಾಯಿತಿ
ಚಿನ್ನ, ವಜ್ರ ಮತ್ತು ಬೆಳ್ಳಿಯ
ಮೇಕಿಂಗ್ ಶುಲ್ಕದ ಮೇಲೆ.
ಉಚಿತ
24kt ಚಿನ್ನದ ಗಟ್ಟಿ
ಪ್ರತಿ 1 ಲಕ್ಷ ರೂಪಾಯಿ ವಜ್ರದ
ಮೌಲ್ಯದ ಮೇಲೆ*.
ಮುಂಗಡ ಬುಕಿಂಗ್ ಈಗ ಪ್ರಾರಂಭವಾಗಿದೆ
ಈಗ ಕೇವಲ
10%*
ಪಾವತಿಸಿ
ಫ್ಲೆಕ್ಸಿ ದರವು ಏಪ್ರಿಲ್
1 ರಿಂದ 17, ರವರೆಗೆ
ನಿಮ್ಮ ನೆಚ್ಚಿನ ಆಭರಣಗಳನ್ನು ಕಡಿಮೆ
ದರದಲ್ಲಿ ಬುಕ್ ಮಾಡಿ ಪಡೆಯಿರಿ*
ಭೀಮ
ಅಕ್ಷಯ
ತೃತೀಯ
100 ವರ್ಷಗಳು.
100 ದಿನಗಳು.
100% ರಿಯಾಯಿತಿ
ಮೇಕಿಂಗ್ ಶುಲ್ಕದ ಮೇಲೆ*
Ashtalakshmi
COIN COLLECTION
ಮುಂಗಡ ಬುಕ್ ಮಾಡಿ
ಸಮೃದ್ಧ ವರ್ಷಕ್ಕಾಗಿ
ಎಂಟು ಚಿನ್ನದ ನಾಣ್ಯಗಳ
ಒಂದು ಸೊಗಸಾದ ಸೆಟ್.
FORMERLY BHIMA
ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ
ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ | bhimagold.com
BHIMA Helpline
1800-121-9076
(10:00 a.m. to 7:00 p.m.)
ಸ್ಥಳ ತಿಳಿಯಲು, ಸ್ಕ್ಯಾನ್ ಮಾಡಿ

EV sahi hai
FINALLY, A CAR THAT'S
AN APPRECIATING ASSET.
WINDSOR OWNERS WILL VOUCH FOR THAT.
MG WINDSOR EV LIVE BUSINESS CLASS
INDIA'S NO.1 EV*
AVAIL EXCLUSIVE BENEFITS BEFORE 20TH APRIL, 2026
FREE PUBLIC CHARGING** UP TO ₹20 000
ATTRACTIVE EMI PLAN ₹31 468 | ₹17 777^^
EXCHANGE BENEFIT UP TO ₹20 000<
BaaS^ RANGE STARTS AT ₹9.99^ LAKH
+ BATTERY RENTAL @ ₹3.99^/KM
SCAN TO SEE YOUR PERSONALISED SAVINGS REPORT
HERE IS HOW YOU SAVE
SAVINGS UP TO ₹19.35> LAKH
ASSURED BUYBACK UP TO ₹11> LAKH
FUEL SAVINGS ₹4> LAKH
TAX BENEFIT ON DEPRECIATION ₹4.35> LAKH
449## KM IN A SINGLE CHARGE
AUTONOMOUS LEVEL-2 ADAS~
VEHICLE TO LOAD - V2L#
LIFETIME WARRANTY on battery for the first owner<
VISIT WWW.MGMOTOR.CO.IN OR CALL 1800 100 6464
^Ex-showroom price India for base variant under BaaS unique ownership programme. *As per EV Sales Data 2025. Product shown is for representation purposes only and may vary from actual product due to print paper quality. Accessories, features and specifications shown in the pictures may not be a part of standard equipment and will differ according to the variant. In view of our policy of continuously improving our products, JSW MG Motor India Pvt. Ltd. reserves the right to discontinue any variant or to alter any specifications, features and designs without prior notice and without liability. **T&Cs apply. Refer website for details- https://www.mgmotor.co.in/vehicles/windsor-ev-electric-car-in-india/terms-and-condition. ~Advanced Driver Assistance System (ADAS) is not a substitute for human eye and driver vigilance, it is a driver assist system that enhances driving experience and safety. The driver shall remain responsible for safe, vigilant and attentive driving. Product shown is for representation purposes only and may vary from actual product due to print paper quality. Features, accessories and specifications as shown are not standard for all variants. It may vary model wise. #The V2L adapter is designed exclusively for MG Windsor EV. Use only as directed, following the manufacturer's guidelines. ##Specified range is as per standard MIDC test procedure (Part 1 + Part 2), carried out by certifying authority. Range may vary depending on various driving behaviour, traffic conditions, speeds, vehicle loads etc. ^^₹17,777 EMI under Balloon Finance Scheme for MG Windsor EV is for a tenure of 60 months at an indicative interest rate of 9% p.a., with approx. 40% residual/balloon amount payable at the end of the tenure. "Zero Downpayment" is subject to customer eligibility and approval of the financing institution. On-road price, insurance, RTO, and other charges may vary by city/state. Processing fees and other applicable charges may be levied by the financier. The offer is subject to change without prior notice. Terms and conditions apply. For further details, please contact authorised dealers of MG Motor India. >Savings indicated are up to ₹19.35 lakh and are calculated over a 3-year ownership period. Savings comprise Assured Buyback value of up to ₹11 lakh, indicative fuel cost savings of up to ₹4 lakh and tax benefit on depreciation of up to ₹4.35 lakh. Actual savings may vary depending on variant, usage, kilometres driven, electricity and fuel prices, prevailing tax laws, customer eligibility, ownership profile and other factors. Assured Buyback is subject to applicable terms & conditions available at RVI Brochure. Tax benefits are applicable only to eligible customers and are subject to individual tax treatment. JSW MG Motor India Pvt. Ltd. does not guarantee the realization of the indicated savings. <Exchange value depends on vehicle condition and dealer evaluation.
Bengaluru: MG Bengaluru Central (08037080876), MG Bengaluru Chord Road (08037080870), MG Bengaluru Electronic City (08037080875), MG Bengaluru JP Nagar (08037080872), MG Bengaluru Kalyan Nagar (08037080874) MG Bengaluru Mysore Road (08037080877), MG Bengaluru ORR (08037080871) MG Bengaluru Magadi Road (08037080836), MG Bengaluru Yelahanka (08037080837) Tumkur: MG Tumkur (08037080878)

ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್‌ಗೆ ₹19.44 ಕೋಟಿ ಲಾಭ

ಬೆಂಗಳೂರು: ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ 2025-26ನೇ ಆರ್ಥಿಕ ಸಾಲಿನಲ್ಲಿ ₹19.44 ಕೋಟಿ ಲಾಭ ಗಳಿಸಿದೆ. 'ಶತಮಾನದ ಇತಿಹಾಸ ಹೊಂದಿರುವ ಈ ಬ್ಯಾಂಕ್, ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಸೇರಿದಂತೆ ಒಟ್ಟು 6 ಶಾಖೆ ಹೊಂದಿದೆ. ಬ್ಯಾಂಕ್‌ನ ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯವಿದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಎನ್.ಎಂ. ಸುರೇಶ್ ತಿಳಿಸಿದ್ದಾರೆ.

'ಬ್ಯಾಂಕ್‌ನ ಷೇರು ಬಂಡವಾಳ ₹21.97 ಕೋಟಿ, ಆಪದ್ಧನ ನಿಧಿ ₹25.02 ಕೋಟಿ, ಇತರೆ ನಿಧಿಗಳು ₹80.17 ಕೋಟಿ, ಠೇವಣಿ ಸಂಗ್ರಹಣೆ ₹813.28 ಕೋಟಿ, ದುಡಿಯುವ ಬಂಡವಾಳ ₹978.81 ಕೋಟಿ, ಬ್ಯಾಂಕ್ ನೀಡಿರುವ ಸಾಲ ಹಾಗೂ ಮುಂಗಡಗಳು ₹495.03 ಕೋಟಿಯಷ್ಟಿದೆ. ಸರ್ಕಾರಿ ಹೂಡಿಕೆಗಳಲ್ಲಿ ₹272.19 ಕೋಟಿ ತೊಡಗಿಸಲಾಗಿದೆ' ಎಂದರು.

ಇಸ್ರೋ ISRO

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್.ಇ.ಓ.ಎಸ್.) ಪ್ರಯೋಗಾಲಯ
ಪೀಣ್ಯ, ಬೆಂಗಳೂರು - 560058.
ಎಲ್.ಇ.ಓ.ಎಸ್. ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
[ದೂರವಾಣಿ : (080)-22685088, 5047, 5045, 5086, (080)-28392310]

ಸಂಕ್ಷಿಪ್ತ ಇ-ಟೆಂಡರ್ (ಎನ್.ಐ.ಇ.ಟಿ.) ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ : ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು – 58 ಇಲ್ಲಿನ ನಿರ್ದೇಶಕರ ಕಚೇರಿ ಪ್ರದೇಶದ ಪ್ರಸ್ತಾವಿತ ಮಾರ್ಪಾಡಿಗೆ ಎ.ಸಿ. ಕಾಮಗಾರಿಗಳು. **ಎನ್.ಐ.ಇ.ಟಿ. ನಂ.:** LEOS/C&MG/Director_Off/AC/ETN-01A/2026-27, ದಿನಾಂಕ : 01.04.2026; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 16.20 ಲಕ್ಷ ; ಇ.ಎಂ.ಡಿ. ರೂ. 32,400/- ; ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ : 04 ತಿಂಗಳು,** ಟೆಂಡರ್ ಡಾಕ್ಯುಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ : 10.04.2026; ಮುಕ್ತಾಯದ ದಿನಾಂಕ : 28.04.2026.**

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್ : www.isro.gov.in ನಲ್ಲಿ ವಿವರವಾದ ಇ-ಟೆಂಡರ್ ಆಹ್ವಾನ ಸೂಚನೆ (NIET) ಅನ್ನು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಸಮೂಹ ನಿರ್ದೇಶಕರು
ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಸಿ & ಎಂ.ಜಿ.)
ಯು.ಆರ್.ಎಸ್.ಸಿ., ಬೆಂಗಳೂರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–504/104/2025–26 ದಿನಾಂಕ: 09.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ಕೆ.ಭಾರತಿ ಮತ್ತು ಇತರರು ನಂ.114, 10ನೇ ಮುಖ್ಯ ರಸ್ತೆ, ಗಣೇಶ್ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–560 096	ಯಲಹಂಕ	ಹೆಸರಘಟ್ಟ	ರಾಜಾನಕುಂಟೆ	13/1	0ಎ–22 ಗುಂ	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಾಣಿಜ್ಯ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ. ನಿವೇಶನ ಖಾತೆ ನಂ.31–511–371, ವಾರ್ಡ್ ನಂ.20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಪಿಎ/ಟಿಪಿ/ಭೂಉಬ/175/2025–26/36 ದಿನಾಂಕ:04.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಬಿನ್ ಸಿ.ಮುನಿನಾರಾಯಣಪ್ಪ	ದೇವನಹಳ್ಳಿ	ಕಸಬಾ	ದೇವನಹಳ್ಳಿ	117/2	0-31	ವ್ಯವಸಾಯ	ವಾಣಿಜ್ಯ
2.	ಶ್ರೀ ಸಿ ಮುನಿನಾರಾಯಣಪ್ಪ ಬಿನ್ ಲೇ॥ ಚಿಕ್ಕಪ್ಪಯ್ಯ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	10	2–37 + 0–13ಗು 'ಎ' ಖರಾಬು	ವ್ಯವಸಾಯ	ವಾಣಿಜ್ಯ
3.	ಶ್ರೀ ಜಿ.ವೇಣುಗೋಪಾಲ್ ಬಿನ್ ಗುಂಡಪ್ಪ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	57/5	0-07	ವ್ಯವಸಾಯ	ವಾಣಿಜ್ಯ
4.		ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	57/6	0-07.08	ವ್ಯವಸಾಯ	ವಾಣಿಜ್ಯ
5.		ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	57/7	0-05.08	ವ್ಯವಸಾಯ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನುಗಳ ಪರಿಸರದಲ್ಲಿ ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂಧ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು ವ್ಯವಸಾಯ ಭೂಉಪಯೋಗ ವಲಯ ದಿಂದ ವಾಣಿಜ್ಯ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ಡಿಐಪಿಆರ್/ಸಿಪಿ/136/ಸಿಸಿಎಲ್/2026–27

'ಮಳೆಗಾಲಕ್ಕೂ ಮುನ್ನ ಹೂಳೆತ್ತಲು ಸೂಚನೆ'

ಮುಂಗಾರು ಪೂರ್ವ ಸಿದ್ಧತೆ, ಜಿಬಿಎಯಲ್ಲಿ ಇಲಾಖೆಗಳ ಅಧಿಕಾರಿಗಳ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಬಿಎ ವ್ಯಾಪ್ತಿಯ ರಾಜಕಾಲುವೆಗಳಲ್ಲಿ ಹೂಳೆತ್ತುವ ಮೊದಲು ಮತ್ತು ನಂತರ ಡ್ರೋನ್ ಮೂಲಕ ಸಮೀಕ್ಷೆ ನಡೆಸಿ ವರದಿ ನೀಡಬೇಕು' ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಂಗಾರು ಪೂರ್ವ ಮಳೆ ಎದುರಿಸುವ ಕುರಿತು ಜಿಬಿಎ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, 'ಮಳೆ ನೀರು ಸರಾಗವಾಗಿ ಹರಿಯಲು ಎಲ್ಲೆಲ್ಲಿ ಅಡೆತಡೆಗಳು ಬರುತ್ತವೆ ಎಂಬುದನ್ನು ಡ್ರೋನ್ ಮೂಲಕ ಗುರುತಿಸಿದರೆ ದುರಸ್ತಿ ಕಾರ್ಯ ಕೈಗೊಳ್ಳಲು ಸಹಕಾರಿಯಾಗಲಿದೆ. ನಗರದಲ್ಲಿನ ಪ್ರಮುಖ ರಾಜಕಾಲುವೆಗಳಲ್ಲಿ ಆದ್ಯತೆ ಮೇರೆಗೆ ಹೂಳೆತ್ತುವ ಕೆಲಸ ಕೈಗೊಳ್ಳಬೇಕು' ಎಂದು ತಿಳಿಸಿದರು.

> ಆಯಾ ನಗರಪಾಲಿಕೆ ವ್ಯಾಪ್ತಿಯ ಹಿರಿಯ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸ್ ಅಧಿಕಾರಿಗಳು ಪ್ರವಾಹ ಪೀಡಿತ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆಗಳನ್ನು ಬಗೆಹರಿಸಬೇಕು
>
> **ತುಷಾರ್ ಗಿರಿನಾಥ್,** ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ

ರಾಜಕಾಲುವೆ ಬಳಿ ಸಿಸಿಟಿವಿ ಕ್ಯಾಮೆರಾ

ಜಿಬಿಎ ಮುಖ್ಯ ಆಯುಕ್ತ ಎಂ.ಮಹೇಶ್ವರ್ ರಾವ್ ಮಾತನಾಡಿ, 'ರಾಜಕಾಲುವೆಗಳ ಬಳಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಕೆ.ಎಸ್.ಎನ್.ಡಿ.ಎಂ.ಸಿ ಅವರೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಬೇಕು' ಎಂದು ಸೂಚನೆ ನೀಡಿದರು.

'ರಸ್ತೆ ಬದಿ ಚರಂಡಿಗಳಲ್ಲೂ ಹೂಳು ಎತ್ತಿ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ರಸ್ತೆ ಮೇಲೆ ಬೀಳುವ ಮಳೆನೀರು ಪಕ್ಕದ ಚರಂಡಿಗಳಲ್ಲಿ ಸರಾಗವಾಗಿ ಹರಿದು ಹೋಗುವಂತೆ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

ನೋಡಲ್ ಅಧಿಕಾರಿ ನಿಯೋಜಿಸಿ: 'ಮಳೆಗಾಲ ಪ್ರಾರಂಭವಾಗುವುದಕ್ಕೂ ಮುನ್ನ ನಗರ ಪಾಲಿಕೆ ನಿಯಂತ್ರಣ ಕೊಠಡಿಗಳಿಗೆ ಪಾಲಿಕೆ, ಬೆಸ್ಕಾಂ ಹಾಗೂ ಜಲಮಂಡಳಿ ಅಧಿಕಾರಿಗಳನ್ನು ನಿಯೋಜಿಸಲು ಕ್ರಮ ಕೈಗೊಳ್ಳಬೇಕು. ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ಅಧಿಕಾರಿಗಳ ಪಟ್ಟಿಯನ್ನು ಸಿದ್ಧಪಡಿಸಬೇಕು. ಉಪ ವಿಭಾಗ ಮಟ್ಟದಲ್ಲಿನ ನಿಯಂತ್ರಣ ಕೊಠಡಿಗಳನ್ನು ಕಾರ್ಯಗತಗೊಳಿಸಿ, ಮಳೆಗಾಲಕ್ಕೆ ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ಸಿದ್ಧವಾಗಿಡಬೇಕು' ಎಂದು ತುಷಾರ್ ಗಿರಿನಾಥ್ ತಿಳಿಸಿದರು.

'ನಗರಪಾಲಿಕೆ ವ್ಯಾಪ್ತಿಯ ಅಗ್ನಿಶಾಮಕ ಠಾಣೆಗಳೊಂದಿಗೆ ಸಮನ್ವಯ ಸಾಧಿಸಿ ವಾಟ್ಸ್ ಆ್ಯಪ್ ಗುಂಪುಗಳನ್ನು ರಚಿಸಿಕೊಳ್ಳಬೇಕು. ಜಲಮಂಡಳಿ, ಮೆಟ್ರೊ, ರೈಲ್ವೆ, ಕೆ-ರೈಡ್ ಸೇರಿದಂತೆ ವಿವಿಧ ಇಲಾಖೆಗಳ ಕಾಮಗಾರಿ ಸ್ಥಳಗಳಲ್ಲಿ ನೀರು ಹರಿವಿಗೆ ಉಂಟಾಗುವ ಅಡಚಣೆಗಳನ್ನು ತಕ್ಷಣ ತೆರವುಗೊಳಿಸಬೇಕು' ಎಂದರು.

ಬಿಡಿಎ ಆಯುಕ್ತ ಪಿ.ಮಣಿವಣ್ಣನ್, ಪಾಲಿಕೆ ವಿಶೇಷ ಆಯುಕ್ತರಾದ ಸುಷ್ಮಾ ಗೋಡಬೋಲೆ, ಜಲಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್, ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ಪೊಮ್ಮಲ ಸುನೀಲ್ ಕುಮಾರ್, ಡಿ.ಎಸ್.ರಮೇಶ್, ಕೆ.ಎನ್.ರಮೇಶ್, ಡಾ.ಕೆ.ವಿ.ರಾಜೇಂದ್ರ, ಬಿ.ಎಸ್.ಡಬ್ಲ್ಯುಎಂ.ಎಲ್ ಸಿಇಒ ಕರೀಗೌಡ ಉಪಸ್ಥಿತರಿದ್ದರು.

ಮಳೆಗಾಲಕ್ಕೂ ಮುನ್ನ ಕಾಮಗಾರಿ ಪೂರ್ಣಗೊಳಿಸಿ

ಬೆಂಗಳೂರು: ರೇಷ್ಮೆ ಮಂಡಳಿ ಜಂಕ್ಷನ್‌ನಲ್ಲಿ ಮಳೆಗಾಲದಲ್ಲಿ ಪ್ರವಾಹ ಸ್ಥಿತಿ ಸೃಷ್ಟಿಯಾಗುವುದನ್ನು ತಪ್ಪಿಸಲು ಕೈಗೊಂಡಿರುವ ಕಾಮಗಾರಿಯನ್ನು ಮಳೆಗಾಲ ಆರಂಭವಾಗುವ ಮುಂಚೆ ಪೂರ್ಣಗೊಳಿಸುವಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಪ್ರವಾಹಕ್ಕೆ ಒಳಗಾಗುವ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಅವರು ಮಾತನಾಡಿದರು. ಮೊದಲ ಹಂತದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಯನ್ನು ಏಪ್ರಿಲ್ ಕೊನೆಯೊಳಗೆ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಬೇಕು ಎಂದರು.

ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಮಾತನಾಡಿ, 'ಡಬಲ್ ಡೆಕರ್ ಮೇಲ್ಸೇತುವೆಯಲ್ಲಿ ಸಂಚಾರಕ್ಕೆ ಶೀಘ್ರವೇ ಅನುವು ಮಾಡಿಕೊಡಲು ಕ್ರಮ ವಹಿಸಬೇಕು. ಪಿಲ್ಲರ್ ಕಾಮಗಾರಿ ಪೂರ್ಣಗೊಂಡಿರುವ ಕಡೆ ಬ್ಯಾರಿಕೇಡ್ ತೆಗೆದು ರಸ್ತೆ ಅಭಿವೃದ್ಧಿಪಡಿಸಬೇಕು. ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು' ಎಂದು ಸೂಚನೆ ನೀಡಿದರು.

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅಭಿಮತ

'ಪ್ರಜಾಪ್ರಭುತ್ವ ನೆಪದಲ್ಲಿ ಸರ್ವಾಧಿಕಾರಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಪ್ರಭುತ್ವ ಅಪಹರಿಸಲ್ಪಟ್ಟಾಗ, ಪ್ರಜಾಪ್ರಭುತ್ವದ ನೆಪದಲ್ಲಿ ಸರ್ವಾಧಿಕಾರಿಗಳು ಹುಟ್ಟಿಕೊಳ್ಳುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಸರ್ವಾಧಿಕಾರಿ. ಇದು ವಾಸ್ತವ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮಾಧ್ಯಮ ಅಕಾಡೆಮಿ ಶುಕ್ರವಾರ ಆಯೋಜಿಸಿದ್ದ 'ಸಾಮಾಜಿಕ ನ್ಯಾಯ ಪರಿಕಲ್ಪನೆಗೆ ಇಂದಿನ ಮಾಧ್ಯಮಗಳು ಸಂವೇದನಾಶೀಲವಾಗಿವೆಯೇ?' ಎಂಬ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಈ ಶಕ್ತಿಯನ್ನು ಹಿಮ್ಮೆಟ್ಟಿಸುವುದು ಹೇಗೆ? ಸಾಮಾಜಿಕ ನ್ಯಾಯ ಮತ್ತು ಸಂವಿಧಾನವನ್ನು ರಕ್ಷಿಸುವುದು ಹೇಗೆ? ಎಂಬುದು ನಮ್ಮ ಮುಂದಿರುವ ಸವಾಲುಗಳು. ಸಮಾಜದಲ್ಲಿನ ಅಸ್ಪೃಶ್ಯತೆ, ಅನ್ಯಾಯದ ವಿರುದ್ಧ ಹಾಗೂ ಶೋಷಿತರ ಪರ ಧ್ವನಿ ಎತ್ತಿದ್ದ ಅಂಬೇಡ್ಕರ್, ನೂರಾರು ಲೇಖನಗಳನ್ನು ಬರೆದು ಜಾಗೃತಿ ಮೂಡಿಸಿದರು' ಎಂದು ತಿಳಿಸಿದರು.

ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು. ಎಂ. ಸಹನಾ, ಕೋಟಿಗಾನಹಳ್ಳಿ ರಾಮಯ್ಯ, ಪುರುಷೋತ್ತಮ ಬಿಳಿಮಲೆ, ಬಿ. ರಮೇಶ್, ಕೆ. ವೆಂಕಟೇಶ್, ಆಯೇಶಾ ಖಾನಂ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಮುಂದಿನ ಪ್ರಭುತ್ವ ಭಾರತ ನಿರ್ಮಾಣಕ್ಕಾಗಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಅವರ ಬರಹ ಒಂದು ಮ್ಯಾಜಿಕ್ ಇದ್ದಂತೆ. ಸಮಾಜಶಾಸ್ತ್ರಕ್ಕೆ ಅವರು ಹೆಚ್ಚು ಕೊಡುಗೆ ನೀಡಿದ್ದಾರೆ. ದೇಶ ಪ್ರೇಮಿ, ಮಾನವ ಪ್ರೇಮಿ ಹಾಗೂ ಸಮಾನತೆಯ ಪ್ರೇಮಿಯಂತಹ ಮಹಾನ್ ಚೇತನ ಭಾರತದ ನೆಲದಲ್ಲಿ ಹುಟ್ಟಿದ್ದು ಎಂಬುದೇ ರೋಮಾಂಚನ ಎಂದರು.

ಪತ್ರಿಕೋದ್ಯಮದ ವಿದ್ಯಾರ್ಥಿಗಳು ಅಂಬೇಡ್ಕರ್ ಪುಸ್ತಕಗಳನ್ನು ಓದಬೇಕು. ಪ್ರಾಥಮಿಕ ಶಿಕ್ಷಣದಿಂದಲೇ ಅವರ ಬಗ್ಗೆ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, '2011ರ ಜನಗಣತಿ ಪ್ರಕಾರ ದೇಶದಲ್ಲಿ 19,568 ಭಾಷೆಗಳಿವೆ. ಅಂದರೆ ಇಷ್ಟು ಸಂಖ್ಯೆಯ ಸಂಸ್ಕೃತಿಗಳಿವೆ ಎಂದರ್ಥ. ಎಲ್ಲಾ ಸಂಸ್ಕೃತಿಗಳನ್ನು ಅಸಮಾನ ನೆಲೆಗಟ್ಟಿನ ಮೇಲೆ ನಿಲ್ಲಿಸಿ ವ್ಯಾಖ್ಯಾನಿಸಲಾಗಿದೆ' ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭಾರತದಲ್ಲಿ 384 ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಈ ಪೈಕಿ 74 ಪತ್ರಿಕೆಗಳನ್ನು 1898ರಲ್ಲಿ ಬ್ರಿಟಿಷರು ನಿಷೇಧ ಮಾಡಿದ್ದರು. ವಿಶೇಷವೆಂದರೆ ಒಂದೇ ಒಂದು ಆಂಗ್ಲ ಪತ್ರಿಕೆ ನಿಷೇಧಿಸಿರಲಿಲ್ಲ. ದೇಸಿ ಮಾಧ್ಯಮ ಎಷ್ಟು ಮಹತ್ವದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ವಿವರಿಸಿದರು.

ಸ್ವಾತಂತ್ರ್ಯ ಬಂದು ಏಳು ದಶಕ ಕಳೆದರೂ ಅಸ್ಪೃಶ್ಯತೆ ಆಚರಣೆ ನಿಂತಿಲ್ಲ, ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಕಡಿಮೆ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕುಲಪತಿ ಬಿ.ರಮೇಶ್ ಮಾತನಾಡಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ, ಕಾರ್ಯದರ್ಶಿ ಎಂ.ಸಹನಾ, ಸದಸ್ಯರಾದ ವೆಂಕಟೇಶ್, ಮಮತಾ, ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ತಾಂಡವಗೌಡ ಹಾಜರಿದ್ದರು.

ದೀಕ್ಷಾ ವೇದಾಂತುಗೆ ಉತ್ತಮ ಫಲಿತಾಂಶ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ದೀಕ್ಷಾ ವೇದಾಂತು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ 21 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 4 ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ಪಡೆದಿದ್ದಾರೆ.

ದೀಕ್ಷಾ ವೇದಾಂತುವಿನ (ಇಂದಿರಾನಗರ) ಸಂಜನಾ ಕಾರ್ತಿಕ್ ಹಾಗೂ ದೀಕ್ಷಾ ವೇದಾಂತು ಮುಖ್ಯ ಕ್ಯಾಂಪಸ್‌ನ ಸುಘೋಷ್ ಜೋಶಿ 596 ಅಂಕಗಳೊಂದಿಗೆ ರಾಜ್ಯಕ್ಕೆ 4ನೇ ಸ್ಥಾನ ಪಡೆದುಕೊಂಡಿದ್ದಾರೆ. ಕನ್ಯಾಕಾಂತಿ ಶ್ರೀ ಮೌಕ್ತಿ 595 ಅಂಕಗಳೊಂದಿಗೆ ರಾಜ್ಯಕ್ಕೆ 5ನೇ ಸ್ಥಾನಗಳಿಸಿದ್ದಾರೆ.

ವಾಣಿಜ್ಯ ವಿಭಾಗ: ದೀಕ್ಷಾ ವೇದಾಂತುವಿನ ಅಂಗ ಸಂಸ್ಥೆಯಾದ ತ್ರಿಶಾ ವಿದ್ಯಾ ಪದವಿ ಪೂರ್ವ ಕಾಲೇಜಿನ ಭೂಮಿಕಾ ಎನ್.ಎ. ಮತ್ತು ಸುಹಾನಿ 595 ಅಂಕಗಳೊಂದಿಗೆ ರಾಜ್ಯಕ್ಕೆ 6ನೇ ಸ್ಥಾನ ಪಡೆದಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಶ್ರೀಧರ್ ಜಿ. ಅವರು ತಿಳಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದ ದೀಕ್ಷಾ ವೇದಾಂತುವಿನ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು

ಪಿಯುಸಿ ಸಾಧಕರು

ಅಭಿನವ್ ಕೆ.ಮೂರ್ತಿ (ಶೇ 98.66), (ವಾಣಿಜ್ಯ), ಜೈನ್ ಕಾಲೇಜು, ವಿ.ವಿ.ಪುರ, ಬೆಂಗಳೂರು

ಹರ್ಷ ಎಸ್. (ಶೇ 98), (ವಾಣಿಜ್ಯ) ಎಪಿಎಸ್ ಪಿಯು ಕಾಲೇಜು, ಬೆಂಗಳೂರು

ಪಿಯು ಫಲಿತಾಂಶ: ಕ್ರೈಸ್ ಶಾಲೆಗಳ ಪಾರುಪತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ವ್ಯಾಪ್ತಿಯ ವಸತಿ ಕಾಲೇಜುಗಳಿಗೆ ಶೇ 97.22 ಫಲಿತಾಂಶ ಬಂದಿದ್ದು, ಪರೀಕ್ಷೆ ಬರೆದಿದ್ದ 5,103 ವಿದ್ಯಾರ್ಥಿಗಳಲ್ಲಿ 4,961 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಈ ಕುರಿತು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, 'ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿ ಶಿಕ್ಷಣ ಸಿಗಬೇಕು ಎನ್ನುವ ಕಾರಣಕ್ಕೆ ದ್ವಿತೀಯ ಪಿಯುನಲ್ಲಿ ವಿಜ್ಞಾನ ವಿಷಯಕ್ಕೆ ಆದ್ಯತೆ ನೀಡಲಾಗಿದೆ. 2025–26ನೇ ಸಾಲಿನಲ್ಲಿ 72 ಕಾಲೇಜುಗಳ ವಿದ್ಯಾರ್ಥಿಗಳು ಪಿಯು ಪರೀಕ್ಷೆ ಬರೆದಿದ್ದರು' ಎಂದು ಮಾಹಿತಿ ನೀಡಿದರು.

2024–25ನೇ ಸಾಲಿಗಿಂತ (ಶೇ 91.64) ಈ ಬಾರಿ ಶೇ 5.58ರಷ್ಟು ಹೆಚ್ಚು ಫಲಿತಾಂಶ ಬಂದಿದೆ. ದ್ವಿತೀಯ ಪಿಯು ರಾಜ್ಯದ ಒಟ್ಟಾರೆ ಫಲಿತಾಂಶಕ್ಕಿಂತ (ಶೇ 86.48) ಕ್ರೈಸ್‌ನ ವಸತಿ ಕಾಲೇಜುಗಳ ಫಲಿತಾಂಶ ಶೇ 10.74ರಷ್ಟು ಹೆಚ್ಚು ಇದೆ. 2,321 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 2,487 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. 34 ವಸತಿ ಶಾಲೆಗಳಿಗೆ ಶೇ 100ರಷ್ಟು ಫಲಿತಾಂಶ ಬಂದಿದೆ ಎಂದರು.

ಮಹದೇವಪ್ಪ

ವಸತಿ ಕಾಲೇಜುಗಳ ಸಂಖ್ಯೆಯನ್ನು ಪ್ರತಿ ವರ್ಷ 30–35ರಷ್ಟು ಹೆಚ್ಚಿಸಲಾಗುತ್ತಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಶಿಕ್ಷಣದ ಗುಣಮಟ್ಟ ಹೆಚ್ಚಳ, ಕಾಲೇಜು ಆರಂಭದಿಂದಲೇ ವಿದ್ಯಾರ್ಥಿಗಳಿಗೆ ಯೋಜಿತ ರೀತಿಯ ಸಿದ್ಧತೆ ನಡೆಸಲು ಅಗತ್ಯ ವಾತಾವರಣ ಕಲ್ಪಿಸಲಾಗಿದೆ ಎಂದು ಹೇಳಿದರು.

ಅಂಕಿತ್‌ಗೆ ₹5 ಲಕ್ಷ ನಗದು ಪುರಸ್ಕಾರ

ಅಂಕಿತ್

ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿರುವ ಬೆಳಗಾವಿ ಜಿಲ್ಲೆ ನಿಡಸೋಸಿ ಮೊರಾರ್ಜಿ ದೇಸಾಯಿ ವಿಜ್ಞಾನ ಪದವಿಪೂರ್ವ ವಸತಿ ಕಾಲೇಜಿನ ವಿದ್ಯಾರ್ಥಿ ಅಂಕಿತ್ ಭೀಮಪ್ಪ ಕಾರಟಗಿ (ಶೇ99.66) ಅವರಿಗೆ ₹5 ಲಕ್ಷ ನಗದು ಬಹುಮಾನ ನೀಡುವುದಾಗಿ ಸಚಿವ ಮಹದೇವಪ್ಪ ಹೇಳಿದರು. ಅಂಕಿತ್ ಸೇರಿದಂತೆ ಅತ್ಯುತ್ತಮ ಸಾಧನೆ ಮಾಡಿದ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಏ.14ರಂದು ವಿಧಾನಸೌಧದಲ್ಲಿ ನಡೆಯುವ ಅಂಬೇಡ್ಕರ್ ಅವರ ಜನ್ಮದಿನದಂದು ಸನ್ಮಾನಿಸಲಾಗುವುದು ಎಂದರು.

'ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ಸಮಾಜದಲ್ಲಿ ಬದಲಾವಣೆ'

ಬೆಂಗಳೂರು: 'ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ಸಮಾಜದಲ್ಲಿ ಬದಲಾವಣೆ ಸಾಧ್ಯವಾಗಲಿದ್ದು, ಇದರಲ್ಲಿ ಕಾನೂನು ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಾಗಿದೆ' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ ಅಖಿಲ ಭಾರತ ಕಾನೂನು ಮತ್ತು ಸಾಂಸ್ಕೃತಿಕ ಉತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ, ಪ್ರಾಂಶುಪಾಲರಾದ ವಿ.ಸುದೇಶ್, ಡೀನ್ ಸತೀಶ್ ಗೌಡ ಎನ್., ವಿಭಾಗದ ಮುಖ್ಯಸ್ಥರಾದ ಜ್ಯೋತಿ ವಿಶ್ವನಾಥ್, ಚಿತ್ರನಟ ವಿನಯ್ ಗೌಡ, ಚಂದ್ರಕಾಂತಿ ಎಲ್., ದೀಕ್ಷಾ ಮಂಜುನಾಥ್ ಉಪಸ್ಥಿತರಿದ್ದರು.

ಕ್ರಿಕೆಟ್ ಆಟಗಾರ್ತಿ ಶ್ರೇಯಾಂಕ ಪಾಟೀಲ, 'ಡಾ.ಬ್ರೊ' ಖ್ಯಾತಿಯ ಗಗನ್ ಭಾಗಿ

ವಂಡರ್‌ಲಾದಲ್ಲಿ 'ಗರುಡ ಗ್ಲೈಡ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರ ವಲಯದಲ್ಲಿರುವ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ 'ಗರುಡ ಗ್ಲೈಡ್' ಎಂಬ ನೂತನ ರೈಡ್‌ಗೆ ಕ್ರಿಕೆಟ್ ಆಟಗಾರ್ತಿ ಶ್ರೇಯಾಂಕ ಪಾಟೀಲ ಹಾಗೂ ಗೋ ಪ್ರವಾಸ ಸಂಸ್ಥಾಪಕ 'ಡಾ.ಬ್ರೊ' ಖ್ಯಾತಿಯ ಗಗನ್ ಶ್ರೀನಿವಾಸ್ ಅವರು ಶುಕ್ರವಾರ ಚಾಲನೆ ನೀಡಿದರು.

ವಂಡರ್‌ಲಾ ಹಾಲಿಡೇಸ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ. ಚಿಟ್ಟಿಲಪ್ಪಿಲ್ಲಿ ಮಾತನಾಡಿ, 'ಗರುಡ ಗ್ಲೈಡ್ ಎಂಬುದು ಅತ್ಯಾಧುನಿಕ ರೋಲರ್ ಕೋಸ್ಟರ್ ಆಗಿದೆ. ಇದನ್ನು ನೆದರ್‌ಲ್ಯಾಂಡ್‌ನ ವೆಕೋಮಾ ಸಂಸ್ಥೆ ವಿನ್ಯಾಸಗೊಳಿಸಿದ್ದು, ₹34 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ವಂಡರ್‌ಲಾ ಬೆಂಗಳೂರಿನಲ್ಲಿ ಈಗ ಎರಡು ಬೃಹತ್ ಇನ್ವರ್ಷನ್ (ತಲೆಕೆಳಗಾಗುವ) ರೋಲರ್ ಕೋಸ್ಟರ್ ರೈಡ್‌ಗಳನ್ನು (ರಿಕಾಯಿಲ್ ಮತ್ತು ಗರುಡ ಗ್ಲೈಡ್) ಹೊಂದಿದೆ' ಎಂದು ಮಾಹಿತಿ ನೀಡಿದರು.

ಶ್ರೇಯಾಂಕ ಪಾಟೀಲ, ಗಗನ್ ಶ್ರೀನಿವಾಸ್ ಹಾಗೂ ಅರುಣ್ ಕೆ. ಚಿಟ್ಟಿಲಪ್ಪಿಳ್ಳಿ ಅವರು ಗರುಡ ಗ್ಲೈಡ್ಸ್ ರೈಡ್‌ಗೆ ಚಾಲನೆ ನೀಡಿದರು

'ಗಾಳಿಯಲ್ಲಿ ತೂಗಾಡುತ್ತಾ ವೇಗದಲ್ಲಿ ಸಾಗುವ ಈ ರೈಡ್, ಪ್ರವಾಸಿಗರಿಗೆ ರೋಚಕ ಅನುಭವ ನೀಡಲಿದೆ. ಈ ರೈಡ್‌ನ ಅಳವಡಿಕೆ ಮತ್ತು ಸಂಯೋಜನೆಯನ್ನು ವಂಡರ್‌ಲಾ ಸ್ವಂತ ಎಂಜಿನಿಯರಿಂಗ್ ತಂಡ ನಿರ್ವಹಿಸಿದೆ. ಇದು ಅತ್ಯುನ್ನತ ಜಾಗತಿಕ ಸುರಕ್ಷತಾ ಮಾನದಂಡಗಳು ಮತ್ತು ನಿಖರತೆಯೊಂದಿಗೆ ಕಾರ್ಯ ನಿರ್ವಹಿಸುತ್ತದೆ' ಎಂದು ಮಾಹಿತಿ ನೀಡಿದರು.

ಸಿಒಒ ಧೀರನ್ ಚೌಧರಿ ಹಾಗೂ ವಂಡರ್‌ಲಾ ಬೆಂಗಳೂರು ಪಾರ್ಕ್‌ನ ಮುಖ್ಯಸ್ಥ ಎಚ್.ಎಸ್. ರುದ್ರೇಶ್ ಮಾತನಾಡಿ, 'ಗರುಡ ಗ್ಲೈಡ್ ರೈಡ್ ಸುಮಾರು 662 ಮೀಟರ್ ಉದ್ದದ ಸ್ಟೀಲ್ ಹಳಿಯ ಮೇಲೆ ಗಂಟೆಗೆ 80 ಕಿ.ಮೀ ವೇಗದಲ್ಲಿ ಸಾಗುತ್ತದೆ. 31 ಮೀಟರ್ ಎತ್ತರಕ್ಕೆ ಏರುವ ಸಾಮರ್ಥ್ಯ ಹೊಂದಿದ್ದು, 130 ಸೆಕೆಂಡ್‌ಗಳ ಪ್ರಯಾಣವು ರೋಚಕತೆಯಿಂದ ಕೂಡಿರಲಿದೆ. ಇಲ್ಲಿ ಎರಡು ರೈಲುಗಳು ಏಕಕಾಲದಲ್ಲಿ ಚಲಿಸುತ್ತವೆ. ಪ್ರತಿಯೊಂದು ರೈಲಿನಲ್ಲಿ 14 ಸವಾರರು ಕುಳಿತುಕೊಳ್ಳಲು ಅವಕಾಶ ಇದೆ' ಎಂದು ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Flat

Lavelle Road

WANTED 4-BHK Flat for Purchase in Central Bangalore. Preferably New construction. Owners may directly contact 9986277447

Sites

Banashankari

BDA SITES WANTED ARKAVATI, ANJANAPURA, BANASHANKARI 6TH STAGE, VISHWESHWARAIAH KEMPEGOWDA ANY BDA LAYOUT: 9845062822/ 8660751654

"URGENTLY REQUIRED Residential 40x60`& 50x80 Sites Banashankari 2nd Stage, 3rd-Stage, Jayanagar Good Locations Genuine Owners Call: 9019533999/ 9900275599"

MORE Classifieds IN SUPPLEMENT

New International Airport Road

REQUIRED 2 to 3 Guntas Land with or without House for Purchase In Sadahalli (Bangalore North). Owners may directly contact 9986277447

JOB OPPORTUNITIES

Multiple Vacancy

LEADING CIVIL Constn. Co. based in Bangalore, wantes 1) CIVIL ENGINEERS 5- 7, 3- 5 & 1- 2 yrs Exp. 2) CIVIL SUPERVISORS 3- 5 yrs Exp.. 3) Store Keepers 3- 5 yrs Exp. Attractive salary for deserving candidates who can join immeidately or before 01.05.26 only need to apply. Contact:- 080- 42212228/ 8217353581.

Wanted

ENGLISH, INTERPERSONAL skill, 18000/-SCHOOL, Mahadevapura, Hsr, Marathalli, electroniccity, Ramurthynagar, channasandra, 9742751530

EDUCATIONAL

Distance Education

CHEMISTRY PLUS2 Boards, JEE, NEET Online by reputed tutor from Kolkata. Chatterjee Sir Mob: 9674959386

PERSONAL

Change of Name

CHANGE OF NAME
I, **SACHIN** alias **SACHIN S KULKARNI,** residing at Salarpuria Sattva Anugraha Tower4, 301, 3rd Floor, 9th Cross, Cauvery Nagar, Vijaynagar, Bengaluru- 560079, have changed my name to **SACHIN KULKARNI,** vide affidavit dated 09.04.2026 before notary H R Karunakara, Bengaluru.

CHANGE OF NAME
I, **MOHOMAD HUSSAIN,** S/o Hussain Mohamad, aged about 76 years, R/a No. 203, Metro Politian Spencer Cross Road, Pulikeshi Nagar, Frazer Town, Bengaluru - 560005, hereby declare that the my wife name is wrongly mentioned as **HAZRA** in my passport (No.N3435848) records. The correct name of my wife is **HAZERA BAI MOHOMAD HUSSAIN.** Henceforth, be referred to as **HAZERA BAI MOHOMAD HUSSAIN** in all future reference vide affidavit dated 09th April 2026 sworn before notary K. Venkateshan, Bengaluru.

I, AMBIKA T.R, W/o D.S Rohit Kumar, aged about 43 years, R/at No. 14, 5th Cross, 4th Block, Near Subramanya Swamy temple, kumara Park West, Seshadripuram, Bangalore- 560020, i here by declare that AMBIKA T.R and DODDAMANE ROHIT KUMAR AMBIKA, both names belong to me only, Vide affidavit Dated 23-03-2026 Before notary K Mohan, Bangalore.

CHANGE OF NAME
I, **AMARASIMHA S.K.,** residing at #216, 2nd E Cross, 1st Phase, Girinagar, Bengaluru-560085 have changed my name to **AMAR SIMHA S K** vide affidavit dated 10-04-2026 before notary Jayappa A, Bengaluru. Henceforth I shall be called **AMAR SIMHA S K** only

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

‘ಪರಿಶ್ರಮ’ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶ್ರಮ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಕಾಲೇಜು ಆರಂಭವಾದ ಮೊದಲ ವರ್ಷವೇ ಉತ್ತಮ ಫಲಿತಾಂಶ ಪಡೆದಿರುವುದು, ಇಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದಕ್ಕೆ ಸಾಕ್ಷಿ. ಸಂಸ್ಥೆಯ ವ್ಯವಸ್ಥಿತ ಅಧ್ಯಯನ ಪದ್ಧತಿ, ಬೋಧನಾ ವಿಧಾನ ಹಾಗೂ ಪರೀಕ್ಷಾ ಕೇಂದ್ರೀಕೃತ ತರಬೇತಿ ವಿದ್ಯಾರ್ಥಿಗಳ ಈ ಸಾಧನೆಗೆ ಪ್ರಮುಖ ಕಾರಣ. ವಿದ್ಯಾರ್ಥಿಗಳ ಶ್ರದ್ಧೆ ಮತ್ತು ನಿರಂತರ ಅಭ್ಯಾಸ ಉತ್ತಮ ಫಲಿತಾಂಶ ನೀಡಿದೆ ಎಂದು ಕಾಲೇಜಿನ ಪತ್ರಿಕಾ ಪ್ರಕಟಣೆಯು ತಿಳಿಸಿದೆ.

‘ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಉತ್ತಮ ಮಾರ್ಗದರ್ಶನ ಹಾಗೂ ಪೋಷಕರು ನಮ್ಮ ಮೇಲಿಟ್ಟಿರುವ ನಂಬಿಕೆ ಹಾಗೂ ವಿಶ್ವಾಸವೇ ಈ ಯಶಸ್ಸಿನ ಮೂಲ. ವಿದ್ಯಾರ್ಥಿಗಳು ಸತತ ಎರಡು ವರ್ಷ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಿಂದ ದೂರವಿದ್ದು, ಶಿಸ್ತಿನ ಅಭ್ಯಾಸ ಮತ್ತು ಉತ್ತಮ ಮಾರ್ಗದರ್ಶನದ ಮೂಲಕ ಯಾವುದೇ ಗುರಿಯನ್ನು ಸಾಧಿಸಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ’ ಎಂದು ಸಂಸ್ಥಾಪಕ ಪ್ರದೀಪ್ ಈಶ್ವರ್ ತಿಳಿಸಿದ್ದಾರೆ.

ಕಾಲೇಜಿನ ವಿದ್ಯಾರ್ಥಿ ಲಿಖಿತ್ ಎನ್.ಆರ್. 595 (ಶೇ 99.1) ಅಂಕ ಗಳಿಸಿ ರಾಜ್ಯ ಮಟ್ಟದಲ್ಲಿ 4ನೇ ಸ್ಥಾನ ಪಡೆದಿದ್ದಾರೆ. ಹರ್ಷಿತಾ ಡಿ.ಎಂ. 587 (ಶೇ 97.83), ಐಶ್ವರ್ಯ ಬಿ. 586 (ಶೇ 97.5), ರಕ್ಷಿತ್ ಗೌಡ ಎಸ್.ಎಂ. 582 (ಶೇ 97) ಅಂಕ ಗಳಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ತೋರಿದ ಪರಿಶ್ರಮ ಪಿಯು ಕಾಲೇಜು ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಂಸ್ಥಾಪಕ ಪ್ರದೀಪ್ ಈಶ್ವರ್ ಸಿಹಿ ತಿನ್ನಿಸಿದರು

ಸುಚಿತಾ ಎಂ. | ಯಶ್ಮಿತಾ | ತಲಸಿಲಾ | ಪ್ರೇಕ್ಷಾ | ಅಶಿಕಾ | ತನ್ಮಯಿ

ದಕ್ಷತ್ | ಮಯೂರ್ | ತನುಶ್ರೀ | ಬಾಲಚಂದ್ರ | ವೈದೇಹಿ | ಮೇಘನಾ

ಪಿಯುಸಿ ಸಾಧಕರು

- ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆ: ಸುಚಿತಾ ಎಂ. (596), ಬಿ.ಯಶ್ಮಿತಾ(595), ತಲಸಿಲಾ ಶ್ರೀ (594), ಪ್ರೇಕ್ಷಾ ದಿವಾಕರ್ (594), ಅಶಿಕಾ ಮಡಿಶೆಟ್ಟಿ (594), ಎಂ.ತನ್ಮಯಿ (592), ಆರ್.ದಕ್ಷತ್ (592), ಮಯೂರ್ ಎಂ.ಹೆಗಡೆ (591), ಪಿ.ತನುಶ್ರೀ (591), ಎಂ.ಬಾಲಚಂದ್ರ (590), ವೈದೇಹಿ (590), ಎಂ.ಎಸ್. ಮೇಘನಾ (590), ಪುಷ್ಪಾಕವಿ ಎ. (590)
- ಶ್ರೀ ಚೈತನ್ಯ ಪಿಯು ಕಾಲೇಜು: ಕೆ.ಕಾವ್ಯ (580)

ಪುಷ್ಪಾಕವಿ

ಕಾವ್ಯ

ಅರಿಹಂತ್ ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ನಗರದ ಅರಿಹಂತ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಅಡಿ ಕಾರ್ಯನಿರ್ವಹಿಸುತ್ತಿರುವ ಅರಿಹಂತ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಕಾಲೇಜಿನ ಶೇ 42ರಷ್ಟು ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, ಶೇ 40ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ವಾಣಿಜ್ಯ ವಿಭಾಗದ ಮಹಕ್. ಎಂ. ಜೈನ್ (ಶೇ 99.16), ಹಿಮಾಂಶು ವಿ.ಚೌವಾಣ್(ಶೇ 98.50), ವಿಜ್ಞಾನ ವಿಭಾಗದ ಎಸ್.ತನುಶ್ರೀ (ಶೇ 98.20), ಆರ್. ಅಪೂರ್ವ(ಶೇ 97.50), ಪಿ. ಮೌಲ್ಯಶ್ರೀ (ಶೇ 97), ಎಸ್. ನವ್ಯಶ್ರೀ (ಶೇ 97), ವಾಣಿಜ್ಯ ವಿಭಾಗದ ಇಂದ್ರಕುಮಾರ್ (ಶೇ 96.83) ಅಂಕಗಳನ್ನು ಪಡೆದಿದ್ದಾರೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ವಾಣಿಜ್ಯ ವಿಭಾಗ

ಮಹಕ್ ಎಂ | ಹಿಮಾಂಶು | ಇಂದ್ರಕುಮಾರ್

ವಿಜ್ಞಾನ ವಿಭಾಗ

ತನುಶ್ರೀ | ಅಪೂರ್ವ | ಮೌಲ್ಯಶ್ರೀ | ನವ್ಯಶ್ರೀ

ಪಿಇಎಸ್ ಪಿಯು ಕಾಲೇಜು



ವಿಹಾನ್ ಪಿ ಜೈನ್ (591), ಕೆ.ಭಾಮತಿ (585), ಎಸ್.ಪ್ರಜ್ವಲ್ (584), ಕಾರ್ತಿಕೇ ತ್ರಿಪಾಠಿ (584), ಈಶ್ವರ್ ಭಟ್ (97), ಪ್ರೀತಮ್ ರವಿ ಸೇಟ್ (580), ಎನ್ ಖುಷಿ (577)

ಪ್ರಕೃತಿ (595), ಸಿ.ಸಾತ್ವಿಕ್ (594), ವಿ.ಚೈತನ್ಯ (593), ಎಸ್.ಮಹದೇವ ಪ್ರಸಾದ್ (593), ಋದ್ಧಿ ಸಂತೋಷ್ (592), ಎಂ.ಸೋನು (591), ಆರ್ಯ ಸಿ ಭಟ್ (598)

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಸ್ಥಾಪನೆ 1969

ನಂ.24, ಸುವರ್ಣ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104. ದೂ. 23300497 41159606, 23359600, ಇ–ಮೇಲ್ : jscbinfo@jscbl.bank.in

ಟೆಂಡರ್ ಪ್ರಕಟಣೆ

ಬ್ಯಾಂಕಿನ ಒಟ್ಟು 5 ಶಾಖೆಗಳಿಗೆ ಭದ್ರತಾ ಸಿಬ್ಬಂದಿ ಮತ್ತು ಗನ್ ಮ್ಯಾನ್ ಸೇವೆಗಳಿಗಾಗಿ ಟೆಂಡರ್ ಆಹ್ವಾನಿಸಿದ್ದು, ಸದರಿ ಸೇವೆಯನ್ನು ಒದಗಿಸುವ ಮತ್ತು ಸಂಬಂಧಿತ ಪ್ರಾಧಿಕಾರದಿಂದ ಅಧಿಕೃತ ಪರವಾನಿಗೆ ಪಡೆದಿರುವ ಆಸಕ್ತ ಭದ್ರತಾ ಏಜೆನ್ಸಿಗಳು ಬ್ಯಾಂಕಿನ ಕೇಂದ್ರ ಕಛೇರಿಯಿಂದ ಅರ್ಜಿಗಳನ್ನು ಪಡೆದು ದಿನಾಂಕ: **30.04.2026** ರ ಒಳಗೆ ಬ್ಯಾಂಕಿನ ಪ್ರಧಾನ ಕಛೇರಿಗೆ ಕಳುಹಿಸಬೇಕಾಗಿ ವಿನಂತಿಸಲಾಗಿದೆ. ತಮ್ಮ ಪ್ರಸ್ತಾವನೆಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ. ಬ್ಯಾಂಕಿನ ತೀರ್ಮಾನವೇ ಅಂತಿಮವಾಗಿರುತ್ತದೆ.

ದಿನಾಂಕ : 10.04.2026
ಸ್ಥಳ : ಬೆಂಗಳೂರು

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಜನತಾ ಸೇವಾ ಕೋ–ಅಪರೇಟಿವ್ ಬ್ಯಾಂಕ್ ಲಿ

ಚಿಟಿಕೆ ಸುದ್ದಿ

ಪೊಲೀಸ್ ಸಿಬ್ಬಂದಿಗೆ ಸೌಲಭ್ಯ ಕಲ್ಪಿಸಲು ಮನವಿ

ಬೆಂಗಳೂರು: ಸಿಗ್ನಲ್‌ಗಳಲ್ಲಿ ಕೆಲಸ ಮಾಡುವ ಸಂಚಾರ ವಿಭಾಗದ ಪೊಲೀಸರಿಗೆ ತಾತ್ಕಾಲಿಕ ನೆರಳು ವ್ಯವಸ್ಥೆ, ಮಾಸ್ಕ್ ಸೇರಿದಂತೆ ಮೂಲಸೌಲಭ್ಯ ಒದಗಿಸುವಂತೆ ಕೋರಿ, ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ಮನವಿ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಬಿಸಿಲಿನ ತಾಪಮಾನ ಹೆಚ್ಚಿದ್ದು ಅಗತ್ಯ ಸೌಕರ್ಯ ಕಲ್ಪಿಸಿಕೊಡಿ ಎಂದು ಕೋರಿದ್ದಾರೆ.

‘ಪ್ರಮುಖ ಜಂಕ್ಷನ್‌ಗಳು, ಪ್ರತಿಭಟನೆ, ಮೆರವಣಿಗೆಯಲ್ಲಿ ಬಂದೋಬಸ್ತ್‌ಗೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗುತ್ತದೆ. ಬಿಸಿಲು ಹಾಗೂ ಹೊಗೆಯಿಂದ ಸಿಬ್ಬಂದಿಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ತಕ್ಷಣವೇ ಅವರಿಗೆ ಮೂಲಸೌಲಭ್ಯ ಒದಗಿಸಬೇಕು’ ಎಂದು ವಿನಂತಿಸಿದ್ದಾರೆ.

ಜಾತಿ ನಿಂದನೆ ಆರೋಪ: ಮೂವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಲೈಂಗಿಕ ಕಿರುಕುಳ ಹಾಗೂ ಜಾತಿ ನಿಂದನೆ ಆರೋಪದ ಅಡಿ ಎಂಎಸ್‌ಐಎಲ್ ಚಿಟ್ ಫಂಡ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಸೇರಿ ಮೂವರ ವಿರುದ್ಧ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ವಿಶೇಷ ಪೊಲೀಸ್ ಠಾಣೆಯಲ್ಲಿ (ಪಶ್ಚಿಮ) ಎಫ್‌ಐಆರ್ ದಾಖಲಾಗಿದೆ.

ಎಂಟು ವರ್ಷಗಳಿಂದ ಕೆಲಸ ಮಾಡುತ್ತಿರುವ ಮಹಿಳೆ ನೀಡಿದ ದೂರಿನ ಮೇಲೆ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಚಂದ್ರಶೇಖರ್, ಉಪ ಪ್ರಧಾನ ವ್ಯವಸ್ಥಾಪಕಿ ನಳಿನಿ ಹಾಗೂ ಸಿಇಒ ವೀಣಾ ವಿರುದ್ಧ ಪ್ರಕರಣ ದಾಖಲಾಗಿದೆ.

‘ನನ್ನನ್ನು ಕೆಲಸದಿಂದ ತೆಗೆದು ಹಾಕುವ ಪಿತೂರಿ ನಡೆಸಿ ಚೆಕ್‌ಗಳು ಕಳೆದುಹೋಗಿವೆ ಎಂದು ಸುಳ್ಳು ಆರೋಪ ಮಾಡಲಾಗಿತ್ತು. ಚಂದ್ರಶೇಖರ್, ವೀಣಾ ಆದೇಶದಂತೆ ನಳಿನಿ ಅವರು ಭದ್ರತಾ ಸಿಬ್ಬಂದಿ ಸುಮತಿ ಅವರನ್ನು ಕರೆಸಿಕೊಂಡು ಪ್ರತ್ಯೇಕ ಕೊಠಡಿಗೆ ಕರೆದೊಯ್ದು ವಿವಸ್ತ್ರಗೊಳಿಸಿ ತಪಾಸಣೆ ನಡೆಸಲಾಗಿತ್ತು. ರಾತ್ರಿ 9ರವರೆಗೂ ಅಕ್ರಮವಾಗಿ ಬಂಧನದಲ್ಲಿ ಇರಿಸಲಾಗಿತ್ತು. ಚಂದ್ರಶೇಖರ್, ನಳಿನಿ ಅವರು, ಇತರರ ಎದುರು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಾರೆ’ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸುಳ್ಳು ಮಾಹಿತಿ ವಿಡಿಯೊ: ವ್ಯಕ್ತಿ ಸೆರೆ

‘ಝೂಂಬಿ’ ಡ್ರಗ್ಸ್ ಎಂದು ವಿಡಿಯೊ ಅಪ್‌ಲೋಡ್ ಮಾಡಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರು ‘ಝೂಂಬಿ’ ಡ್ರಗ್ಸ್ ತೆಗೆದುಕೊಂಡಿದ್ದಾರೆ ಎಂದು ಬಿಂಬಿಸುವ ವಿಡಿಯೊವನ್ನು ಸೆರೆಹಿಡಿದು ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದ ವಿದ್ಯಾರಣ್ಯಪುರದ ನಿವಾಸಿ ಹೇಮಂತ್ ಎಂಬವವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಹೇಮಂತ್

‘ಕೆಲಸವಿದ್ದ ಕಾರಣಕ್ಕೆ ಬಾಗಲೂರಿಗೆ ತೆರಳಿದ್ದೆ. ಕೆಲಸ ಮುಗಿದ ಮೇಲೆ ರಾಜಾನುಕುಂಟೆಗೆ ಹೋಗಲು ಬಾಗಲೂರು ಮುಖ್ಯರಸ್ತೆಯಲ್ಲಿ ಬರುತ್ತಿದ್ದೆ. ರಸ್ತೆ ಬದಿಯಲ್ಲಿ ನಿಂತಿದ್ದ ವ್ಯಕ್ತಿ ವಿಚಿತ್ರವಾಗಿ ವರ್ತಿಸುತ್ತಿದ್ದರು. ಅದರ ವಿಡಿಯೊ ಸೆರೆ ಹಿಡಿದಿದ್ದೆ. ಅವರು ‘ಝೂಂಬಿ’ ಡ್ರಗ್ಸ್ ತೆಗೆದುಕೊಂಡಿರಬಹುದು ಎಂದು ಭಾವಿಸಿ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹಾಕಿದ್ದೆ ಎಂಬುದಾಗಿ ಹೇಮಂತ್ ವಿಚಾರಣೆ ವೇಳೆ ತಿಳಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ದುನಿಯಾ ವಿಜಯ್, ಭಾಸ್ಕರ್ ರಾವ್‌ಗೆ ನೋಟಿಸ್?

‘ತಪ್ಪು ಮಾಹಿತಿಯುಳ್ಳ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆ ಮಾಡಿರುವ ನಟ ದುನಿಯಾ ವಿಜಯ್, ನಿವೃತ್ತ ನಗರ ಪೊಲೀಸ್ ಕಮಿಷನರ್ ಭಾಸ್ಕರ್ ರಾವ್ ಸೇರಿದಂತೆ 25 ಮಂದಿಗೆ ನೋಟಿಸ್ ಜಾರಿ ಮಾಡಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆಧಾರ ರಹಿತ ವಿಡಿಯೊಗಳನ್ನು ಹಂಚಿಕೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ವಿಡಿಯೊದಲ್ಲಿ ಇರುವ ವ್ಯಕ್ತಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಆತ ‘ಝೂಂಬಿ’ ಡ್ರಗ್ಸ್ ತೆಗೆದುಕೊಂಡಿಲ್ಲ ಎಂಬುದು ಪರಿಶೀಲನೆ ವೇಳೆ ಕಂಡುಬಂದಿದೆ’ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದರು.

ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹರಿದಾಡಿದ ಮೇಲೆ ಪರಿಶೀಲನೆ ನಡೆಸುವಂತೆ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಸೂಚಿಸಿದ್ದರು. ಬಾಗಲೂರು ಠಾಣೆಯ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಿದ್ದರು.

ವಿಡಿಯೊದಲ್ಲಿದ್ದ ಪಂಜಾಬ್‌ನ ರಾಜ್‌ವೀರ್ ಸಿಂಗ್ (26) ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ವಿಚಾರಣೆ ವೇಳೆ ಆತ ಶೀತ ಹಾಗೂ ಕಾಲು ನೋವಿಗೆ ವೈದ್ಯರು ನೀಡಿರುವ ಮಾತ್ರೆಗಳನ್ನು ತೆಗೆದುಕೊಂಡಿದ್ದರಿಂದ ತಲೆಸುತ್ತು ಬಂದು ವಿಚಿತ್ರವಾಗಿ ವರ್ತಿಸಿದ್ದರು ಎಂಬುದು ಗೊತ್ತಾಯಿತು ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಜ್‌ವೀರ್ ಸಿಂಗ್ ಅವರನ್ನು ವೈದ್ಯಕೀಯ ತಪಾಸಣೆಗೂ ಒಳಪಡಿಸಲಾಗಿತ್ತು. ಅವರ ರಕ್ತದ ಮಾದರಿಯಲ್ಲಿ ಯಾವುದೇ ರೀತಿಯ ಡ್ರಗ್ಸ್ ಅಥವಾ ಅಮಲು ಪದಾರ್ಥಗಳ ಅಂಶ ಪತ್ತೆಯಾಗಿಲ್ಲ’ ಎಂದು ಮೂಲಗಳು ಹೇಳಿವೆ.

ರೀಗಲ್ ಮಳಿಗೆ ಉದ್ಘಾಟನೆ

ನಟ ರಿಷಬ್ ಶೆಟ್ಟಿ ಅವರು ಶುಕ್ರವಾರ ಜಯನಗರದಲ್ಲಿ ರೀಗಲ್ ಜ್ಯುವೆಲರ್ಸ್‌ನ ನೂತನ ಮಳಿಗೆಯನ್ನು ಉದ್ಘಾಟಿಸಿದರು. ನಟಿ ಅಮೂಲ್ಯ ಮೊದಲಾದವರು ಚಿತ್ರದಲ್ಲಿದ್ದಾರೆ

ಪರಾರಿಯಾಗಿದ್ದ ಮುಖ್ಯಾಧಿಕಾರಿ ವಶಕ್ಕೆ

ಸಿರವಾರ (ರಾಯಚೂರು): ಲಂಚ ಪಡೆದು, ತಪ್ಪಿಸಿಕೊಂಡು ಕಾರಿನಲ್ಲಿ ಪರಾರಿಯಾಗಿದ್ದ ಸಿರವಾರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸುರೇಶ ಶೆಟ್ಟಿ ಅವರನ್ನು ಕವಿತಾಳದಲ್ಲಿ, ಅವರ ಸ್ನೇಹಿತನ ಮನೆ ಯಲ್ಲಿ ಲಂಚದ ಹಣ ಸಮೇತ ಲೋಕಾಯುಕ್ತ ಪೊಲೀಸರು ಶುಕ್ರವಾರ ನಸುಕಿನಜಾವ ವಶಕ್ಕೆ ಪಡೆದಿದ್ದಾರೆ.

ಸುರೇಶ ಶೆಟ್ಟಿ

ಹೊಸ ಬಡಾವಣೆಯ ನಿವೇಶನದ ಇ–ಖಾತೆ (ಫಾ.ನಂ 3) ನೀಡಲು ₹2 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಸಿರವಾರದ ಜಿ.ರಘುರಾಮ ರೆಡ್ಡಿ ಅವರು ದೂರು ನೀಡಿದ್ದರು.

ಗುರುವಾರ ಸಂಜೆ ಸಿರವಾರದಲ್ಲಿ ದೂರುದಾರರಿಂದ ₹1 ಲಕ್ಷ ಲಂಚ ಪಡೆದ ಮುಖ್ಯಾಧಿಕಾರಿ ಲೋಕಾಯುಕ್ತ ಪೊಲೀಸರಿಂದ ತಪ್ಪಿಸಿಕೊಂಡು ಕಾರಿನಲ್ಲಿ ಪರಾರಿಯಾಗಿದ್ದರು. ಬೈಕ್‌ನಲ್ಲಿ ಹಿಂಬಾಲಿಸಿದ ಪೊಲೀಸರ ಕೈಗೆ ಸಿಕ್ಕಿರಲಿಲ್ಲ. ಇಲ್ಲಿನ ಕಲ್ಮಠ ಆವರಣದಲ್ಲಿ ನಿಲ್ಲಿಸಿದ್ದ ಕಾರನ್ನು ಗುರುತಿಸಿದ ಪೊಲೀಸರು ಮೊಬೈಲ್ ಲೊಕೇಶನ್ ಆಧರಿಸಿ ಸ್ನೇಹಿತನ ಮನೆಯಲ್ಲಿ ತಂಗಿದ್ದ ಅಧಿಕಾರಿಯನ್ನು ವಶಕ್ಕೆ ಪಡೆದರು. ಇಲ್ಲಿನ ಪ್ರವಾಸಿ ಮಂದಿರದಲ್ಲಿ ವಿಚಾರಣೆ ನಡೆಸಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ತಪಾಸಣೆ ಮಾಡಿಸಿದರು.

ಲೋಕಾಯುಕ್ತ ಡಿವೈಎಸ್ಪಿ ಪುರುಷೋತ್ತಮ ಮತ್ತು ಸಿಬ್ಬಂದಿ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಶಿಕ್ಷಕನ ವಿರುದ್ಧ ಪೋಕ್ಸೊ ಪ್ರಕರಣ

ನಾಯಕನಹಟ್ಟಿ (ಚಿತ್ರದುರ್ಗ ಜಿಲ್ಲೆ): ಪ್ರೌಢಶಾಲೆಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಗರ್ಭಪಾತ ಮಾಡಿಸಿದ್ದಾರೆ ಎಂದು ಆರೋಪಿಸಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನೀಡಿದ ದೂರು ಆಧರಿಸಿ ಚಳ್ಳಕೆರೆ ತಾಲ್ಲೂಕು ತಳಕು ಠಾಣೆ ಪೊಲೀಸರು ಗಣಿತ ಶಿಕ್ಷಕ ಎಚ್.ಒ.ರಾಜಣ್ಣ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿದ್ದಾರೆ.

ರಾಜಣ್ಣ

ಗರ್ಭಪಾತ ಮಾಡಿಸಿದ ಆರೋಪದಡಿ ವೈದ್ಯೆ ಶಂಕರಲಕ್ಷ್ಮಿ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ವಿದ್ಯಾರ್ಥಿನಿಯೊಂದಿಗೆ ಸಲುಗೆ ಹೊಂದಿದ್ದ ರಾಜಣ್ಣ 2025ರ ಆ. 26ರಂದು ಹೊಲಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ನಂತರ ನಿರಂತರವಾಗಿ ಲೈಂಗಿಕ ಸಂಪರ್ಕ ನಡೆಸಿದ್ದ. ವಿದ್ಯಾರ್ಥಿನಿ ಗರ್ಭಿಣಿಯಾದ ನಂತರ ಫೆ. 28ರಂದು ಚಳ್ಳಕೆರೆ ನಗರದ ಶ್ರೀಲಕ್ಷ್ಮಿ ಶ್ರೀನಿವಾಸ ನರ್ಸಿಂಗ್ ಹೋಂನ ವೈದ್ಯೆ ಶಂಕರಲಕ್ಷ್ಮಿ ಅವರನ್ನು ಸಂಪರ್ಕಿಸಿ ಮಾರ್ಚ್ 1ರ ಮಧ್ಯರಾತ್ರಿ ಗರ್ಭಪಾತ ಮಾಡಿಸಿದ್ದ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ವಿಷಯ ತಿಳಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಬಾಲಕಿಯ ವಿಚಾರಣೆ ನಡೆಸಿದ್ದರು. ವಿವರ ಗಳೊಂದಿಗೆ ಅವರು ಶುಕ್ರವಾರ ತಳಕು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದರ ಆಧಾರದ ಮೇಲೆ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣ ದಾಖಲಾದ ನಂತರ ಆರೋಪಿ ಶಿಕ್ಷಕ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಚಿಕಿತ್ಸೆಗಾಗಿ ದಾವಣಗೆರೆಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸೂಲಿಬೆಲೆ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ‘ಮುಸ್ಲಿಂ ಸಮುದಾಯದ ಮಹಿಳೆಯರ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಿ’ ಎಂದು ಜಾಗೃತ ನಾಗರಿಕರು ಕರ್ನಾಟಕ ಸಂಘಟನೆಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಬಗ್ಗೆ ಸಂಘಟನೆಯು ನೀಡಿರುವ ಪತ್ರಿಕಾ ಪ್ರಕಟಣೆಗೆ ಜಿ.ರಾಮಕೃಷ್ಣ, ಕೆ.ಮರುಳಸಿದ್ಧಪ್ಪ, ವಿಜಯಾ, ಎಸ್.ಜಿ.ಸಿದ್ದರಾಮಯ್ಯ, ಮಾವಳ್ಳಿ ಶಂಕರ್, ಬಂಜಗೆರೆ ಜಯಪ್ರಕಾಶ್, ಟಿ.ಸುರೇಂದ್ರ ರಾವ್, ಬಿ.ಶ್ರೀಪಾದ ಭಟ್, ಮೀನಾಕ್ಷಿ ಬಾಳಿ, ಕೆ.ಎಸ್.ವಿಮಲಾ, ವಸುಂಧರಾ ಭೂಪತಿ ಮತ್ತು ಎನ್.ಗಾಯತ್ರಿ ಅವರು ಸಹಿ ಮಾಡಿದ್ದಾರೆ.

‘ಚಕ್ರವರ್ತಿ ಸೂಲಿಬೆಲೆ ಅವರು ಮುಸ್ಲಿಮರ ಕುರಿತು ಆಡಿರುವ ಮಾತುಗಳ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವರ ಮಾತುಗಳು ಅನಾಗರಿಕ ಸ್ವರೂಪದ್ದಾಗಿದ್ದು, ಮಹಿಳೆಯರ ಘನತೆಗೆ ಕುಂದುಂಟು ಮಾಡುವಂತಿವೆ. ನಾಗರಿಕ ಸಮಾಜದ ಎಲ್ಲ ನೀತಿ ನಿಯಮಗಳನ್ನು ಅವರು ಉಲ್ಲಂಘಿಸಿದ್ದಾರೆ. ಇದರ ವಿರುದ್ಧ ಎಲ್ಲ ಪ್ರಜ್ಞಾವಂತ ಮಹಿಳೆಯರು ದನಿ ಎತ್ತಬೇಕು’ ಎಂದು ಕರೆ ನೀಡಿದ್ದಾರೆ.

‘ಅವರು ಹಸಿ–ಹಸಿ ಸುಳ್ಳುಗಳನ್ನು ಹೇಳುತ್ತಾ, ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ದ್ವೇಷ ಹುಟ್ಟಿಸುವ ಪ್ರಚೋದನಕಾರಿ ಮಾತುಗಳನ್ನಾಡಿದ್ದಾರೆ. ಈ ಎಲ್ಲ ಕಾರಣಕ್ಕಾಗಿ ಅವರ ವಿರುದ್ಧ ಸೂಕ್ತ ಕಾನೂನುಗಳ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ರಾಜ್ಯ ಮಹಿಳಾ ಆಯೋಗವು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

ಸ್ಫೋಟ ಪ್ರಕರಣ: ಏ.17ಕ್ಕೆ ಶಿಕ್ಷೆಯ ಪ್ರಮಾಣ ಪ್ರಕಟ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಲ್ಕು ವರ್ಷಗಳ ಹಿಂದೆ ಸಂಭವಿಸಿದ್ದ ಸ್ಫೋಟ ಪ್ರಕರಣದ ಅಪರಾಧಿ ಮೊಹಮ್ಮದ್ ಶಾರೀಕ್‌ಗೆ ಶಿಕ್ಷೆಯ ಪ್ರಮಾಣವನ್ನು ಏಪ್ರಿಲ್ 17ರಂದು ರಾಷ್ಟ್ರೀಯ ತನಿಖಾ ದಳದ(ಎನ್‌ಐಎ) ಪ್ರಕರಣಗಳ ವಿಶೇಷ ನ್ಯಾಯಾಲಯವು ಪ್ರಕಟಿಸಲಿದೆ.

ಮೊಹಮ್ಮದ್ ಶಾರೀಕ್ ಮೂರು ತಿಂಗಳ ಹಿಂದೆ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ನ್ಯಾಯಾಲಯ ಇತ್ತೀಚೆಗೆ ಮಾನ್ಯ ಮಾಡಿತ್ತು. ನ್ಯಾಯಾಲಯದಲ್ಲಿ ಶುಕ್ರವಾರ ಸಹ ವಿಚಾರಣೆ ನಡೆಯಿತು. ಏ.17ರಂದು ಅಪರಾಧಿಗೆ ವಿಧಿಸಲಾಗುವ ಶಿಕ್ಷೆಯ ಪ್ರಮಾಣ ಪ್ರಕಟಿಸುವುದಾಗಿ ನ್ಯಾಯಾಧೀಶರು ಆದೇಶಿಸಿದರು.



ಬಾಂಬ್ ಸ್ಫೋಟ ಪ್ರಕರಣ ಸಂಬಂಧ 2024ರಲ್ಲಿ ಶಾರೀಕ್ ವಿರುದ್ಧ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. 2022ರ ನ.19ರಂದು ಸಂಜೆ 4.40ರ ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಟೊದಲ್ಲಿ ಶಾರೀಕ್ ತೆರಳುವಾಗ ಕುಕ್ಕರ್ ಬಾಂಬ್ (ಐಇಡಿ) ಸ್ಫೋಟಗೊಂಡಿತ್ತು.

ಮನೋರಾಯನ ಪಾಳ್ಯ: ಪಿಯು ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಹೆಬ್ಬಾಳ ಪೊಲೀಸ್ ಠಾಣಾ ವ್ಯಾಪ್ತಿಯ ಮನೋರಾಯನ ಪಾಳ್ಯದ ಮನೆಯೊಂದರಲ್ಲಿ ವಿದ್ಯಾರ್ಥಿನಿ ನೇಣುಹಾಕಿಕೊಂಡು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತನುಶ್ರೀ(18) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ.

ಖಾಸಗಿ ಕಾಲೇಜೊಂದರ ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿಯು ಓದುತ್ತಿದ್ದ ತನುಶ್ರೀ ಮನೆಯ ಕೊಠಡಿಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ವಿದ್ಯಾರ್ಥಿನಿ ತಾಯಿ ಆಶಾ ಅವರು ಕೊಠಡಿಗೆ ಬಂದು ನೋಡಿದಾಗ ಕೃತ್ಯ ಗೊತ್ತಾಗಿತ್ತು. ಕೂಡಲೇ ಸ್ಥಳೀಯರ ಸಹಾಯ ಪಡೆದು ನೇಣಿನ ಕುಣಿಕೆಯಿಂದ ಮಗಳನ್ನು ಇಳಿಸಿದ್ದರು.

ಹೆಬ್ಬಾಳ ಠಾಣೆ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು. ಅಂಬೇಡ್ಕರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕೊಲೆ ಶಂಕೆ–ಸಂಬಂಧಿಕರ ಅನುಮಾನ: ತನುಶ್ರೀ ಆತ್ಮಹತ್ಯೆ ಮಾಡಿಕೊಳ್ಳುವಂತಹ ಹುಡುಗಿ ಅಲ್ಲ. ಪೊಲೀಸರಿಗೆ ಮಾಹಿತಿ ನೀಡದೇ, ಸ್ಥಳೀಯರ ನೆರವು ಪಡೆದು ನೇಣಿನ ಕುಣಿಕೆಯಿಂದ ಮೃತದೇಹ ಇಳಿಸಲಾಗಿದೆ. ಆಕೆಯನ್ನು ಕೊಲೆ ಮಾಡಿ ನೇಣಿಗೆ ಹಾಕಿರುವ ಶಂಕೆಯಿದೆ ಎಂದು ಸಂಬಂಧಿಕರು ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಪೊಲೀಸರಿಗೂ ಮಾಹಿತಿ ನೀಡಿದ್ದಾರೆ.

‘ಸ್ಥಳದಲ್ಲಿ ಯಾವುದೇ ಮರಣ ಪತ್ರ ಪತ್ತೆ ಆಗಿಲ್ಲ. ಸಂಬಂಧಿಕರ ಆರೋಪದ ಮೇಲೆ ವಿದ್ಯಾರ್ಥಿನಿಯ ತಾಯಿ ಆಶಾ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನಗರದಲ್ಲಿ ಇಂದು

ಯೋಗ ಪ್ರಾತ್ಯಕ್ಷಿಕೆ, ಉಪನ್ಯಾಸ, ಭರತನಾಟ್ಯ ಪ್ರದರ್ಶನ: 'ಪರಿಪೂರ್ಣ ವ್ಯಕ್ತಿತ್ವ ವಿಕಾಸದ ಅಡಿಯಲ್ಲಿ ಯೋಗದ ಪಾತ್ರ' ಉಪನ್ಯಾಸ: ರಾಮು, 'ವಿಶ್ವಗುರು ಭಾರತದ ಕಡೆಗೆ– ನಮ್ಮ ಕುಟುಂಬ, ನಮ್ಮ ಸಮಾಜ, ನಮ್ಮ ಕೊಡುಗೆ' ಉಪನ್ಯಾಸ: ಪಿ.ಎಂ. ಗಿರಿಧರ ಉಪಾಧ್ಯಾಯ, ಭರತನಾಟ್ಯ ಪ್ರದರ್ಶನ: ಆಶಾ ಕುಮಾರ್, ಆಯೋಜನೆ ಮತ್ತು ಸ್ಥಳ: ಕ.ವಿ.ಮಂ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

ಘಟಿಕೋತ್ಸವ: ಭಾಷಣಕಾರರು: ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ಅತಿಥಿಗಳು: ಬಿ.ಎಸ್. ಶ್ರೀನಾಥ್, ಅಶೋಕ್ ರಾಮಕೃಷ್ಣನ್, ಜೆ. ಶ್ರೀನಿವಾಸಮೂರ್ತಿ, ಆಯೋಜನೆ: ಶ್ರೀವಿದ್ಯಾ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ ಫಾರ್ ವೇದಿಕ್ ಸೈನ್ಸ್, ಸ್ಥಳ: ಗಾನಲಿಂಗ ಶಿವಯೋಗಿ ಸಭಾ ಭವನ, ಸಿದ್ಧಣ್ಣ ಬಡಾವಣೆ, ಎರಡನೇ ಹಂತ, ಬನಶಂಕರಿ, ಬೆಳಿಗ್ಗೆ 10

ಎಂ. ಸೋಮಯ್ಯ ಅವರ ಪುಸ್ತಕ ಬಿಡುಗಡೆ: ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತೇಜಸ್ವಿ ಸೂರ್ಯ, ಎ.ಎಸ್. ಪೊನ್ನಣ್ಣ, ಮಂಥರ್ ಗೌಡ, ಸಿ.ಎಸ್. ಸುರೇಶ್ ನಂಜಪ್ಪ, ಪಿ.ಎಸ್. ಗಣಪತಿ, ಸಂಗೀತ ಕಛೇರಿ: ಶಿವಶ್ರೀ ಸ್ಕಂದಪ್ರಸಾದ್ ಮತ್ತು ತಂಡ, ಸ್ಥಳ: ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕನ್ವೆನ್ಷನ್ ಸೆಂಟರ್, ಕೊಡವ ಸಮಾಜ, ವಸಂತನಗರ, ಬೆಳಿಗ್ಗೆ 10

ಶಿವಶ್ರೀ ಸ್ಕಂದಪ್ರಸಾದ್

'ಸಿ. ಲಕ್ಷ್ಮಣ' ಸ್ಮರಣಾರ್ಥ ಉಚಿತ ಮಕ್ಕಳ ರಂಗ ಕಾರ್ಯಾಗಾರಕ್ಕೆ ಚಾಲನೆ: ಆಯೋಜನೆ ಮತ್ತು ಸ್ಥಳ: ರಂಗ ಕಹಳೆ ಮಕ್ಕಳ ಮನೆ, ಉತ್ತರಹಳ್ಳಿ, ಬೆಳಿಗ್ಗೆ 10

ಆರ್‌ಸಿಬಿ ಅಂತರರಾಷ್ಟ್ರೀಯ ಚಿತ್ರೋತ್ಸವ: ಉದ್ಘಾಟನೆ: ಜಯಮಾಲಾ, ಆಯೋಜನೆ: ಬೆಂಗಳೂರು ರೋಟರಿ ಕ್ಲಬ್, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಜಯಮಾಲ

'ಎಸ್‌ವಿಎನ್' ಸ್ಮಾರಕ ವಾರ್ಷಿಕ ಸಂಗೀತೋತ್ಸವ: ಗಾಯನ: ಶ್ರೀಹರಿ ಭಟ್, ಪಿಟೀಲು: ಶ್ರೀವಿದ್ಯಾ ಡಿ., ಮೃದಂಗ: ಕೌಶಿಕ್ ಶ್ರೀಧರ್, ವೀಣಾ ವಾದನ: ಅನುರಾಧ ಮಧುಸೂದನ್, ಪಿಟೀಲು: ಬಿ.ಆರ್. ಕುಶಾಲ್, ಮೃದಂಗ: ಕೆ.ವಿ. ರವಿಶಂಕರ್ ಶರ್ಮಾ, ಘಟ: ಬಿ.ಆರ್. ರವಿಕುಮಾರ್, ಆಯೋಜನೆ: ಶ್ರೀರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ: ಎಸ್‌ವಿಎನ್ ಸ್ಮಾರಕ ಸಭಾಂಗಣ, ನೆಟ್ಟಿಗೆರೆ ಗ್ರಾಮ, ಸೋಮನಹಳ್ಳಿ, ಕನಕಪುರ ರಸ್ತೆ, ಮಧ್ಯಾಹ್ನ 3.15ರಿಂದ

'ಗಾಂಪರ ಗುಂಪು' ನಾಟಕ ಪ್ರದರ್ಶನ: ರಚನೆ: ದಾಶರಥಿ ದೀಕ್ಷಿತ್, ನಿರ್ದೇಶನ: ಎಸ್. ಶ್ರೀಪಾದ್, 'ಲಕ್ಷ್ಮೀಕಟಾಕ್ಷ' ನಾಟಕ ಪ್ರದರ್ಶನ: ನಿರ್ದೇಶನ: ಕಿಶೋರ್ ಕುಮಾರ್, ಆಯೋಜನೆ: ಬೆಂಗಳೂರು ಪ್ಲೇಯೇರ್ಸ್ ಥಿಯೇಟರ್ ಅಸೋಸಿಯೇಷನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30ರಿಂದ

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಅಭಿರಾಮ್ ಭಟ್ ಎನ್.ಜೆ. ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ತ್ರಿಚೂರು ಸಹೋದರರು, ಎಸ್. ಜನಾರ್ದನ್, ತ್ರಿಚೂರು ಮೋಹನ್, ಕೋವೈ ಸುರೇಶ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಸಂಗೀತ ಸಂಜೆ: ಗಾಯನ: ಸಮನ್ವಿತಾ ಶರ್ಮಾ, ಅನುರಾಗ್ ಗದ್ದಿ, ಶರಣ್ ಚೌಧರಿ, ತಬಲಾ: ವೇಣುಗೋಪಾಲ್ ರಾಜು, ಪಿಟೀಲು: ರಂಜನ್ ಬಿ., ಕೀ–ಬೋರ್ಡ್: ದೀಪು, ರಿದಮ್ ಪ್ಯಾಡ್: ಸಿ. ಗೆರಾಲ್ಡ್, ಆಯೋಜನೆ: ಅನುರಾಗ್ಸ್ ಸಂಗೀತ ಗುರುಕುಲ ಬೆಂಗಳೂರು, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 5.30

ಸಮನ್ವಿತಾ

'ಶ್ರೀಹರಿ ಸ್ಮರಣಂ' ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಪ್ರಣಾಂಜಲಿ ಕೊಪ್ಪದ, ಅತಿಥಿಗಳು: ಕುಮುದಿನಿ ರಾವ್, ಸಾಯಿ ವೆಂಕಟೇಶ್, ಆಯೋಜನೆ: ಕಲಾಪ್ರಕಾಶಂ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅಭಿಷೇಕ್ ರಘುರಾಮ್, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ತುಮಕೂರು ಬಿ. ರವಿಶಂಕರ್, ಖಂಜೀರಾ: ಸುನಾದ್ ಆನೂರ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ಕನ್ನಡ ನಾಟಕೋತ್ಸವ–2026: 'ಜಲಗಾರ' ನಾಟಕ ಪ್ರದರ್ಶನ, ಪ್ರಸ್ತುತಿ: ನಾಟ್ಯ ಸರಸ್ವತಿ, ನಿರ್ದೇಶನ: ಡಿ. ವೆಂಕಟರಮಣಯ್ಯ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ಸಂಗೀತ ಕಛೇರಿ: ಮಾಲಾ ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಒಂಬತ್ತನೇ ಬಡಾವಣೆ, ಜಯನಗರ, ಸಂಜೆ 6.30

ವೀಕೆಂಡ್ ನಾಟಕೋತ್ಸವ: 'ಮಾಯಾಮೃಗ' ನಾಟಕ ಪ್ರದರ್ಶನ: ಪ್ರಸ್ತುತಿ: ಧ್ವನಿ, ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಪೃಥ್ವಿ ಆರಾಧ್ಯ, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6.30

'ರಾಮಾಯಣ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ವಯ್ಯಾಲಿಕಾವಲ್ ಎಕ್ಸಟೆನ್ಶನ್ ಅಸೋಸಿಯೇಷನ್, ಸ್ಥಳ: ಶ್ರೀ ರಾಮ ಮಂದಿರ, ಒಂಬತ್ತನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆ, ವಯ್ಯಾಲಿಕಾವಲ್, ಸಂಜೆ 6.30

'ಸ್ವಪ್ನ ವೃಂದಾವನ' ನೃತ್ಯ ನಾಟಕ ಪ್ರದರ್ಶನ: ಆಯೋಜನೆ: ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

'ನೀರಗನ್ನಡಿ' ನಾಟಕ ಪ್ರದರ್ಶನ: ರಚನೆ: ಕೆ.ವೈ. ನಾರಾಯಣಸ್ವಾಮಿ, ನಿರ್ದೇಶನ: ಬಿ. ಸುರೇಶ, ಆಯೋಜನೆ: ನಟರಂಗ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಹಿಂದಿ ಕಡ್ಡಾಯವಲ್ಲ: ಹೈಕೋರ್ಟ್ ಆದೇಶಕ್ಕೆ ಹೋರಾಟಗಾರರ ಸ್ವಾಗತ

ಬೆಂಗಳೂರು: ಎಸ್ಸೆಸ್ಸೆಲ್ಸಿಯಲ್ಲಿ ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡಿಂಗ್ ನೀಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎತ್ತಿ ಹಿಡಿದ ಹೈಕೋರ್ಟ್ ನಿಲುವನ್ನು ಕನ್ನಡಪರ ಹೋರಾಟಗಾರರು ಸ್ವಾಗತಿಸಿದ್ದಾರೆ.

ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧ ಹೂಡಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿರುವುದಷ್ಟೇ ಅಲ್ಲದೆ, ಪ್ರಚಾರದ ಹಂಬಲದಿಂದ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ₹ 1 ಲಕ್ಷ ದಂಡ ವಿಧಿಸಿರುವುದು ಹಿಂದಿ ಹೇರಿಕೆ ಪರವಾಗಿ ವಾದ ಮಾಡುತ್ತಿದ್ದವರಿಗೆ ನೇರವಾಗಿ ಕಪಾಳಕ್ಕೆ ಹೊಡೆದಂತಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ತನ್ನ 'ಎಕ್ಸ್' ಖಾತೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ತೃತೀಯ ಭಾಷೆಗೆ ಗ್ರೇಡಿಂಗ್ ನೀಡುವ ವ್ಯವಸ್ಥೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಮನಸ್ಸಿಗೆ ಬಂದಂತೆ ವ್ಯಾಖ್ಯಾನಿಸಿ ಗೊಂದಲ ಉಂಟು ಮಾಡಿದ್ದರು. ಹಿಂದಿಯೂ ಸೇರಿದಂತೆ ಮೂರನೇ ಭಾಷೆಯ ಕಲಿಕೆಯನ್ನು ರಾಜ್ಯ ಸರ್ಕಾರ ಹಿಂದಕ್ಕೆ ಪಡೆದಿರಲಿಲ್ಲ. ಒಂದು ವೇಳೆ ಹಿತಾಸಕ್ತಿ ಅರ್ಜಿ ಸ್ವೀಕೃತವಾಗಿದ್ದರೆ ಕರ್ನಾಟಕ ರಕ್ಷಣಾ ವೇದಿಕೆಯು ವಿದ್ಯಾರ್ಥಿಗಳ ಪರ ಕಾನೂನು ಹೋರಾಟ ನಡೆಸಲು ಸಜ್ಜಾಗಿತ್ತು' ಎಂದು ತಿಳಿಸಿದ್ದಾರೆ.

'ಪೂರ್ತಿ ವಿಚಾರ ತಿಳಿಯದೆ, ಕೇವಲ ಪ್ರಚಾರಕ್ಕಾಗಿ ರಾಜ್ಯ ಸರ್ಕಾರದ ವಿರುದ್ಧ ಪಿಐಎಲ್ ಸಲ್ಲಿಸಿದವರಿಗೆ ದಂಡ ವಿಧಿಸಿ, ಹೈಕೋರ್ಟ್ ನೀಡಿರುವ ಸೂಚನೆಗಳು ಅರ್ಜಿ ಸಲ್ಲಿಸಿದವರಿಗೆ ಮಾತ್ರವಲ್ಲ, ಪೂರ್ತಿ ವಿಚಾರ ತಿಳಿಯದೇ ಕಮೆಂಟ್ ಮಾಡಿದವರಿಗೂ ಅನ್ವಯವಾಗುತ್ತದೆ' ಎಂದು ಹೋರಾಟಗಾರ ಕವಿರಾಜ್ ಪ್ರತಿಕ್ರಿಯಿಸಿದ್ದಾರೆ.

'ಹೈಕೋರ್ಟ್ ಇದರ ಜೊತೆಗೆ ಇನ್ನೊಂದು ಕೆಲಸ ಮಾಡಬೇಕಿತ್ತು. ವಿಜಯೇಂದ್ರ, ಆರ್. ಅಶೋಕ, ಸುರೇಶ್ ಕುಮಾರ್, ಥಾವರಚಂದ್ ಗೆಹಲೋತ್ ಇವರನ್ನೆಲ್ಲ ಕರ್ನಾಟಕದಿಂದ ಒದ್ದೋಡಿಸುವ ಆದೇಶ ನೀಡಬೇಕಾಗಿತ್ತು' ಎಂದು ನಾಗೇಗವ್ಡ ಕೆ.ಎಸ್. ಸಲಹೆ ನೀಡಿದ್ದಾರೆ.

'ಶಿಕ್ಷಣದಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯ ಮಾಡಬಾರದು ಎಂದು ನಾವು ಹಿಂದಿ ವಿರೋಧಿ ಕರ್ನಾಟಕ ಎಂಬ ಸಂಘಟನೆ ಕಟ್ಟಿಕೊಂಡು ಹಲವಾರು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರೊಂದಿಗೂ ಚರ್ಚಿಸಿದ್ದೆವು. ಅದರಂತೆ ಹಿಂದಿ ಭಾಷೆ ಕಡ್ಡಾಯವಲ್ಲ ಎಂಬ ಆದೇಶವನ್ನು ಸರ್ಕಾರ ಹೊರಡಿಸಿತ್ತು. ಆ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ' ಎಂದು ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ತಿಳಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ, ಕೆಐಎಡಿಬಿ ಕೇಂದ್ರ ಕಛೇರಿ, ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001,

ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಮುಖ್ಯಕಡತ/115/2026–27 ದಿನಾಂಕ: 07.04.2026

ಸಾರ್ವಜನಿಕ ನೋಟೀಸು

ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಜಕ್ಕಸಂದ್ರ, ಶಿವಾರಪಟ್ಟಣ, ರಾಮೇನಹಳ್ಳಿ, ಕಣಿವೇನಹಳ್ಳಿ, ಹುಂಗೇನಹಳ್ಳಿ ಮತ್ತು ವರದೇನಹಳ್ಳಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಒಟ್ಟು 1637.21½ ಎ/ಗುಂ ಖರಾಬು 490.15½ ಎ/ಗುಂ ಜಾತ 1147–06 ಎ/ಗುಂ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿ ಕಾಯ್ದೆ ಕಲಂ 28(1) ರಡಿ ಸರ್ಕಾರದ ಪ್ರಾಥಮಿಕ ಅಧಿಸೂಚನೆ ಸಂಖ್ಯೆ : ಸಿಐ 79 ಎಸ್‌ಪಿಕ್ಯೂ(ಇ) 2024 ದಿನಾಂಕ: 10.09.2024 ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 23.09.2024 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಸಂಬಂಧಪಟ್ಟ ಖಾತಾದಾರರು/ಅನುಭವದಾರರು/ ಹಿತಾಸಕ್ತದಾರರುಗಳಿಗೆ 09.01.2025 ಮತ್ತು 10.01.2025 ರಂದು ವಿಚಾರಣೆಗೆ ಹಾಜರಾಗುವಂತೆ ಪ್ರಾಥಮಿಕ ಅಧಿಸೂಚನೆಯನ್ನು ಪತ್ರಿಕಾ ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು ಮತ್ತು ವಿಧಿ 28(2) ರನ್ವಯ ನೋಟೀಸ್ ಜಾರಿ ಮಾಡಲಾಗಿತ್ತು.

ಮುಂದುವರೆದು, ಮತ್ತೊಮ್ಮೆ ವಿಚಾರಣೆಯನ್ನು ನಡೆಸುವ ಅವಶ್ಯಕತೆ ಇರುವುದರಿಂದ ಈ ಕೆಳಕಂಡಂತೆ ವಿಚಾರಣೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಆದ್ದರಿಂದ ಸದರಿ ದಿನಾಂಕದಂದು ಸ್ವತ್ತಿನ ಮೇಲೆ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಮತ್ತು ಅಧಿಸೂಚಿತ ಖಾತೆದಾರರುಗಳು ದಾಖಲೆಗಳೊಂದಿಗೆ ವಿಚಾರಣೆಗೆ ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ಕೇಂದ್ರ ಕಛೇರಿ, 5ನೇ ಮಹಡಿ, ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಹಾಜರಾಗುವಂತೆ ತಿಳಿಯಪಡಿಸಿದೆ.

ಕ್ರ.ಸಂ.	ಗ್ರಾಮ	ವಿಚಾರಣೆ ದಿನಾಂಕ	ಸಮಯ
1	ಹುಂಗೇನಹಳ್ಳಿ ವರದೇನಹಳ್ಳಿ ಜಕ್ಕಸಂದ್ರ,	29.04.2026	ಬೆಳಗ್ಗೆ 11.00 ಗಂಟೆಗೆ
2	ರಾಮೇನಹಳ್ಳಿ,	30.04.2026	ಬೆಳಗ್ಗೆ 11.00 ಗಂಟೆಗೆ
3	ಕಣಿವೇನಹಳ್ಳಿ, ಶಿವಾರಪಟ್ಟಣ,	05.05.2026 07.05.2026	ಬೆಳಗ್ಗೆ 11.00 ಗಂಟೆಗೆ ಬೆಳಗ್ಗೆ 11.00 ಗಂಟೆಗೆ

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ,
ಕೆಐಎಡಿಬಿ ಕೇಂದ್ರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ತುಮಕೂರು ಮಹಾನಗರಪಾಲಿಕೆ, ತುಮಕೂರು.
ವೆಬ್‌ಸೈಟ್ : www.tumkurucity.mrc.gov.in ಇಮೇಲ್: itstaff_ulb_tumkur@yahoo.com
ದೂರವಾಣಿ : 0816–2272200 ಸಹಾಯವಾಣಿ : 9449872599

ನಂ: ತುಮಪಾ/ಕಂಶಾ/ಸಿಆರ್/01/2026–27 ದಿನಾಂಕ: 07–04–2026

"ಬಹಿರಂಗ ಹರಾಜು ಸಾರ್ವಜನಿಕ ಪ್ರಕಟಣೆ"

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ತುಮಕೂರು ಮಹಾನಗರಪಾಲಿಕೆ, ತುಮಕೂರು, ವಾರ್ಡ್ ನಂ.12, ಅಶೋಕ ರಸ್ತೆಯಲ್ಲಿರುವ ಖಾಸಗಿ ಬಸ್ ನಿಲ್ದಾಣದ ಬಸ್ ನಿಲುವಳಿ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ **ದಿನಾಂಕ:28.04.2026ರ ಬೆಳಗ್ಗೆ:11:00 ಗಂಟೆಗೆ ತುಮಕೂರು ಮಹಾನಗರಪಾಲಿಕೆಯ ಎರಡನೇ ಮಹಡಿಯಲ್ಲಿರುವ ಹೊಸ ಸಭಾಂಗಣದಲ್ಲಿ** ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದವರಿಂದ ಬಹಿರಂಗ ಹರಾಜು ಹಮ್ಮಿಕೊಳ್ಳಲಾಗಿರುತ್ತದೆ. ಬಸ್ ನಿಲುವಳಿ ಶುಲ್ಕ ವಸೂಲಾತಿ ಅವಧಿಯು ದಿನಾಂಕ:01.05.2026 ರಿಂದ ದಿನಾಂಕ:30.04.2027ರ ಅವಧಿಗೆ ಬಹಿರಂಗ ಹರಾಜು ನಿಗಧಿಪಡಿಸಲಾಗಿರುತ್ತದೆ.

ಆಸಕ್ತಿಯುಳ್ಳವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ ನಿಗದಿತ ಶುಲ್ಕ ವಸೂಲಾತಿ ಹಕ್ಕನ್ನು ಪಡೆಯಬಹುದು.

ಖಾಸಗಿ ಬಸ್‌ಗಳ ನಿಲ್ದಾಣದ ಬಸ್ ನಿಲುವಳಿ ಶುಲ್ಕ ವಸೂಲಾತಿ ಮಾಡುವ ಹಕ್ಕಿನ ಬಹಿರಂಗ ಹರಾಜು ವಿವರ.

ಕ್ರ ಸಂ	ವಿವರ	ಬಾಬ್ತು
1.	ನಗರದ ಖಾಸಗಿ ಬಸ್ ನಿಲ್ದಾಣದ ನಿಲುವಳಿ ಶುಲ್ಕ ವಸೂಲಿ ಹಕ್ಕು (ಬಸ್ ಒಂದಕ್ಕೆ ರೂ.30/–) ಅವಧಿ: ದಿನಾಂಕ:01.05.2026 ರಿಂದ 30.04.2027 ರವರೆಗೆ	1. ಪ್ರಾರಂಭಿಕ ಠೇವಣಿ–ರೂ.50,000/– (ಡಿ.ಡಿ. ಮುಖಾಂತರ ಪಾವತಿಸುವುದು) 2. ಕನಿಷ್ಠ ಬಿಡ್ ಮೊತ್ತ–? (ಹರಾಜು ದಿನ ಪ್ರಕಟಣೆ ಮಾಡಲಾಗುವುದು.)
2.	ಹರಾಜು ದಿನಾಂಕ ಮತ್ತು ಸ್ಥಳ	ದಿನಾಂಕ:28.04.2026 ಬೆಳಗ್ಗೆ:11:00 ಗಂಟೆಗೆ ಪಾಲಿಕೆಯ ಹೊಸ ಸಭಾಂಗಣ 2ನೇ ಮಹಡಿ, ತು.ಮ.ಪಾ, ತುಮಕೂರು.

ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವವರು ವಯಸ್ಕರಾಗಿರಬೇಕು.
2. ಹರಾಜಿನಲ್ಲಿ ಭಾಗವಹಿಸುವವರು ದಿನಾಂಕ: 24.04.2026ರ ಸಂಜೆ 05:00 ಗಂಟೆಯೊಳಗೆ ನಿಗಧಿಪಡಿಸಿದ ರೂ.50,000/– ಪ್ರಾರಂಭಿಕ ಠೇವಣಿಯನ್ನು ಆಯುಕ್ತರು, ತುಮಕೂರು ಮಹಾನಗರಪಾಲಿಕೆ, ತುಮಕೂರು ಇವರ ಹೆಸರಿನಲ್ಲಿ ಪಡೆದ ಡಿ.ಡಿ ಮೂಲಕ ಠೇವಣಿಯನ್ನು ಸಲ್ಲಿಸಿ ಟೋಕನ್ ಪಡೆದು ಖುದ್ದಾಗಿ ಬಿಡ್ ಸವಾಲು ಮೂಲಕ ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬಹುದು.
3. ಬಸ್ ನಿಲುವಳಿ ಶುಲ್ಕದ ಪ್ರಾರಂಭಿಕ ಠೇವಣಿ ಮೊತ್ತವನ್ನು ಪಾವತಿಸದೇ ಇರುವವರಿಗೆ ಬಿಡ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
4. ಬಸ್ ನಿಲುವಳಿ ಶುಲ್ಕದ ಬಹಿರಂಗ ಹರಾಜು ದಿನದಂದು ಕನಿಷ್ಠ ಬಿಡ್ (ಸರ್ಕಾರಿ ಸವಾಲ್) ಮೊತ್ತವನ್ನು ಆಯುಕ್ತರು ಘೋಷಿಸುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ.
5. ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಪ್ರತಿ ಬಿಡ್ ರೂ.10,000/–ದಂತೆ ಬಿಡ್ ಕೂಗುವುದು. ಯಶಸ್ವಿ ಬಿಡ್‌ದಾರ ಠೇವಣಿಯನ್ನು ಬಿಟ್ಟು ಉಳಿದ ಬಿಡ್‌ದಾರರಿಗೆ ಠೇವಣಿಯನ್ನು ಹರಾಜು ಮುಗಿದ ಕೂಡಲೇ ವಾಪಸ್ಸು ಕೊಡಲಾಗುವುದು.
6. ಹರಾಜು ಸಮಯದಲ್ಲಿ ತಿರಸ್ಕರಿಸುವ ಹಾಗೂ ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯ ಷರತ್ತುಗಳನ್ನು ಹೊಸದಾಗಿ ವಿಧಿಸುವ ಅಧಿಕಾರವನ್ನು ಆಯುಕ್ತರು, ತುಮಕೂರು ಮಹಾನಗರಪಾಲಿಕೆ, ತುಮಕೂರು ರವರು ಕಾಯ್ದಿರಿಸಿಕೊಂಡಿದೆ.
7. ಯಶಸ್ವಿ ಬಿಡ್‌ದಾರರು ಹರಾಜು ಮುಗಿದ ನಂತರ ಅಖೈರು ಬಿಡ್ ಮೊಬಲಗಿನ ಶೇ.50 ರಷ್ಟು ಮೊತ್ತವನ್ನು 07 ದಿನಗಳ ಒಳಗಾಗಿ ಪಾವತಿಸುವುದು, ಇನ್ನುಳಿದ ಶೇ.50 ರಷ್ಟು ಮೊತ್ತವನ್ನು 15 ದಿನಗಳ ಒಳಗಾಗಿ (ಕಛೇರಿ ನಗದು ಶಾಖೆಯಲ್ಲಿ ಪಾವತಿಸಿ, ವಿವರಗಳನ್ನು ಕಂದಾಯ ಶಾಖೆಗೆ ಸಲ್ಲಿಸುವುದು. ತಪ್ಪಿದ್ದಲ್ಲಿ ತಾವು ಪಾವತಿಸಿರುವ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಮರು ಹರಾಜು ಮಾಡಲು ಕ್ರಮವಹಿಸಲಾಗುವುದು.
8. ಯಶಸ್ವಿ ಬಿಡ್‌ದಾರರು 12 ತಿಂಗಳ ಅವಧಿಗೆ ಹರಾಜು ನಿಬಂಧನೆಗಳ ರೀತ್ಯಾ ವಸೂಲಿ ಮಾಡುವುದು ಶುಲ್ಕ ವಸೂಲಿ ಮಾಡುವ ಪ್ರತಿ ಟಿಕೇಟ್ ಅಥವಾ ರಸೀದಿಗಳನ್ನು ತುಮಕೂರು ಮಹಾನಗರಪಾಲಿಕೆ, ತುಮಕೂರು ಮೊಹರು ಹಾಕಿಸಿಕೊಂಡು ನಂತರ ವಸೂಲು ಮಾಡುವುದು.
9. ಬಸ್ ನಿಲುವಳಿ ಶುಲ್ಕ ವಸೂಲಾತಿ ಹಕ್ಕನ್ನು ಬೇರೆಯವರಿಗೆ ವರ್ಗಾವಣೆ ಮತ್ತು ಒಳ ಒಪ್ಪಂದವನ್ನು ನಿಷೇಧಿಸಿದೆ. ಇದು ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಬಹಿರಂಗ ಹರಾಜನ್ನು ರದ್ದುಪಡಿಸಲಾಗುವುದು.
10. ತುಮಕೂರು ಮಹಾನಗರಪಾಲಿಕೆ, ತುಮಕೂರು ಅಧಿಕಾರಿಗಳಿಗೆ ಬಾಬ್ತಿನ ಶುಲ್ಕ ವಸೂಲಾತಿಯ ಬಗ್ಗೆ ಪರಿಶೀಲಿಸುವ ಹಕ್ಕು ಇರುತ್ತದೆ.
11. ಪ್ರತಿ ಬಸ್‌ಗೆ ಪಾಲಿಕೆ ವತಿಯಿಂದ ನಿಗಧಿಪಡಿಸಿರುವ ದರಕ್ಕಿಂತ ಹೆಚ್ಚು ದರವನ್ನು ವಸೂಲಿ ಮಾಡುವಂತಿಲ್ಲ.
12. ಹರಾಜಿಗೆ ನಿಗದಿಪಡಿಸಿದ ದಿನಾಂಕದಂದು ಸರ್ಕಾರದಿಂದ ಹಠಾತ್ತಾಗಿ ಘೋಷಣೆಯಾಗುವ ಸರ್ಕಾರಿ ರಜೆ ಬಂದ ಪಕ್ಷದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಹರಾಜು ಪ್ರಕ್ರಿಯೆ ಮುಂದೂಡುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
13. ತುಮಕೂರು ಮಹಾನಗರಪಾಲಿಕೆ ವಿಧಿಸುವ ಎಲ್ಲಾ ಷರತ್ತುಗಳನ್ನು ಒಪ್ಪಿ ಯಶಸ್ವಿ ಬಿಡ್‌ದಾರರು ರೂ.100 ಛಾಪಾ ಕಾಗದದಲ್ಲಿ ನೋಟರಿಯಿಂದ ದೃಢೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
14. ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ ಮರುಹರಾಜು ಮಾಡುವ ವಿಶಿಷ್ಟ ಹಕ್ಕನ್ನು ತುಮಕೂರು ಮಹಾನಗರಪಾಲಿಕೆ, ತುಮಕೂರು ಕಾಯ್ದಿರಿಸಿಕೊಂಡಿ
15. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ತುಮಕೂರು ಮಹಾನಗರಪಾಲಿಕೆ ಕಛೇರಿಯ ಕಂದಾಯ ಶಾಖೆಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಹಾಗೂ ತುಮಕೂರು ಮಹಾನಗರಪಾಲಿಕೆ, ತುಮಕೂರು ವೆಬ್‌ಸೈಟ್:www.tumakurucity.mrc.gov.in ನಲ್ಲಿ ವೀಕ್ಷಿಸಬಹುದು.
16. ಖಾಸಗಿ ಬಸ್ ನಿಲ್ದಾಣದ ಸಂಪೂರ್ಣ ಸ್ವಚ್ಛತೆಯ ನಿರ್ವಹಣೆಯನ್ನು ಅಖೈರು ಬಿಡ್‌ದಾರರೇ ನಿರ್ವಹಿಸತಕ್ಕದ್ದು. ತಪ್ಪಿದಲ್ಲಿ ದಂಡ ವಿಧಿಸಿ ಟೆಂಡರ್ ರದ್ದುಪಡಿಸುವ ಅಧಿಕಾರವನ್ನು ಆಯುಕ್ತರು ಹೊಂದಿರುತ್ತಾರೆ.
17. ತುಮಕೂರು ಮಹಾನಗರಪಾಲಿಕೆ, ತುಮಕೂರು ರವರಿಗೆ ಯಾವುದೇ ತರಹದ ತೆರಿಗೆ ಬಾಕಿದಾರರಾಗಿದ್ದಲ್ಲಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
18. ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘನೆ ಮಾಡಿದ್ದಲ್ಲಿ ಯಾವುದೇ ಕಾರಣವನ್ನು ನೀಡದೆ ಪಾವತಿ ಮಾಡಿರುವ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್ ರದ್ದುಗೊಳಿಸಲಾಗುವುದು.

ಸಹಿ/– ಆಯುಕ್ತರು,
ತುಮಕೂರು ಮಹಾನಗರಪಾಲಿಕೆ, ತುಮಕೂರು.

DIPR/TUM/RO-10/26-27/Oysters

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಇಮೇಲ್: comp.secy@astrazeneca.com ವೆಬ್: www.astrazeneca.com/india
ದೂರವಾಣಿ: +91 80 67748000

ಸದಸ್ಯರಿಗೆ ಸೂಚನೆ

ಈ ಮೂಲಕ ಸೂಚನೆ ನೀಡುತ್ತಿರುವುದೇನೆಂದರೆ: ಕಂಪನಿಗಳ ಕಾಯಿದೆ (ಕಾಯಿದೆ) 2013 ರ ಸೆಕ್ಷನ್ 108, 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದರೆ ಅವುಗಳನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ('ನಿಯಮಗಳು'), ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ (ಎಸ್‌ಎಸ್–2) ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು') [ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಮರು–ಅಧಿನಿಯಮೀಕರಣ(ಗಳು) ಸೇರಿದಂತೆ], ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಏಪ್ರಿಲ್ 8, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ಮತ್ತು ಏಪ್ರಿಲ್ 13, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020 ಮತ್ತು ಈ ನಿಟ್ಟಿನಲ್ಲಿ ಹೊರಡಿಸಲಾದ ನಂತರದ ಸುತ್ತೋಲೆಗಳು, ತೀರಾ ಇತ್ತೀಚಿನದೆಂದರೆ ಸೆಪ್ಟೆಂಬರ್ 9, 2025 ರಂದು ಹೊರಡಿಸಿದ 03/2025 ಸುತ್ತೋಲೆ (ಒಟ್ಟಾಗಿ "ಎಂಸಿಎ ಸುತ್ತೋಲೆಗಳು"), ಮತ್ತು ಅನ್ವಯವಾಗುವ ಯಾವುದೇ ಇತರ ಕಾನೂನುಗಳು ಮತ್ತು ನಿಯಮಗಳ ಜೊತೆ ಓದಿಕೊಂಡ ಪ್ರಕಾರ, ಕಂಪನಿಯು ಮಾರ್ಚ್ 11, 2026 ರ ಅಂಚೆ ಮತಪತ್ರ ಸೂಚನೆಯಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ವಿವರಣಾತ್ಮಕ ಹೇಳಿಕೆಯಲ್ಲಿ ತಿಳಿಸಿರುವಂತೆ ಕಂಪನಿಯ ನೋಂದಾಯಿತ ಕಛೇರಿಯನ್ನು ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ ರಾಜ್ಯಕ್ಕೆ ಸ್ಥಳಾಂತರಿಸುವ ಉದ್ದೇಶವನ್ನು ಹೊಂದಿದ್ದು ಇದಕ್ಕೆ ಕಂಪನಿಯ ಮೆಮೊರಾಂಡಮ್ ಆಫ್ ಅಸೋಸಿಯೇಶನ್‌ಗೆ ತಿದ್ದುಪಡಿ ತರುವುದರ ಬಗ್ಗೆ ಅಂಚೆ ಮತಪತ್ರ ಮತದಾನದ ಮೂಲಕ (ರಿಮೋಟ್ ಇ–ಮತದಾನದ ಮೂಲಕ ಮಾತ್ರ) ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ.

ಕಾಯಿದೆಯ 108 ಮತ್ತು 110 ಕಲಮುಗಳನ್ನು ಅದರ ಅಡಿಯಲ್ಲಿ ರಚಿಸಲಾದ ನಿಯಮಾವಳಿ ಮತ್ತು ಲಿಸ್ಟಿಂಗ್ ನಿಬಂಧನೆಯ ನಿಬಂಧನೆ 44 ರ ಜೊತೆ ಓದಿಕೊಂಡ ಪ್ರಕಾರ ಕಂಪನಿಯು ತನ್ನ ಸದಸ್ಯರಿಗೆ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ ('NSDL') ಒದಗಿಸಿರುವ ಇ–ಮತದಾನ ಸೌಲಭ್ಯದ ಮೂಲಕ ವಿದ್ಯುನ್ಮಾನ ವಿಧಾನದಲ್ಲಿ ತಮ್ಮ ಮತವನ್ನು ಚಲಾಯಿಸುವ ಸೌಲಭ್ಯವನ್ನು ಒದಗಿಸಲು ಹರ್ಷಿಸುತ್ತಿದೆ.

ಕೊನೆಯ ದಿನಾಂಕವಾದ **(ಅಂತಿಮ ದಿನಾಂಕ) ಶುಕ್ರವಾರ, ಏಪ್ರಿಲ್ 3, 2026** ರಂದು ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಅಥವಾ ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟರಲ್ಲಿ ನೋಂದಾಯಿಸಿ ಕೊಂಡಿರುತ್ತಾರೋ ಅಂತಹವರಿಗೆ ಮಾತ್ರವೇ ಕಂಪನಿಯು, ಅಂಚೆ ಮತಪತ್ರ ಸೂಚನೆಯನ್ನು **ಶುಕ್ರವಾರ, ಏಪ್ರಿಲ್ 10, 2026** ರಂದು ಇ–ಮೇಲ್ ಮೂಲಕ ಕಳುಹಿಸಿದೆ. ಎಂಸಿಎ ಸುತ್ತೋಲೆಗಳ ಅವಶ್ಯಕತೆಗಳಿಗೆ ಅನುಸಾರವಾಗಿ, ಈ ಸಲದ ಅಂಚೆ ಮತದಾನಕ್ಕಾಗಿ ಸದಸ್ಯರಿಗೆ, ಅಂಚೆ ಮತಪತ್ರ ಸೂಚನೆಯ ಕಾಗದದ ಪ್ರತಿ ಹಾಗೂ ಅಂಚೆ ಮತಪತ್ರ ನಮೂನೆಗಳು ಮತ್ತು ಪೂರ್ವ–ಪಾವತಿಸಿದ ಬಿಸಿನೆಸ್ ರಿಪ್ಲೈ ಲಕೋಟೆಗಳನ್ನು ಕಳುಹಿಸುವುದಿಲ್ಲ ಮತ್ತು ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ರಿಮೋಟ್ ಇ–ಮತದಾನ ವ್ಯವಸ್ಥೆಯ ಮೂಲಕ ಮಾತ್ರವೇ ತಿಳಿಸಬೇಕಾಗುತ್ತದೆ.

ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಎಲ್ಲ ಸದಸ್ಯರಿಗೂ ರಿಮೋಟ್ ಇ–ವೋಟಿಂಗ್‌ನ ಪ್ರಕ್ರಿಯೆ ಮತ್ತು ವಿಧಾನಗಳ ವಿವರಗಳನ್ನು, ಮತ್ತು ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು, ಇಮೇಲ್ ಮೂಲಕ ಕಳುಹಿಸಲಾಗಿದೆ.

ಇಮೇಲ್ ವಿಳಾಸಗಳನ್ನು ಇನ್ನೂ ನೋಂದಾಯಿಸಿಕೊಂಡಿರದ ಆದರೆ ಅವರ ಮೊಬೈಲ್ ಸಂಖ್ಯೆಗಳು ನಮ್ಮಲ್ಲಿ ಲಭ್ಯವಿವೆ ಎನ್ನುವಂತಹ ಸಂದರ್ಭಗಳಲ್ಲಿ ಸದಸ್ಯರಿಗೆ ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮೂಲಕ ಎಸ್ಸೆಮೆಸ್ (SMS) ಗಳನ್ನು ಕಳುಹಿಸಲಾಗುತ್ತಿದೆ, ಅದರಲ್ಲಿ, ನೋಟಿಸನ್ನು ಡೌನ್‌ಲೋಡ್ ಮಾಡಿಕೊಳ್ಳಲು ವೆಬ್‌ಲಿಂಕ್ ಇರುತ್ತದೆ. ಪ್ರಸ್ತಾವಿತ ರಿಮೋಟ್ ಇವೋಟಿಂಗ್‌ನಲ್ಲಿ ಭಾಗವಹಿಸುವ ಉದ್ದೇಶವಿರುವ ಸದಸ್ಯರಲ್ಲಿ ಕೆಲವರಿಗೆ ಈ ವಿಷಯದ ಕುರಿತಾಗಿ ನೀಡಿರುವಂತಹ ಇತರ ಸಂವಹನವು ತಪ್ಪಿಹೋಗಿರುವಂತಹ/ತಲುಪಿಲ್ಲದಿರುವಂತಹ ಸಂದರ್ಭಗಳಿರಬಹುದು. ಆದ್ದರಿಂದ ಎಲ್ಲ ಸದಸ್ಯರಿಗೂ ವಿಷಯ ತಿಳಿಯಲಿ ಎಂಬ ಒಂದೇ ಉದ್ದೇಶದಿಂದ ಈ ಸೂಚನೆಯನ್ನು ನೀಡುತ್ತಿದ್ದೇವೆ ಎಂಬುದನ್ನು ದಯವಿಟ್ಟು ತಿಳಿಯಿರಿ.

ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಿರದ, ಮತ್ತು ಆ ಕಾರಣವಾಗಿ ಸದರಿ ಸೂಚನೆಯನ್ನು ಸ್ವೀಕರಿಸಲಾಗದಿರುವ ಸದಸ್ಯರು https://ipostatus.integratedregistry.in/KYCRegister.aspx ಲಿಂಕ್ ಮೇಲೆ ಕ್ಲಿಕ್ಕಿಸಿ ನಂತರ ಅಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ತಮ್ಮ ಇಮೇಲ್ ವಿಳಾಸವನ್ನು ಆರ್‌ಟಿಎ ಒಂದಿಗೆ ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸವನ್ನು ಯಶಸ್ವಿಯಾಗಿ ನೋಂದಾಯಿಸಿಕೊಂಡ ನಂತರ ಸದಸ್ಯರಿಗೆ ಸೂಚನೆಯ ಸಾಫ್ಟ್ ಕಾಪಿ ಮತ್ತು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆ, ಹಾಗೂ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳು ದೊರೆಯುತ್ತವೆ, ಮತ್ತು ಇವುಗಳ ನೆರವಿನಿಂದ ಸದಸ್ಯರು ಈ ಸೂಚನೆಯ ಮೇಲೆ ರಿಮೋಟ್ ಇ–ವೋಟಿಂಗ್ ಮಾಡಬಹುದು. ಇಲ್ಲದಿದ್ದರೆ, ಸದಸ್ಯರು ಯಾವುದೇ ಕೆಲಸದ ದಿನದಂದು (ಶನಿವಾರ ಮತ್ತು ಭಾನುವಾರ ಹೊರತುಪಡಿಸಿ) ಬೆಳಗ್ಗೆ 9.00 ರಿಂದ ಸಂಜೆ 5.00 ರವರೆಗೆ ಮತದಾನದ ಅವಧಿ ಮುಗಿಯುವ 48 ಗಂಟೆಗಳ ಮೊದಲು ಕಂಪನಿ ಅಥವಾ ಆರ್‌ಟಿಎ ಅವರ ಈ ಕೆಳಗಿನ ಇಮೇಲ್ ವಿಳಾಸಕ್ಕೆ ಫೋಲಿಯೊ ಸಂಖ್ಯೆ / ಡಿಮ್ಯಾಟ್ ಖಾತೆ ಸಂಖ್ಯೆಯನ್ನು ನಮೂದಿಸಿ ವಿನಂತಿ / ಸಂವಹನವನ್ನು ಕಳುಹಿಸಬೇಕಾಗಿ ವಿನಂತಿಸುತ್ತಿದ್ದೇವೆ. ಕಂಪನಿಯ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: comp.secy@astrazeneca.com/ 080 67748000 ಮತ್ತು ಆರ್‌ಟಿಎಯ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: irg@inetgratedindia.in / 080 23460815–18. ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು irg@inetgratedindia.in ಗೆ ಬರೆಯಬಹುದು.

ವಿದ್ಯುನ್ಮಾನ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ಡಿಪಾಸಿಟರೀಸ್/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೂ; ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವವರು ಆರ್‌ಟಿಎ ಒಂದಿಗೂ ನೋಂದಾಯಿಸಿಕೊಳ್ಳಬೇಕಾಗಿ ಕೋರುತ್ತೇವೆ.

ಇ–ವೋಟಿಂಗ್ ಅವಧಿಯು **ಭಾನುವಾರ, ಏಪ್ರಿಲ್ 12, 2026** ರಂದು ಭಾ.ಕಾ.ಮಾ. ಬೆಳಗ್ಗೆ 09.00 ರಿಂದ ಆರಂಭವಾಗಿ **ಸೋಮವಾರ, ಮೇ 11, 2026** ರಂದು ಭಾ.ಕಾ.ಮಾ. ಸಂಜೆ 05.00 ಕ್ಕೆ ಮುಕ್ತಾಯಗೊಳ್ಳುತ್ತದೆ. ಈ ಅವಧಿಯಲ್ಲಿ, **ಶುಕ್ರವಾರ, ಏಪ್ರಿಲ್ 3, 2026** ರಂದು (ಕೊನೆಯ ದಿನಾಂಕ) ಭೌತಿಕ ಅಥವಾ ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಮತಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಚಲಾಯಿಸಬಹುದು. ಮೇಲೆ ಹೇಳಿದ ದಿನಾಂಕ ಮತ್ತು ಸಮಯ ಕಳೆದ ನಂತರ ಎನ್‌ಎಸ್‌ಡಿಎಲ್ ಇ–ವೋಟಿಂಗ್ ಮಾಡ್ಯೂಲನ್ನು ನಿಷ್ಕ್ರಿಯಗೊಳಿಸುವುದರಿಂದ ಮತದಾನ ಸಾಧ್ಯವಿರುವುದಿಲ್ಲ. ಒಮ್ಮೆ ಸದಸ್ಯರು ನಿರ್ಣಯಗಳ ಮೇಲೆ ಮತವನ್ನು ಚಲಾಯಿಸಿ ದೃಢಪಡಿಸಿದ ನಂತರ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ಕೊನೆಯ ದಿನಾಂಕದಂದು ಕಂಪನಿಯ ಸದಸ್ಯರಾಗಿರದ ಯಾರಿಗೇ ಆಗಲಿ ಅಂಚೆ ಮತದಾನದ ಸೂಚನೆ ಬಂದಿದ್ದರೆ ಅಂತಹವರು ಅದನ್ನು ತಮ್ಮ ಮಾಹಿತಿಗಾಗಿ ಮಾತ್ರವೇ ಎಂದು ಭಾವಿಸಬೇಕು. ಸದಸ್ಯರ ಮತದಾನದ ಹಕ್ಕುಗಳು ಕೊನೆಯ ದಿನಾಂಕದಂದು ಕಂಪನಿಯ ಪೇಯ್ಡಪ್ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಷೇರುಗಳ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ.

ಅಂಚೆ ಮತದಾನದ ಸೂಚನೆ ಮತ್ತು ಇವೋಟಿಂಗ್ ಪ್ರಕ್ರಿಯೆಯ ವಿಧಾನವನ್ನು www.evoting.nsdl.com ಅಥವಾ www.astrazeca.com/india ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅಂಚೆ ಮತದಾನ ಪ್ರಕ್ರಿಯೆ ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಲು ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಬೆಂಗಳೂರು, ಸಿ.ಪಿ. ಸಂ.980, ಸದಸ್ಯತ್ವ ಸಂಖ್ಯೆ FCS:1788, ಇವರನ್ನು ಅಂಚೆ ಮತದಾನ ಪ್ರಕ್ರಿಯೆಯ ಸೂಕ್ಷ್ಮ ಪರಿಶೀಲಕರೆಂದು ನೇಮಕ ಮಾಡಿರುತ್ತದೆ.

ಅಂಚೆ ಮತಪತ್ರದ ಮೂಲಕ (ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ) ನಡೆಸಿದ ಮತದಾನದ ಫಲಿತಾಂಶವನ್ನು **ಬುಧವಾರ, ಮೇ 13, 2026** ರಂದು ಅಥವಾ ಅದಕ್ಕೂ ಮೊದಲು ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುತ್ತದೆ. ರಿಮೋಟ್ ಇ–ವೋಟಿಂಗ್‌ನ ಫಲಿತಾಂಶಗಳು ಮತ್ತು ಸೂಕ್ಷ್ಮ ಪರಿಶೀಲಕರ ವರದಿಯನ್ನು ಕಂಪನಿಯ ವೆಬ್‌ಸೈಟ್ www.astrazeneca.com/india ನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ಕಂಪನಿಯ ಇಕ್ವಿಟಿ ಷೇರುಗಳನ್ನು ಲಿಸ್ಟ್ ಮಾಡಲಾಗಿರುವ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಬಿಎಸ್‌ಇ ಲಿಮಿಟೆಡ್‌ಗೂ ತಿಳಿಸಲಾಗುತ್ತದೆ.

ಅಗತ್ಯವಿರುವ ಬಹುಮತದೊಂದಿಗೆ ಅನುಮೋದನೆ ದೊರೆತರೆ, ರಿಮೋಟ್ ಇ–ವೋಟಿಂಗ್‌ಗಾಗಿ ಕಂಪನಿಯು ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕದಂದೇ ನಿರ್ಣಯಗಳನ್ನು ಅಂಗೀಕರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ವಿದ್ಯುನ್ಮಾನ ವಿಧಾನದ ಮೂಲಕ ಮಾಡುವ ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿ ಇರುವ ಷೇರುದಾರರು ಪದೇ ಪದೇ ಕೇಳುವಂತಹ ಪ್ರಶ್ನೆಗಳು (FAQ ಗಳು) ಭಾಗವನ್ನು ಮತ್ತು ಇ–ಮತದಾನ ಬಳಕೆದಾರ ಕೈಪಿಡಿಯನ್ನು ನೋಡಬಹುದು ಅಥವಾ evoting@nsdl.com ಗೆ ನಿಮ್ಮ ವಿನಂತಿಯನ್ನು ಕಳುಹಿಸಬಹುದು. ರಿಮೋಟ್ ಇ–ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆ ಅಥವಾ ದೂರುಗಳನ್ನು ಶ್ರೀ ಫಲ್ಗುಣಿ ಚಕ್ರವರ್ತಿ, ಡೆಪ್ಯುಟಿ ಮ್ಯಾನೇಜರ್, ಎನ್‌ಎಸ್‌ಡಿಎಲ್, ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್, ಟಿ301, 3 ನೇ ಮಹಡಿ, ನಮನ್ ಛೇಂಬರ್ಸ್, ಜಿ ಬ್ಲಾಕ್, ಪ್ಲಾಟ್ ಸಂಖ್ಯೆ– ಸಿ–32, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಪೂರ್ವ ಬಾಂದ್ರಾ, ಮುಂಬೈ– 400051 ಈ ವಿಳಾಸಕ್ಕೆ ಬರೆಯಬಹುದು ಅಥವಾ 022 – 4886 7000 ಗೆ ಕರೆ ಮಾಡಬಹುದು.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
(ಸಹಿ/–)
ತಾನ್ಯಾ ಸನೀಶ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್

ಸ್ಥಳ: ಮುಂಬೈ
ದಿನಾಂಕ: ಏಪ್ರಿಲ್ 10, 2026

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬಾಶೆಟ್ಟಿಹಳ್ಳಿ
ಬಾಶೆಟ್ಟಿಹಳ್ಳಿ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ. itstaff ulb bashettihalli1@gmail.com

ಸಂಖ್ಯೆ:ಬಾ.ಪ.ಪಂ/ತಾ.ಶಾ/ಟೆ.ಪ್ರ/ಸಿ.ಆರ್/06/2026–27 ದಿನಾಂಕ:09.04.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಾಲ್) ಮೂಲಕ ಮಾತ್ರ)
(ಸ್ಟಾಂಡರ್ಡ್‌ಡಾಕ್ಯುಮೆಂಟ್ KW-1 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯ 2025–26ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿಯಡಿ ಬಿಡುಗಡೆಯಾಗಿರುವ ಅನುದಾನದಡಿ ಸಿ.ಸಿ. ರಸ್ತೆ, ಡಾಂಬರ್ ರಸ್ತೆ, ಚರಂಡಿ ಕಾಮಗಾರಿ, ಕೆರೆ ಅಭಿವೃದ್ಧಿ, ಚರಂಡಿಗಳ ಸ್ವಚ್ಛತೆ, ಹೆಚ್.ಡಿ.ಪಿ.ಇ. ಪೈಪ್‌ಲೈನ್ ಕಾಮಗಾರಿ, ಕಟ್ಟಡ ಕಾಮಗಾರಿ, ಎಲೆಕ್ಟ್ರಿಕಲ್ಸ್ ಪೋಲ್ಸ್, ಟಿ.ಸಿ. ಅಳವಡಿಸುವ ಕಾಮಗಾರಿ, ಇತ್ಯಾದಿ ಕಾಮಗಾರಿಗಳ ಒಟ್ಟು **ಮೊತ್ತ ರೂ: 306.26 ಲಕ್ಷಗಳ** ಒಟ್ಟು 22 ಕಾಮಗಾರಿಗಳನ್ನು ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯಿತಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಶ್ರೀ.ಎಸ್ .ಪ್ರೇಮ್ ಕುಮಾರ್, ಅಧ್ಯಕ್ಷರು ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ
ಸಹಿ/– ಶ್ರೀಮತಿ, ಶ್ವೇತಾ ಮುರಳಿಧರ್, ಉಪಾಧ್ಯಕ್ಷರು ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ
ಸಹಿ/– ಪಿ. ನರಸಿಂಹಮೂರ್ತಿ. ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ

ವಾಸಾಸಂಇ/ವಾ.ಪ್ರ./135/ಶಿರಡಿ ಸಾಯಿ/2026–27

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಶೇಷ ವಿಭಾಗ
ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು–560 092
ಸಂಖ್ಯೆ:ಬೆಉನಪಾ/ಕಾಪಾಅ/ವಿ.ವಿ/ಟೆಂಡರ್/01/2026–27 ದಿನಾಂಕ: 10–04–2026

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ಬೆಂಗಳೂರು ಉತ್ತರ ನಗರ ಪಾಲಿಕೆ ಇವರು ಆಯುಕ್ತರು, ಬೆಂ.ಉ.ನ.ಪಾಲಿಕೆ ಇವರ ಪರವಾಗಿ ಅರ್ಹ ಟೆಂಡರುದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಸರ್ವಜ್ಞನಗರ, ಹೊರವರ್ತುಲ ರಸ್ತೆ, ಮಲಬಾರ್ ಜಂಕ್ಷನ್ ಹತ್ತಿರ [ಹೆಚ್.ಬಿ.ಆರ್. ಬಡಾವಣೆ, ಕೆ.ಪಿ.ಟಿ.ಸಿ.ಎಲ್ ಥೀಮ್ ಪಾರ್ಕ್] ಪಿಪಿಪಿ ಮಾದರಿಯಡಿಯಲ್ಲಿ, ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ಹಸ್ತಾಂತರ [ಡಿಬಿಎಫ್‌ಓಟಿ] ಮೇಲೆ ಡೈನಾಮಿಕ್ ಬಾಳಿಕೆ ಮಾದರಿ ಆಧರಿಸಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡುವುದು. [2ನೇ ಕರೆ] **ಇಎಂಡಿ ಮೊತ್ತ: ₹.5.00 ಲಕ್ಷಗಳು.**
2.	ಪುಲಿಕೇಶಿನಗರ, ವಾರ್ಡ್ ಸಂಖ್ಯೆ–78, ಹೈನ್ಸ್ ರಸ್ತೆ, ಹೈನ್ಸ್ ಜಂಕ್ಷನ್‌ನಲ್ಲಿ ಪಿಪಿಪಿ ಮಾದರಿಯಡಿ, ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ಹಸ್ತಾಂತರ [ಡಿಬಿಎಫ್‌ಓಟಿ] ಮೇಲೆ ಡೈನಾಮಿಕ್ ಬಾಳಿಕೆ ಮಾದರಿ ಆಧರಿಸಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡುವುದು. [2ನೇ ಕರೆ] **ಇಎಂಡಿ ಮೊತ್ತ: ₹.5.00 ಲಕ್ಷಗಳು.**
3.	ಪುಲಿಕೇಶಿನಗರ, ವಾರ್ಡ್ ಸಂಖ್ಯೆ–60, ಹೆಣ್ಣೂರು ಮುಖ್ಯರಸ್ತೆ, ಚಾರ್ಲ್ಸ್ ಶಾಲೆಯಲ್ಲಿ ಪಿಪಿಪಿ ಮಾದರಿಯಡಿ, ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ಹಸ್ತಾಂತರ [ಡಿಬಿಎಫ್‌ಓಟಿ] ಮೇಲೆ ಡೈನಾಮಿಕ್ ಬಾಳಿಕೆ ಮಾದರಿ ಆಧರಿಸಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡುವುದು. [2ನೇ ಕರೆ] **ಇಎಂಡಿ ಮೊತ್ತ: ₹.5.00 ಲಕ್ಷಗಳು.**
4.	ಪುಲಿಕೇಶಿನಗರ, ವಾರ್ಡ್ ಸಂಖ್ಯೆ–78, ಸಿಂಧಿ ಕಾಲೋನಿ, ವೀಲರ್ಸ್ ರಸ್ತೆಯಲ್ಲಿ ಪಿಪಿಪಿ ಮಾದರಿಯಡಿ, ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ಹಸ್ತಾಂತರ [ಡಿಬಿಎಫ್‌ಓಟಿ] ಮೇಲೆ ಡೈನಾಮಿಕ್ ಬಾಳಿಕೆ ಮಾದರಿ ಆಧರಿಸಿ ವಾಣಿಜ್ಯ ಜಾಹೀರಾತು ಹಕ್ಕುಗಳಡಿಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡುವುದು. [2ನೇ ಕರೆ] **ಇಎಂಡಿ ಮೊತ್ತ: ₹.5.00 ಲಕ್ಷಗಳು.**

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳು ದಿನಾಂಕ: **13–04–2026** ದೊರೆಯುತ್ತವೆ. (2)ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21–04–2026**ರ ಮಧ್ಯಾಹ್ನ **3:00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ವಲಯ–1, ಬೆಂ.ಉ.ನ.ಪಾ, 2 ನೇ ಮಹಡಿ, ಅಮೃತಹಳ್ಳಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು –92 ಇಲ್ಲಿ ದಿನಾಂಕ: **21–04–2026**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **04–05–2026**ರ ಸಂಜೆ **4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್ಡನ್ನು ದಿನಾಂಕ: **05–05–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿಶೇಷ ವಿಭಾಗ, ಬೆಂ.ಉ.ನ.ಪಾ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಪ್ರಕಟಣೆ

ಸಂಖ್ಯೆ: ಕಾನಿಇಂವಿ/ಪಿಎನ್‌ಡಿಬಿ/ಸಕಾನಿಇಂ–1/ಸಇ–1/2026–27/38–39 ದಿನಾಂಕ: 07.04.2026

ಕವಿಪ್ರನಿನಿಯ ವಿದ್ಯುತ್ ಪೂರೈಕೆ ಅಧಿನಿಯಮ 2003 ಸೆಕ್ಷನ್ 67ರ ಅನುಸಾರವಾಗಿ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ನಿಗಮದ ಪ್ರಸರಣ 67(II)ರ ಅನ್ವಯ ಈ ಮೂಲಕ ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಿಸುತ್ತಿದೆ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

1. ಯೋಜನೆಯ ಹೆಸರು:

2x20 ಎಂವಿಎ, 66/11ಕೆವಿ ಮಾಚಗೊಂಡನಹಳ್ಳಿ ವಿದ್ಯುತ್ ಕೇಂದ್ರದ ಯೋಜನೆಯನ್ನು ಸ್ಥಾಪಿಸುವ ಹಾಗೂ ಸಂಬಂಧಿಸಿದ 66ಕೆವಿ ವಿದ್ಯುತ್ ಮಾರ್ಗವನ್ನು ರಚಿಸುವ ಯೋಜನೆಯ ವಿವರಗಳು ಈ ಕೆಳಕಂಡಂತಿರುತ್ತದೆ.

i. ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2x20 ಎಂವಿಎ, 66/11ಕೆವಿ ಮಾಚಗೊಂಡನಹಳ್ಳಿ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವುದು.

ii.ಹಾಲಿ ಇರುವ 66ಕೆವಿ ದೊಡ್ಡಬಳ್ಳಾಪುರ–ಚಿಕ್ಕಬಳ್ಳಾಪುರ–2 ವಿದ್ಯುತ್ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಮಾಚಗೊಂಡನಹಳ್ಳಿ ವಿದ್ಯುತ್ ಕೇಂದ್ರದವರೆಗೆ ಡ್ರೇಕ್ ವಾಹಕವನ್ನು ಬಳಸಿ 0.457 ಕಿ.ಮೀ ಉದ್ದದಷ್ಟು 66 ಕೆವಿ ಲಿಲೋ ವಿದ್ಯುತ್ ಮಾರ್ಗದ ನಿರ್ಮಾಣ.

ಹೊಸ ಮಾರ್ಗ ಹಾದು ಹೋಗುವ ಸರ್ವೆ ಸಂಖ್ಯೆಯ ವಿವರಗಳು.
ಹಳ್ಳಿ: **ಮಾಚಗೊಂಡನಹಳ್ಳಿ ಹೋಬಳಿ: ತೂಬಗೆರೆ,** ತಾಲ್ಲೂಕು: **ದೊಡ್ಡಬಳ್ಳಾಪುರ,**
ಜಿಲ್ಲೆ: **ಬೆಂಗಳೂರು ಗ್ರಾಮಾಂತರ**

ಕ್ರ ಸಂ	ಗೋಪುರ ಸಂಖ್ಯೆ	ಸರ್ವೆ ಸಂಖ್ಯೆ
1	ಹಾಲಿ ಗೋ. ಸಂ. 49 to ಗೋ. ಸಂ.1	6
2	ಗೋ. ಸಂ.1 to ಗೋ. ಸಂ.2	6
3	ಗೋ. ಸಂ.2 to ಗೋ. ಸಂ.3	6
4	ಗೋ. ಸಂ.3 to ಗೋ. ಸಂ.4	154
5	ಗೋ. ಸಂ.4 to ಗೋ. ಸಂ.5	148
6	ಗೋ. ಸಂ.5 to Bay	148

2. ಉದ್ದೇಶಗಳು:

- ಈ ವಿದ್ಯುತ್ ಸ್ಥಾವರವು ಕೈಗಾರಿಕಾ, ವಾಣಿಜ್ಯ, ಕೃಷಿ ಮತ್ತು ಗೃಹ ಬಳಕೆಯ ಲೋಡ್‌ಗಳ ಐಡಿಯಲ್ ಲೋಡ್ ಕೇಂದ್ರವಾಗಿರುತ್ತದೆ.
- ಸದರಿ ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವುದರಿಂದ ಸುತ್ತಮುತ್ತಲಿನ ಪ್ರದೇಶಗಳಿಗೆ ನಿರಂತರ ಮತ್ತು ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುತ್ತದೆ ಹಾಗೂ ಭವಿಷ್ಯದ ವಿದ್ಯುತ್ ಹೊರೆಯನ್ನು ನೀಗಿಸಬಹುದಾಗಿರುತ್ತದೆ.
- ಹಾಲಿ ಇರುವ 66/11ಕೆವಿ ತೂಬಗೆರೆ ಹಾಗೂ 66/11ಕೆವಿ ಡಿ ಕ್ರಾಸ್ ವಿದ್ಯುತ್ ಕೇಂದ್ರಗಳ ಹೊರೆಯನ್ನು ಕಡಿಮೆ ಮಾಡಬಹುದಾಗಿರುತ್ತದೆ ಮತ್ತು 11ಕೆವಿ ವಿದ್ಯುತ್ ಮಾರ್ಗಗಳ ನಷ್ಟವನ್ನು ಕಡಿಮೆ ಮಾಡಬಹುದಾಗಿರುತ್ತದೆ. ಈ ಯೋಜನೆಯಿಂದ ವಾರ್ಷಿಕ ಇಂಧನ ಉಳಿತಾಯದೊಂದಿಗೆ ಸಿಸ್ಟಮ್ ನಷ್ಟವನ್ನು 1.595 MU ರಷ್ಟು ಕಡಿಮೆಗೊಳಿಸಬಹುದಾಗಿರುತ್ತದೆ.

3. ಅಂದಾಜು ವೆಚ್ಚ: ರೂ. 2557.44 ಲಕ್ಷಗಳು

ಕವಿಪ್ರನಿನಿಯ ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು 1885 ರ ಭಾರತೀಯ ಟೆಲಿಗ್ರಾಫ್ ಅಧಿನಿಯಮ ಭಾಗ (3)ರ (ಕೇಂದ್ರೀಯ ಕಾಯಿದೆ 1885ರ 13) ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ನಿಗಮದ ಗಮನಕ್ಕೆ ಈ ಪ್ರಕಟಣೆ ಪ್ರಕಟವಾದ **15 ದಿನಗಳ ಒಳಗೆ** ಈ ಕೆಳಸಹಿದಾರರ ಕಚೇರಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಯೋಜನೆ ಉತ್ತರ ವಿಭಾಗ, ಕ.ವಿ.ಪ್ರ.ನಿ.ನಿ., ಬೆಂಗಳೂರು–560009.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಾವೀಗ ಸ್ವತಂತ್ರರಾಗಿದ್ದೇವೆ. ದೇಶ ಹಾಳಾದರೆ ನಮ್ಮಿಂದಲೇ ಹಾಳಾಗಬೇಕು. ಹೊರಗಿನವರಿಂದಲ್ಲ.

-ದ.ರಾ. ಬೇಂದ್ರೆ

ಸಂಪಾದಕೀಯ

ಗೌರವ ಡಾಕ್ಟರೇಟ್‌ಗಳ ಅಪಮೌಲ್ಯ ವಿಶ್ವಾಸಾರ್ಹತೆಗೆ ಕಠಿಣ ಕ್ರಮ ಅಗತ್ಯ

ಹಾವೇರಿ ವಿಶ್ವವಿದ್ಯಾಲಯ ಪ್ರಕಟಿಸಿದ್ದ ಗೌರವ ಡಾಕ್ಟರೇಟ್ ಅನ್ನು ಸ್ವೀಕರಿಸಲು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಿರಾಕರಿಸಿರುವುದು, ವಿರಳವಾಗುತ್ತಿರುವ ಶೈಕ್ಷಣಿಕ ಮೌಲ್ಯಗಳನ್ನು ನೆನಪಿಸುವ ಪ್ರಯತ್ನವಾಗಿದೆ. ಸಾರ್ವಜನಿಕ ಸೇವೆಯು ಪ್ರದರ್ಶನಕ್ಕೆ ಯೋಗ್ಯವಾದ ಪ್ರಮಾಣಪತ್ರವಲ್ಲ; ನಿರ್ದಿಷ್ಟ ಕ್ಷೇತ್ರಗಳಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಸಾಧಕರ ಜೀವಮಾನ ಸಾಧನೆಯನ್ನು ಗೌರವಿಸಲು ಗೌರವ ಡಾಕ್ಟರೇಟ್ ಮೀಸಲಾಗಿರಬೇಕು ಎಂದು ತಮ್ಮ ನಿರಾಕರಣೆಗೆ ಬೊಮ್ಮಾಯಿ ಅವರು ನೀಡಿರುವ ಕಾರಣ ಸರಿಯಾಗಿದೆ. ಕಳೆದ ವರ್ಷ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆಎಸ್‌ಒಯು) ನೀಡಲು ಮುಂದಾಗಿದ್ದ ಗೌರವ ಡಾಕ್ಟರೇಟ್ ಅನ್ನು ಸಚಿವ ಸತೀಶ ಜಾರಕಿಹೊಳಿ ನಿರಾಕರಿಸಿದ್ದರು. ಇಬ್ಬರು ರಾಜಕಾರಣಿಗಳ ಈ ನಿಲುವು ಉಳಿದ ರಾಜಕೀಯ ನಾಯಕರಿಗೆ ಮಾದರಿ ಆಗಬೇಕಾಗಿದೆ ಹಾಗೂ ವಿಶ್ವವಿದ್ಯಾಲಯಗಳಿಗೆ ಪಾಠ ಆಗಬೇಕಾಗಿದೆ. ದುರದೃಷ್ಟವಶಾತ್, ರಾಜ್ಯದ ವಿಶ್ವವಿದ್ಯಾಲಯಗಳು ಇತ್ತೀಚಿನ ವರ್ಷಗಳಲ್ಲಿ ಶೈಕ್ಷಣಿಕ ಬದ್ಧತೆಯಿಂದ ದೂರ ಸರಿಯುತ್ತಿವೆ. ಇದರ ಪರಿಣಾಮವಾಗಿ ಗೌರವ ಡಾಕ್ಟರೇಟ್‌ಗಳ 'ಹಂಚಿಕೆ' ನಡೆಯುತ್ತಿದೆ. ಜ್ಞಾನಕೇಂದ್ರಗಳಾಗಿ ಗುರುತಿಸಿಕೊಳ್ಳಬೇಕಾಗಿದ್ದ ವಿಶ್ವವಿದ್ಯಾಲಯಗಳು, ನೈಜ ಪ್ರತಿಭೆ ಹಾಗೂ ಸಾಧನೆಯನ್ನು ಗುರುತಿಸುವ ಬದಲಾಗಿ ಪ್ರಭಾವ, ಓಲೈಕೆಗೆ ಮಣೆ ಹಾಕುತ್ತಿವೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯು ಈ ಪದವಿಗಳನ್ನು ಅಸಾಧಾರಣ ಸಂದರ್ಭಗಳಲ್ಲಿ ಪ್ರತಿಷ್ಠಿತ ಸಾಧನೆಗಾಗಿ ಅಥವಾ ಗಮನಾರ್ಹ ಸೇವೆಗಾಗಿ ಮಾತ್ರ ನೀಡಲು ಅನುಮತಿಸುತ್ತದೆ. ಆದರೆ, ಇತ್ತೀಚಿನ ವರ್ಷಗಳ ಬಹುತೇಕ ಆಯ್ಕೆಗಳು ಕಾಯ್ದೆಗೆ ಅನುಗುಣವಾಗಿಲ್ಲ, ವಿಶ್ವವಿದ್ಯಾಲಯಗಳ ಉನ್ನತ ಪರಂಪರೆಗೆ ಅನುಗುಣವಾಗಿಯೂ ಇಲ್ಲ.

ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು ಅರ್ಹತೆಯ ಬದಲಾಗಿ ಪ್ರಭಾವಕ್ಕೆ ದೊರೆಯುತ್ತವೆ ಎನ್ನುವ ಪರಿಸ್ಥಿತಿಯು ವಿ.ವಿ.ಗಳ ಬೌದ್ಧಿಕ ಹಾಗೂ ನೈತಿಕ ದಾರಿದ್ರ್ಯದ ಸಂಕೇತ.

ಕೆಎಸ್‌ಒಯು ಕುಲಪತಿ, ಏಕಪಕ್ಷೀಯವಾಗಿ ಎಂಟು ಹೆಸರುಗಳನ್ನು ಅಂತಿಮಗೊಳಿಸಿದ ಹಿನ್ನೆಲೆಯಲ್ಲಿ ನಿರ್ವಹಣಾ ಮಂಡಳಿಯ ಕೆಲವು ಸದಸ್ಯರು ಗೌರವ ಡಾಕ್ಟರೇಟ್ ಪ್ರದಾನ ಸಮಾರಂಭವನ್ನು ಬಹಿಷ್ಕರಿಸಿದ್ದರು. ಸಿಂಡಿಕೇಟ್ ಅನ್ನು ಬದಿಗಿಟ್ಟು, ಹೆಚ್ಚುವರಿ ಹೆಸರುಗಳನ್ನು ಒಳಗೊಂಡ ಪಟ್ಟಿಯನ್ನು ಕುಲಾಧಿಪತಿಗೆ ಕಳುಹಿಸಿದ ಘಟನೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದಿದೆ. ಗೌರವ ಡಾಕ್ಟರೇಟ್‌ಗಳನ್ನು ಸಿನಿಮಾ ತಾರೆಯರು, ಉದ್ಯಮಿಗಳು, ಮಠಾಧಿಪತಿಗಳು ಹಾಗೂ ರಾಜಕಾರಣಿಗಳಿಗೆ ವಿವೇಚನೆಯಿಲ್ಲದೆ ನೀಡುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಇದರಿಂದಾಗಿ ವಿಶ್ವವಿದ್ಯಾಲಯಗಳು 'ಡಾಕ್ಟರೇಟ್ ಕಾರ್ಖಾನೆ'ಗಳ ಸ್ವರೂಪ ಪಡೆದುಕೊಂಡಿವೆ; 'ಗೌರವ'ದ ಅರ್ಥ ಹಾಗೂ ಮೌಲ್ಯ ಕ್ಷೀಣಗೊಂಡು ಹಣಬಲ, ಅಧಿಕಾರಬಲ ಹೊಂದಿದ ಯಾರು ಬೇಕಾದರೂ ಗೌರವ ಡಾಕ್ಟರೇಟ್ ಪಡೆಯಬಹುದು ಎನ್ನುವ ಸ್ಥಿತಿ ಸೃಷ್ಟಿಯಾಗಿದೆ. ಕುಲಪತಿಗಳು ಅಧಿಕಾರ ಕೇಂದ್ರಗಳಿಗೆ ಹತ್ತಿರವಾಗಲು ಗೌರವ ಪದವಿಗಳನ್ನು ಬಳಸಿಕೊಂಡಿರುವ ಉದಾಹರಣೆಗಳೂ ಇವೆ. ಗೌರವ ಡಾಕ್ಟರೇಟ್ ಪದವಿಗಳನ್ನು ಸಗಟಾಗಿ ನೀಡುವ ಬೆಳವಣಿಗೆಯು, ವರ್ಷಗಳ ಕಾಲದ ಶ್ರಮ, ಬೌದ್ಧಿಕ ಅನುಸಂಧಾನ ಹಾಗೂ ಸಂಶೋಧನೆಯ ಮೂಲಕ ಡಾಕ್ಟರೇಟ್ ಪಡೆದವರನ್ನು ಅವಮಾನಿಸುವಂತಿದೆ. 'ಡಾ' ಎನ್ನುವ ಉಪಾಧಿಯ ಬಗೆಗೆ ಸಮಾಜದಲ್ಲಿ ಇರುವ ಆಕರ್ಷಣೆಯು ಗೌರವ ಡಾಕ್ಟರೇಟ್‌ಗಳ ಅಪಮೌಲ್ಯಕ್ಕೆ ಕಾರಣವಾಗಿದೆ. ಈ ಗೌರವ ಪದವಿಗಳಿಗೆ ಸಂಬಂಧಿಸಿದಂತೆ ದೇಶದಲ್ಲಿ ಸ್ಪಷ್ಟವಾದ ಕಾನೂನು ನಿರ್ಬಂಧಗಳಿಲ್ಲ. ಆದರೆ, ಇದು ಪ್ರಶಂಸೆಗೆ ಅರ್ಹವಾದ ಗೌರವವೇ ಹೊರತು ಶೈಕ್ಷಣಿಕ ಅರ್ಹತೆಯಲ್ಲ ಎಂದು 'ವಿಶ್ವವಿದ್ಯಾಲಯ ಅನುದಾನ ಆಯೋಗ' (ಯುಜಿಸಿ) ಸ್ಪಷ್ಟಪಡಿಸಿದೆ. ಅಮೆರಿಕ ಮತ್ತು ಇಂಗ್ಲೆಂಡ್‌ಗಳಲ್ಲಿ ಗೌರವ ಪದವಿಗಳನ್ನು ವೃತ್ತಿಪರ ಚಟುವಟಿಕೆಗಳಲ್ಲಿ ಬಳಸುವುದಿಲ್ಲ.

ರಾಜ್ಯಪಾಲರೂ, ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆದ ಥಾವರಚಂದ್ ಗೆಹಲೋತ್ ಅವರು ಗೌರವ ಡಾಕ್ಟರೇಟ್‌ಗಳಿಗೆ ಸಂಬಂಧಿಸಿದಂತೆ ಅಂತಿಮ ನಿರ್ಣಯ ಕೈಗೊಳ್ಳುವ ಪರಮಾಧಿಕಾರ ಹೊಂದಿದ್ದಾರೆ. ಅಪರೂಪಕ್ಕೆ ಅವರು ಪ್ರತಿರೋಧ ವ್ಯಕ್ತಪಡಿಸಿದ್ದರೂ, ವ್ಯವಸ್ಥೆಯಲ್ಲಿ ಸುಧಾರಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮೇಲ್ವಿಚಾರಣೆಯ ಅಗತ್ಯವಿದೆ. ಎಲ್ಲ ವಿಶ್ವವಿದ್ಯಾಲಯಗಳಿಗೆ ಹೊಂದುವಂತೆ ಏಕರೂಪದ ಮಾರ್ಗಸೂಚಿ ರೂಪಿಸಲು ತಜ್ಞರ ಸಮಿತಿಯೊಂದನ್ನು ರಚಿಸುವುದಾಗಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಹೇಳಿದ್ದಾರೆ. ಅವರ ಪ್ರಸ್ತಾವ ಸಕಾಲಿಕ ಹಾಗೂ ಸ್ವಾಗತಾರ್ಹ. ಏಕರೂಪದ ಮಾನದಂಡಗಳು, ಮೌಲ್ಯಮಾಪನದಲ್ಲಿನ ಪಾರದರ್ಶಕತೆ ಹಾಗೂ ಸ್ವತಂತ್ರ ಪರಿಶೀಲನೆಯು ಈ ವ್ಯವಸ್ಥೆಗೆ ಕಳೆದುಹೋಗಿರುವ ವಿಶ್ವಾಸಾರ್ಹತೆಯನ್ನು ಮತ್ತೆ ತಂದುಕೊಡಬಹುದು. ಡಾಕ್ಟರೇಟ್ ಎನ್ನುವುದು ಕಠಿಣ ಬೌದ್ಧಿಕ ಶ್ರಮಕ್ಕೆ ಅಥವಾ ನಿಸ್ವಾರ್ಥ ಸೇವೆಯ ಜೀವಮಾನ ಸಾಧನೆಗೆ ಸಲ್ಲುವ ಗೌರವ ಆಗಿರಬೇಕೇ ಹೊರತು, ಪ್ರಭಾವಿಗಳಿಗ ಅಲಂಕಾರ ಆಗಬಾರದು.

ಹಿಂದಿ ಹೇರಿಕೆಗೆ ಕಪಾಳಮೋಕ್ಷ

ಹಿಂದಿಗೆ ಗ್ರೇಡಿಂಗ್ ನೀಡುವ ರಾಜ್ಯ ಸರ್ಕಾರದ ನಿರ್ಧಾರ ವಿರೋಧಿಸಿ ಹೂಡಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿ, ದಂಡ ವಿಧಿಸಿದೆ. ಇದು ಹಿಂದಿ ಹೇರಿಕೆ ಪರವಾಗಿ ವಾದ ಮಾಡುತ್ತಿದ್ದವರಿಗೆ ನೇರವಾಗಿ ಮಾಡಿದ ಕಪಾಳಮೋಕ್ಷ.

ಟಿ.ಎ. ನಾರಾಯಣಗೌಡ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ, 'ಎಕ್ಸ್'ನಿಂದ

ಕಿಡಿನುಡಿ

ಸಿದ್ದರಾಮಯ್ಯನವರು ಹಣ ವಸೂಲಿಗಾಗಿ ತಮ್ಮ ಪುತ್ರನನ್ನು ನೇಮಿಸಿಕೊಂಡಿದ್ದಾರೆ. ಸಿ.ಎಂ ಮಗನ ವಸೂಲಿ ಹೇಗಿದೆ ಎಂಬುದು ಎಲ್ಲಾ ಅಧಿಕಾರಿಗಳಿಗೂ ಗೊತ್ತಿದೆ. ಕುಟುಂಬ ರಾಜಕಾರಣದ ಬಗ್ಗೆ ಮಾತಾಡುವ ನೈತಿಕತೆಯು ಸಿದ್ದರಾಮಯ್ಯ ಅವರಿಗಿಲ್ಲ.

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಬೃಹತ್ ಕೈಗಾರಿಕಾ ಸಚಿವ

25 ವರ್ಷಗಳ ಹಿಂದೆ

ಬುಧವಾರ, 11-4-2001

● ಅನವಶ್ಯಕ ಶಾಲೆಗಳು ಮಾತ್ರ ಸ್ಥಳಾಂತರ: ವಿಶ್ವನಾಥ್

ಮೈಸೂರು, ಏ. 10– ಅನವಶ್ಯಕವಾಗಿರುವ ಮತ್ತು ನಿಗದಿತ ಪ್ರಮಾಣದಲ್ಲಿ ವಿದ್ಯಾರ್ಥಿಗಳಿಲ್ಲದ ಹಿರಿಯ ಪ್ರಾಥಮಿಕ ಶಾಲೆಗಳ ತರಗತಿಗಳನ್ನು (ಮಾಧ್ಯಮಿಕ ಶಾಲೆ) ಹತ್ತಿರದ ಹಿರಿಯ ಪ್ರಾಥಮಿಕ ಶಾಲೆಗಳ ಜೊತೆ ವಿಲೀನಗೊಳಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಚ್. ವಿಶ್ವನಾಥ್ ಅವರು, ಸ್ಪಷ್ಟಪಡಿಸಿದರು.

ಕೆಲವು ಪ್ರದೇಶಗಳು, ಊರುಗಳಲ್ಲಿ ಎರಡೆರಡು ಹಿರಿಯ ಪ್ರಾಥಮಿಕ ಶಾಲೆಗಳಿವೆ. ಇವುಗಳಲ್ಲಿ ಕೆಲವು ಶಾಲೆಗಳಲ್ಲಿ ಅಗತ್ಯ ಪ್ರಮಾಣದ ವಿದ್ಯಾರ್ಥಿಗಳೇ ಇರುವುದಿಲ್ಲ. ಆದರೆ, ಶಿಕ್ಷಕರು ಸಾಕಷ್ಟು ಪ್ರಮಾಣದಲ್ಲಿದ್ದಾರೆ. ಇಂಥ ಹಿರಿಯ ಪ್ರಾಥಮಿಕ ಶಾಲೆಯನ್ನು ವಿಲೀನ ಮಾಡಲಾಗುವುದು. ಹಾಗೆಯೇ ಶಿಕ್ಷಕರನ್ನು ಸ್ಥಳಾಂತರಿಸಲಾಗುವುದು ಎಂದು ತಿಳಿಸಿದರು.

75 ವರ್ಷಗಳ ಹಿಂದೆ

ಬುಧವಾರ, 11-4-1951

● ಗೂಗೆಯ ಜ್ಞಾನ ಸಂದೇಶಕ್ಕೆ ಪಾರ್ಲಿಮೆಂಟಿನಲ್ಲಿ ಎಡೆಯಿಲ್ಲ

ನವದೆಹಲಿ, ಏ. 10– ರಟ್ಟಿಗೊಂದು ಗೂಗೆಯ ಚಿತ್ರ ಅಂಟಿಸಿ, ಅದರ ಕೆಳಗೊಂದು ವಿವೇಕಪೂರ್ಣ ಪದ್ಯ ಬರೆದು ಎಚ್.ಬಿ. ಮಲ್ಕಾನಿ ಎಂಬ ಮುಂಬೈ ನಿವಾಸಿಯೊಬ್ಬರು ಪ್ರಧಾನಿ ನೆಹರೂರವರಿಗೆ ಕಳಿಸಿದ್ದಾರೆ. ಈ ವಿಚಿತ್ರ ಕಾಣಿಕೆ ಇಂದು ಪ್ರಧಾನಿಗಳ ಕೈತಲಪಿತು. ಅದರಲ್ಲಿರುವ ಪದ್ಯವಿದು.

'ಮರದ ಮೇಲೊಂದು ಗೂಗೆ
ಚಿಂತನೆಯಿಲ್ಲದೆ ಸಾಗೆ
ಮಾತು ಕಮ್ಮಿಯಾಯಿತು,
ಬಾಯಿ ಮುಚ್ಚಿ, ಕಿವಿಯ ಬಿಚ್ಚಿ
ಹೆಚ್ಚು ಹೆಚ್ಚು ಕೇಳಿತು
ಜನರೆಲ್ಲ ಈ ಹಕ್ಕಿಯಂತಿರ
ಲೆಂಬುದೇ ನನ್ನ ಬಯಕೆ.

ಈ ಗೂಗೆಯನ್ನು, ಪದ್ಯವನ್ನು ಪಾರ್ಲಿಮೆಂಟಿನಲ್ಲಿ ತೂಗುಬಿಡಬೇಕೆಂದು ಕಳಿಸಿದವರು ಬಯಸಿದ್ದರು.

ಪ್ರಧಾನಿಗಳ ಕಚೇರಿಯವರು ಇದನ್ನು ಸೂಕ್ತ ಕ್ರಮಕ್ಕಾಗಿ ಅನಂತ ಶಯನಂ ಅಯ್ಯಂಗಾರ್ಯರಿಗೆ ಕಳಿಸಿದರು.

'ಇಂತಹ ಸಲಹೆಗಳು ಅಪರಿಮಿತವಾಗಿ ಪಾರ್ಲಿಮೆಂಟಿನಲ್ಲಿರುವ ಸ್ಥಳಾವಕಾಶ ಮೀರಿ ಬಂದಾವು. ಅದರಿಂದ ಲಾಭದಾಯಕವಾದ ಬೇರೆಡೆ ಇಡಬಹುದು' ಎಂದರು.

ಎಸ್‌ಐಆರ್: ಆಯೋಗದ ದರ್ಬಾರ್

ವಿಶ್ಲೇಷಣೆ

ಯೋಗೇಂದ್ರ ಯಾದವ್

ಎಸ್‌ಐಆರ್ ನೆಪದಲ್ಲಿ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗದಿಂದ ನಡೆದಿರುವ ಪ್ರಕ್ರಿಯೆ ಪ್ರಜಾಪ್ರಭುತ್ವದ ಸ್ಫೂರ್ತಿಯನ್ನು ಮಬ್ಬಾಗಿಸುವಂತಿದೆ. ಚುನಾವಣೆ ಸಂದರ್ಭದಲ್ಲಿ ಮತಪಟ್ಟಿಯಿಂದ 27 ಲಕ್ಷ ಮತದಾರರ ಹೆಸರುಗಳನ್ನು ಅಳಿಸಿರುವ ಪ್ರಹಸನಕ್ಕೆ ಸುಪ್ರೀಂ ಕೋರ್ಟ್ ಮೂಕಪ್ರೇಕ್ಷಕನಾಗಿದೆ.

ಅಂತಿಮ ಅಂಕಿ ಅಂಶ ಮಧ್ಯರಾತ್ರಿ ಪ್ರಕಟವಾಯಿತು: ಅದು 27,16,393. ನ್ಯಾಯಾಲಯದ ಆದೇಶದಲ್ಲಿ ಈ ಕುರಿತು ಉಲ್ಲೇಖ ಇರಲಿಲ್ಲ. 'ಮಧ್ಯರಾತ್ರಿಯೊಳಗೆ ಪೂರಕ ಪಟ್ಟಿಯನ್ನು ಪ್ರಕಟಿಸಿ' ಎಂದಷ್ಟೇ ನ್ಯಾಯಾಲಯವು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತ್ತು. ಪಟ್ಟಿಯಲ್ಲಿ ಏನಿರಬೇಕು ಎಂಬುದನ್ನು ಹೇಳಲಾಗಿಲ್ಲ. ಅದನ್ನು ಅರ್ಥ ಮಾಡಿಕೊಳ್ಳಬಹುದು. ಮುಂದೊಂದು ದಿನ ಇತಿಹಾಸಕಾರನೊಬ್ಬ ಈ ವಿಚಿತ್ರ ವಿದ್ಯಮಾನವನ್ನು ದಾಖಲಿಸಬಹುದು. ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಮತದಾರರ ಹೆಸರನ್ನು ಅಳಿಸಿಹಾಕಿದ್ದಕ್ಕೆ ಭಾರತದ ಸುಪ್ರೀಂ ಕೋರ್ಟ್ ಒಂದು ಮಾತನ್ನೂ ಆಡದೆ ಅನುಮೋದನೆಯ ಮೊಹರು ಒತ್ತಿದೆ. ಮೇಲ್ಮನವಿ ನ್ಯಾಯಮಂಡಳಿ, ಅದರಲ್ಲಿ ಯಾರು ಇರಬೇಕು, ಪ್ರಕ್ರಿಯೆಗಳು ಏನು, ಮೂಲಸೌಕರ್ಯ ಏನಿರಬೇಕು ಎಂಬುದರ ಜೊತೆಗೆ ಸದಸ್ಯರ ಗೌರವಧನ ಮತ್ತು ಇತರ ವೆಚ್ಚಗಳ ಕುರಿತು ಏಪ್ರಿಲ್ 6ರ ಆದೇಶದಲ್ಲಿ ವಿವರಗಳಿವೆ. ಆದರೆ, ಮತದಾನದ ಹಕ್ಕು ರದ್ದತಿಯನ್ನು ಪ್ರಶ್ನಿಸಿ ಸಲ್ಲಿಸಬೇಕಾದ ಮೇಲ್ಮನವಿಯ ಕುರಿತು ಏನನ್ನೂ ಹೇಳಲಾಗಿಲ್ಲ.

ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆಯ (ಎಸ್‌ಐಆರ್) ಸಂದರ್ಭದಲ್ಲಿ ಸಾವು, ವಲಸೆ ಮತ್ತು ಗೈರುಹಾಜರಿಯ ಕಾರಣಕ್ಕೆ ಮತದಾರರ ಪಟ್ಟಿಯಿಂದ ದೊಡ್ಡ ಸಂಖ್ಯೆಯಲ್ಲಿ ಮತದಾರರ ಹೆಸರು ಅಳಿಸಿ ಹಾಕಿದ ರೀತಿಯಲ್ಲಿ ಇದು ಇಲ್ಲ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಿ ಎಂದು ಮನವಿ ಮಾಡಿದವರಿಗೆ ಸಂಬಂಧಿಸಿದ ಪ್ರಕರಣ ಇದು. ಎಸ್‌ಐಆರ್ ಪಟ್ಟಿಯಲ್ಲಿ ಅವರ ಹೆಸರನ್ನು ಸೇರ್ಪಡೆ ಮಾಡಲಾಗಿತ್ತು. ಆದರೆ, ಬಳಿಕ ಹೊಸದಾದ ತರಾತುರಿ ಪ್ರಕ್ರಿಯೆಯಲ್ಲಿ ಅವರ ಹೆಸರನ್ನು ಅಳಿಸಿ ಹಾಕಲಾಯಿತು. ಈ ಪ್ರಕ್ರಿಯೆಯಲ್ಲಿನ ಪಾರದರ್ಶಕತೆಯ ಕೊರತೆಯನ್ನು ಪ್ರಶ್ನಿಸಲಾಗಿದೆ. ಅವರಿಗೆ ಮೇಲ್ಮನವಿ ಸಲ್ಲಿಸುವ ಹಕ್ಕು ಇದೆ. ಈ ಮೇಲ್ಮನವಿಗಳನ್ನು ಚುನಾವಣೆಗೆ ಮೊದಲೇ ವಿಚಾರಣೆ ನಡೆಸಿ ನಿರ್ಧಾರ ಪ್ರಕಟಿಸಲು ಯಾವ ದಾರಿಯೂ ಇಲ್ಲ. ಕಾನೂನಿನ ಪ್ರಕಾರ, ಏಪ್ರಿಲ್ 7ರಂದು ಮತದಾರರ ಪಟ್ಟಿಯು ಅಂತಿಮಗೊಳ್ಳಬೇಕು ಮತ್ತು ಆ ಬಳಿಕ ಸೇರ್ಪಡೆ ಅಥವಾ ಅಳಿಸಿಹಾಕಲು ಅವಕಾಶ ಇಲ್ಲ. 27 ಲಕ್ಷ ಜನರ ಹೆಸರನ್ನು ಈ ಚುನಾವಣೆಗೆ ತೆಗೆದು ಹಾಕಲಾಗಿದೆಯೇ ಎಂಬುದನ್ನು ಸುಪ್ರೀಂ ಕೋರ್ಟ್ ನಿರ್ಧರಿಸಬೇಕು. ಅಥವಾ, ಈ ಚುನಾವಣೆಯಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸುವುದು ಅಥವಾ ಈ ಎಲ್ಲ ಮೇಲ್ಮನವಿಗಳು ವಿಲೇವಾರಿ ಆಗುವವರೆಗೆ ಚುನಾವಣೆಯನ್ನು ಮುಂದಕ್ಕೆ ಹಾಕುವ ಮೂಲಕ ಹೀಗೆ ಆಗದಂತೆ ನ್ಯಾಯಾಲಯವು ನೋಡಿಕೊಳ್ಳಬೇಕು.

ಹೆಸರು ಅಳಿಸಿ ಹಾಕುವಿಕೆಯು ಲೋಪದಿಂದ ಕೂಡಿದೆ ಎಂಬುದನ್ನು ಸಾಬೀತು ಮಾಡುವುದಕ್ಕೆ ವೈಯಕ್ತಿಕ ಮಾಹಿತಿ, ದಾಖಲಾತಿಗಳು, ಅಂಕಿ ಸಂಖ್ಯೆಗಳನ್ನು ಒಳಗೊಂಡ ರಾಶಿ ಪುರಾವೆಗಳನ್ನು ನ್ಯಾಯಾಲಯಕ್ಕೆ ಒದಗಿಸಲಾಗಿದೆ. ಮತದಾರರು ಸಲ್ಲಿಸಿದ ದಾಖಲೆಗಳನ್ನು ತೀರ್ಮಾನ ಮಾಡುವವರು ಪರಿಶೀಲಿಸುವ ಅಗತ್ಯ ಇಲ್ಲ. ನಿವೃತ್ತ ನ್ಯಾಯಾಧೀಶ, ಸಂವಿಧಾನ ರಚನಾ ಸಮಿತಿಯಲ್ಲಿದ್ದವರ ಕುಟುಂಬದ ಸದಸ್ಯರು, ಕಾರ್ಗಿಲ್ ಯೋಧ, ಪದಕಗಳನ್ನು ಪಡೆದ ಸೈನಿಕ, ಸರ್ಕಾರಿ ಕರ್ತವ್ಯದಲ್ಲಿರುವ ಅಧಿಕಾರಿಗಳು, ಭಾರತದ ಪಾಸ್‌ಪೋರ್ಟ್ ಹೊಂದಿರುವವರು ಅಗತ್ಯ ದಾಖಲೆಗಳನ್ನು ನೀಡಿದರೂ ಹೆಸರು ಅಳಿಸಲಾಗಿದೆ. ಈ ಅಳಿಸಿ ಹಾಕುವಿಕೆಯ ಹಿಂದೆ ಒಂದು ವಿಚಿತ್ರ ಮಾದರಿ ಇದೆ. ಮೇಲ್ಮನವಿ ಸಲ್ಲಿಕೆ ಆಗಿರುವ ಮೂರನೇ ಒಂದರಷ್ಟು ಪ್ರಕರಣಗಳು ಮುಸ್ಲಿಂ ಬಾಹುಳ್ಯವಿರುವ ಎರಡು ಜಿಲ್ಲೆಗಳಿಗೆ ಸೇರಿದ್ದಾಗಿವೆ. ನಂದಿಗ್ರಾಮದಲ್ಲಿ ಅಳಿಸಿ ಹಾಕಲಾಗಿರುವ ಹೆಸರುಗಳ ಪೈಕಿ ಶೇ 95ರಷ್ಟು ಮುಸ್ಲಿಂ ಹೆಸರುಗಳಾಗಿವೆ.

ಇಷ್ಟೆಲ್ಲ ಇದ್ದರೂ ನ್ಯಾಯಾಲಯವು ಈ 27 ಲಕ್ಷ ಜನರಿಗೆ ಹೇಳಿದ್ದು ಹೀಗೆ: ಕ್ಷಮಿಸಿ, ನಿಮ್ಮ ಹೆಸರು ಅಳಿಸಿ ಹಾಕಲಾಗಿದೆ. ಮೇಲ್ಮನವಿ ನ್ಯಾಯಮಂಡಳಿಗೆ ಹೋಗಿ ಅದೃಷ್ಟ ಪರೀಕ್ಷಿಸಿಕೊಳ್ಳಿ. ಹೌದು, ಈ ಬಾರಿ ನಿಮಗೆ ಮತ ಚಲಾಯಿಸಲು ಸಾಧ್ಯವಾಗಲಿಕ್ಕಿಲ್ಲ. ಆದರೆ, ನಿಮ್ಮ ಮತದಾನದ ಹಕ್ಕನ್ನು ಶಾಶ್ವತವಾಗಿ ರದ್ದು ಮಾಡಿಲ್ಲ.

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮೇಲೆ ಈ ಆದೇಶವು ಬೀರಬಲ್ಲ ಪರಿಣಾಮದ ಕಡೆಗೆ ನ್ಯಾಯಾಲಯವು ಗಮನಹರಿಸಿಲ್ಲ. ಈ 27 ಲಕ್ಷ ಮತದಾರರು ಒಟ್ಟು ನಿರೀಕ್ಷಿತ ಮತದಾರರ ಪೈಕಿ ಶೇ 5ರಷ್ಟಾಗುತ್ತಾರೆ. ಕಳೆದ ಬಾರಿ 36 ಕ್ಷೇತ್ರಗಳಲ್ಲಿ ಟಿಎಂಸಿ ಶೇ 5ಕ್ಕಿಂತ ಕಡಿಮೆ ಅಂತರದಿಂದ ಗೆದ್ದಿದೆ. ಈ ಅಳಿಸಿ ಹಾಕುವಿಕೆಯು ಕೆಲವೇ ಕಡೆ ಕೇಂದ್ರೀಕೃತವಾಗಿದ್ದರೆ ಈ ಬಾರಿ ಪರಿಣಾಮ ಇನ್ನೂ ಹೆಚ್ಚು ಗಾಢವಾಗಿರುತ್ತದೆ. ನ್ಯಾಯಾಲಯದ ಈ ಒಂದು ಆದೇಶವು ಒಟ್ಟು ಫಲಿತಾಂಶವನ್ನು ಬದಲಾಯಿಸಬಲ್ಲುದು. ಮತದಾನದ ಹಕ್ಕಿನ ಜೊತೆಗೆ ಪೌರತ್ವದ ಹಕ್ಕುಗಳನ್ನು ಕೂಡ ಅರೆ ನ್ಯಾಯಾಂಗೀಯ ಪ್ರಕ್ರಿಯೆ ಮೂಲಕ ರದ್ದುಪಡಿಸಿರುವುದರ ಪರಿಣಾಮಗಳ ಕುರಿತು ನ್ಯಾಯಾಲಯವು ಹೆಚ್ಚು ತಲೆ ಕೆಡಿಸಿಕೊಂಡ ಹಾಗೆ ಕಾಣಿಸುತ್ತಿಲ್ಲ.

ನ್ಯಾಯಾಲಯದ ಮುಂದೆ ಇದ್ದದ್ದು ರಾಜಕೀಯ ಆಯಾಮಗಳಿರುವ ಗೊಂದಲಕಾರಿ ಪ್ರಕರಣ. ಬಿಜೆಪಿಯ ಪರವಾಗಿ ಮತದಾರರ ಹೆಸರುಗಳನ್ನು ಅಳಿಸುವಂತೆ ಆಯೋಗಕ್ಕೆ ಸೂಚಿಸಲಾಗಿದೆ ಎಂದು ಟಿಎಂಸಿ ಆರಂಭದಿಂದಲೇ ಟೀಕಿಸುತ್ತ ಬಂದಿದೆ: ತನಗೆ ನಿಷ್ಠರಾಗಿರುವ, ಮುಖ್ಯವಾಗಿ ಮುಸ್ಲಿಮರಾಗಿರುವ ಶೇ 5ರಷ್ಟು ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಯಾವುದಾದರೂ ಕಾರಣ ಕೊಟ್ಟು ತೆಗೆದು ಹಾಕಲಾಗಿದೆ ಎಂದು ಟಿಎಂಸಿ ಹೇಳಿದೆ. ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗವು ಎಸ್‌ಐಆರ್ ಹೆಸರಿನಲ್ಲಿ ನಡೆಸಿರುವುದು ಈ ಆರೋಪಕ್ಕೆ ತಕ್ಕಂತೆಯೇ ಇದೆ. ಎಸ್‌ಐಆರ್ ಪೂರ್ವದಲ್ಲಿ ಇದ್ದ ಮತದಾರರ ಪಟ್ಟಿಯಲ್ಲಿ ಮತದಾರರಲ್ಲದವರ ಹೆಸರುಗಳು ಇದ್ದವು ಎಂಬುದಕ್ಕೆ ಕಾರಣವೇನೂ ಇಲ್ಲ. ಪಶ್ಚಿಮ ಬಂಗಾಳದಲ್ಲಿ 7.66 ಕೋಟಿ ಮತದಾರರಿದ್ದರು ಮತ್ತು ಅಲ್ಲಿನ ವಯಸ್ಕರ ಜನಸಂಖ್ಯೆಯು 7.67 ಕೋಟಿ ಇತ್ತು. ಗಣತಿ ನಮೂನೆಯನ್ನು ಸಲ್ಲಿಸಿಲ್ಲ ಎಂಬ ಕಾರಣಕ್ಕೆ 58 ಲಕ್ಷ ಮತದಾರರ ಹೆಸರುಗಳನ್ನು ಅಳಿಸಿ ಹಾಕಲಾಗಿದೆ; ಈ ನಮೂನೆಯ ಪರಿಶೀಲನೆಯನ್ನು ಕಟ್ಟುನಿಟ್ಟಾಗಿ ನಡೆಸಬೇಕು ಎಂದು ಆಯೋಗವು ಪಟ್ಟು ಹಿಡಿಯಿತು. ಆದರೆ, ಇತರ ರಾಜ್ಯಗಳಲ್ಲಿ ಇಷ್ಟು ಕಟ್ಟುನಿಟ್ಟು ಇರಲಿಲ್ಲ. ರಾಜ್ಯದ ಚುನಾವಣಾ ಅಧಿಕಾರಿಗಳು ಸಿದ್ಧಪಡಿಸಿದ ಕರಡು ಪಟ್ಟಿಯನ್ನು ಮರುಪರಿಶೀಲನೆಗೆ ಒಳಪಡಿಸಲು ಸೂಕ್ಷ್ಮ ವೀಕ್ಷಕರು ಮತ್ತು ಮತದಾರರ ಪಟ್ಟಿ ವೀಕ್ಷಕರ ಪಡೆಯೊಂದನ್ನು ರಾಜ್ಯದ ಹೊರಗಿನಿಂದ ನಿಯೋಜಿಸಲಾಯಿತು.

ಈ ಪಡೆಯು ಆಕ್ಷೇಪ ವ್ಯಕ್ತಪಡಿಸಿ ಅಳಿಸಿದ 7 ಲಕ್ಷ ಹೆಸರುಗಳು ಆಯೋಗಕ್ಕೆ ಸಾಕಾಗಿಲ್ಲ. ಹಾಗಾಗಿ, ಮರುಪರಿಶೀಲನೆಗೆ ಮತ್ತೆ 60 ಲಕ್ಷ ಹೆಸರುಗಳನ್ನು ಗುರ್ತಿಸಲಾಯಿತು ಮತ್ತು ಒಟ್ಟು 27 ಲಕ್ಷ ಹೆಸರುಗಳನ್ನು ಅಳಿಸಿ ಹಾಕಲಾಯಿತು.

ಈ ಗೊಂದಲಕಾರಿ ಸನ್ನಿವೇಶದಲ್ಲಿ ಮಧ್ಯಪ್ರವೇಶಿಸಬೇಕಾದ ಅಹಿತಕರ ಹೊಣೆಗಾರಿಕೆ ಸುಪ್ರೀಂ ಕೋರ್ಟ್ ಮುಂದೆ ಇತ್ತು. ಸನ್ನಿವೇಶವನ್ನು ಇಷ್ಟೊಂದು ಗೊಂದಲಕಾರಿ ಮಾಡುವುದರಲ್ಲಿ ನ್ಯಾಯಾಲಯದ ಪಾಲೂ ಇದೆ ಎಂದು ಹೇಳದೆ ವಿಧಿ ಇಲ್ಲ. ಚುನಾವಣೆಗೆ ನಾಲ್ಕು ತಿಂಗಳುಗಳಷ್ಟೇ ಇರುವಾಗ ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ನ್ಯಾಯಾಲಯವು ಅವಕಾಶ ಕೊಟ್ಟಿತು. 'ಮಾಹಿತಿ ಹೊಂದಾಣಿಕೆ ಇಲ್ಲ' ಎಂಬ ಕಾರಣ ಕೊಟ್ಟು ಸಾಫ್ಟ್‌ವೇರ್ ಮೂಲಕ ಸೃಷ್ಟಿಯಾದ ನೋಟಿಸ್‌ಗಳನ್ನು ಮತದಾರರಿಗೆ ನೀಡುವ ವಿಚಿತ್ರ ಪದ್ಧತಿಗೂ ನ್ಯಾಯಾಲಯವು ಅನುಮತಿ ಕೊಟ್ಟಿತು. ಪಶ್ಚಿಮ ಬಂಗಾಳಕ್ಕೆ ಹೊಸ ಹೊಸ ನಿಯಮಗಳನ್ನು ಆಯೋಗವು ಸೃಷ್ಟಿಸುವಾಗ, ನ್ಯಾಯಾಲಯವು ನೋಡುತ್ತಾ ನಿಂತಿತು. ಅಳಿಸಿ ಹಾಕಿದವರ ಹೆಸರುಗಳನ್ನು ಕಂಪ್ಯೂಟರ್ ಮೂಲಕ ಪರಿಶೀಲನೆಗೆ ಒಳಪಡಿಸುವಂತಹ ಪಟ್ಟಿ ಪ್ರಕಟಿಸುವುದರಿಂದ ಆಯೋಗವು ತಪ್ಪಿಸಿಕೊಳ್ಳಲು ಅವಕಾಶ ಕೊಟ್ಟಿತು. 142ನೇ ವಿಧಿಯ ಅಡಿಯಲ್ಲಿ ಇರುವ ವಿಶೇಷಾಧಿಕಾರ ಬಳಸಿದ ನ್ಯಾಯಾಲಯವು ಮತದಾರರ ನೋಂದಣಿ ಅಧಿಕಾರಿಯ ಬದಲಿಗೆ ಮೇಲ್ಮನವಿ ವ್ಯವಸ್ಥೆಯೊಂದನ್ನು ತರಾತುರಿಯಲ್ಲಿ ಜಾರಿಗೆ ತರಲು ಒಪ್ಪಿಗೆ ನೀಡಿತು. ಇದು ಗೊಂದಲವನ್ನು ಹೆಚ್ಚಿಸಿತು. ಚುನಾವಣಾ ವೇಳಾಪಟ್ಟಿಗೆ ಹೊಂದಾಣಿಕೆ ಆಗದ ರೀತಿಯಲ್ಲಿ ಇದು ನಡೆಯಿತು ಮತ್ತು ಮೇಲ್ಮನವಿ ತೀರ್ಮಾನಕ್ಕೆ ಸಮಯಾವಕಾಶವೇ ಸಿಗಲಿಲ್ಲ. ಈ ಎಲ್ಲದರ ಪರಿಣಾಮವಾಗಿ ದುರಂತಕಾರಿ ಗೊಂದಲವು ಸೃಷ್ಟಿಯಾಯಿತು.

ಚುನಾವಣಾ ಫಲಿತಾಂಶದ ಮೇಲಿನ ಪರಿಣಾಮಕ್ಕಿಂತ ಹೆಚ್ಚಾಗಿ ಚುನಾವಣಾ ಪ್ರಜಾಪ್ರಭುತ್ವದ ಪಥದ ಮೇಲೆಯೇ ಇದು ಪರಿಣಾಮ ಬೀರಬಹುದು. ಎಸ್‌ಐಆರ್ ಪ್ರಕರಣದಲ್ಲಿ ಸಲ್ಲಿಕೆಯಾಗಿರುವ ಮುಖ್ಯ ಅರ್ಜಿಯ ವಿಚಾರಣೆ ಜನವರಿಯಲ್ಲಿ ಮುಗಿದಿದ್ದು, ತೀರ್ಪಿಗಾಗಿ ಕಾಯಲಾಗುತ್ತಿದೆ. ಆದರೆ, ಈಗ ಈ ತೀರ್ಪು ಶೈಕ್ಷಣಿಕ ಮೌಲ್ಯವನ್ನಷ್ಟೇ ಹೊಂದಿದೆ. ಎಸ್‌ಐಆರ್‌ನ ವಿಚಾರದಲ್ಲಿ ಯಾವುದೇ ತಡೆ ಒಡ್ಡುವ ಉದ್ದೇಶ ತನಗೆ ಇಲ್ಲ ಎಂದು ನ್ಯಾಯಾಲಯವು ಸಂಬಂಧಿಸಿದ ಇತರ ಹಲವು ಪ್ರಕರಣಗಳಲ್ಲಿ ಸ್ಪಷ್ಟಪಡಿಸಿದೆ. ಎಸ್‌ಐಆರ್‌ನ ಸಾಂವಿಧಾನಿಕ ಸಿಂಧುತ್ವವು ಇನ್ನೂ ತೀರ್ಮಾನ ಆಗದೇ ಇದ್ದರೂ, ಬಿಹಾರಕ್ಕೆ ಸೀಮಿತವಾಗಿದ್ದ ಎಸ್‌ಐಆರ್ ಅನ್ನು ಇಡೀ ದೇಶಕ್ಕೆ ವಿಸ್ತರಿಸಲು ನ್ಯಾಯಾಲಯವು ಕೊಟ್ಟ ಅನುಮತಿಯಲ್ಲಿಯೇ ಹಲವು ಅರ್ಥಗಳು ಇವೆ.

ಇದೊಂದು ಕಾನೂನುಸಮರವಷ್ಟೇ ಅಲ್ಲ, ಒರೆಗಲ್ಲಿನಂತಹ ಪ್ರಕರಣ. ಭಾರತದ ಚುನಾವಣೆಯು ಬಾಂಗ್ಲಾದೇಶ ಅಥವಾ ಪಾಕಿಸ್ತಾನದ ಚುನಾವಣೆಗಳ ಮಾರ್ಗದಲ್ಲಿ ಸಾಗುವುದನ್ನು ತಡೆಯುವುದಕ್ಕೆ ಇರುವ ಏಕೈಕ ವೇದಿಕೆ ನ್ಯಾಯಾಂಗ. ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿ ಎಡಿಎಂ ಜಬಲ್ಪುರ ಪ್ರಕರಣದ ತೀರ್ಪು ಹೇಗೆಯೋ ಚುನಾವಣಾ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿ ಎಸ್‌ಐಆರ್ ಪ್ರಕರಣ ಹಾಗೆಯೇ. ಸಂವಿಧಾನ ಮತ್ತು ದೇಶವು ಸೋಲಲು ಸುಪ್ರೀಂ ಕೋರ್ಟ್ ಅವಕಾಶ ಕೊಡದು ಎಂಬ ಭರವಸೆ ಹೊಂದಿರುವ ಜನರ ಸ್ಫೂರ್ತಿಯನ್ನು ಎಸ್‌ಐಆರ್ ಪ್ರಕರಣದ ಆದೇಶವು ಕೆಡಿಸಬಲ್ಲುದು. ಇಂತಹ ಕೆಲಸವು 50 ವರ್ಷಗಳ ಹಿಂದೆಯೇ ಆಗಿದೆ ಎಂಬುದು ದುರದೃಷ್ಟಕರ.

ವಾಚಕರ ವಾಣಿ

ಕಣ್ಣಿಗೆ ಕಾಣದ ಅಭಿವೃದ್ಧಿಯ 'ಕಲ್ಯಾಣ'

ಕೇಂದ್ರ ಸರ್ಕಾರವು 2012ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಿಗೆ 371(ಜೆ) ಅಡಿ ವಿಶೇಷ ಸ್ಥಾನಮಾನ ಕಲ್ಪಿಸಿತು. ಆದರೆ, ಇಲ್ಲಿನವರ ಬದುಕು ಇನ್ನೂ ಬದಲಾಗದಿರುವುದು ವಿಪರ್ಯಾಸ. ಬೇಸಿಗೆಯಲ್ಲಿ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ತಾಂಡವವಾಡುತ್ತಿದೆ. ಇದಕ್ಕೆ ಪರಿಹಾರ ಮರೀಚಿಕೆಯಾಗಿದೆ. ಸಾಕಷ್ಟು ಸಮಸ್ಯೆಗಳಿದ್ದರೂ ಈ ಭಾಗದ ಜನಪ್ರತಿನಿಧಿಗಳು ಪ್ರಯೋಜನಕ್ಕೆ ಬಾರದ ಹೇಳಿಕೆ ನೀಡುತ್ತಿರುವುದು ಹಾಸ್ಯಾಸ್ಪದ. ಜನರ ಬದುಕನ್ನು 'ಕಲ್ಯಾಣ'ವಾಗಿಸುವ ದಿಸೆಯಲ್ಲಿ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಬೇಕಿದೆ.

ಸೋಮನಾಥ ಎಚ್. ಜಂಪಾ, ಯಾದಗಿರಿ

ಮಕ್ಕಳ ರಿಯಾಲಿಟಿ ಶೋ: ಹಸ್ತಕ್ಷೇಪ ಬೇಡ

ಜಗತ್ತಿನ ಯಾವುದೇ ಮಾಧ್ಯಮಗಳಲ್ಲಿನ ಮಕ್ಕಳ ವೇದಿಕೆಗಳಲ್ಲಿ ಬಾಲ್ಯದ ಜ್ಞಾನ, ಅನುಭವ, ಕಲ್ಪನೆಗಳು ಮಕ್ಕಳಿಗೆ ಸಂಬಂಧಪಟ್ಟಂತೆ ಇರಬೇಕೇ ಹೊರತು ಹಿರಿಯರ ಮಾತು, ಅನುಭವಗಳ ಅನುಕರಣೆಯಾಗಿರಬಾರದು. ಅನುಕರಣೆಯು ಅಸಹಜವೂ, ಅಸಂಬದ್ಧವೂ ಆಗಿ ಮಕ್ಕಳ ಮೃದು ಮನದಲ್ಲಿ ವಿಕೃತಿ ಹುಟ್ಟಿಸುತ್ತದೆ. ಅವರ ಬಾಯಲ್ಲಿ ಹಿರಿಯರ ಮಾತು, ಅಭಿನಯವು ಪ್ರೇಕ್ಷಕರನ್ನು ರಂಜಿಸುತ್ತವೆ. ಇದು ಕೆಳಮಟ್ಟದ ಮನರಂಜನೆ. ಆದ್ದರಿಂದ ಮಕ್ಕಳ ವೇದಿಕೆಗಳು ಮಕ್ಕಳಿಗಾಗಿಯೇ ಇರಲು ಬಿಡುವುದು ನ್ಯಾಯೋಚಿತವೂ, ಸೃಜನಶೀಲವೂ ಆಗಬಲ್ಲವು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಸರ್ಕಾರಿ ಕಚೇರಿ ಮತ್ತು 'ಲಂಚ'ತಂತ್ರ ಕಥೆ

ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ 'ಲಂಚ ಕೊಡಬೇಡಿ' ಎಂಬ ಫಲಕ ಅಳವಡಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದ್ದಾರೆ. ಕಳ್ಳರನ್ನು ಹಿಡಿಯಲು ಸಾಧ್ಯವಾಗದಿದ್ದಾಗ ಪೊಲೀಸ್ ಆಯುಕ್ತರು, 'ಬಂಗಾರದ ಆಭರಣ ಧರಿಸಿ ಬಹಿರಂಗವಾಗಿ ಓಡಾಡಬೇಡಿ' ಎಂದು ಮಹಿಳೆಯರಿಗೆ ಎಚ್ಚರಿಕೆ ನೀಡಿದಂತಿದೆ ಮುಖ್ಯ ಕಾರ್ಯದರ್ಶಿಯವರ ಸೂಚನೆ. ಪೊಲೀಸ್ ಅಧಿಕಾರಿ, ಸಬ್ ರಿಜಿಸ್ಟ್ರಾರ್, ತಹಶೀಲ್ದಾರ್ ಮುಂತಾದ ಅಧಿಕಾರಿಗಳು ಕೋಟ್ಯಂತರ ರೂಪಾಯಿ ಕಾಣಿಕೆ ನೀಡಿ ಸ್ಥಳ ನಿಯೋಜನೆಗೊಳ್ಳುತ್ತಾರೆ. ಈ ಕೆಟ್ಟ ಸಂಪ್ರದಾಯಕ್ಕೆ ತಿಲಾಂಜಲಿ ಹಾಡಿದ್ದರೆ ಫಲಕ ನೇತುಹಾಕುವ ದುರ್ಗತಿ ಸರ್ಕಾರಿ ಕಚೇರಿಗಳಿಗೆ ಬರುತ್ತಿರಲಿಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ಋತುಚಕ್ರ ಅನಿಷ್ಟವಲ್ಲ, ಸೃಷ್ಟಿಯ ನಿಯಮ

'ಮುಟ್ಟಾದವರನ್ನು ಅಸ್ಪೃಶ್ಯರಂತೆ ನೋಡಬಾರದು' ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಹೇಳಿದ್ದಾರೆ. ಋತುಸ್ರಾವ ಜೈವಿಕ ಸಹಜ ಕ್ರಿಯೆ. ಮುಟ್ಟಾದಾಗ ಅಂಟುಮುಂಟು ಆಗುತ್ತದೆ ಎಂಬ ಸಾಮಾಜಿಕ ಮೌಢ್ಯದಿಂದ ದೇವರ ಪೂಜೆ, ಮನೆ, ಅಡುಗೆಮನೆ ಪ್ರವೇಶಕ್ಕೆ ನಿರ್ಬಂಧಿಸುತ್ತಾರೆ. ಮುಟ್ಟಿನಲ್ಲಿ ಹುಟ್ಟಿದ ಮನುಷ್ಯರು ಮುಟ್ಟಿನ ಬಗ್ಗೆ ತೋರುವ ಅಗೌರವವನ್ನು ಸರ್ವಜ್ಞ ಈ ರೀತಿ ಪ್ರಶ್ನಿಸುತ್ತಾರೆ: 'ಮುಟ್ಟು ಗಂಡವಳನ್ನು ಮುಟ್ಟಲೊಲ್ಲರು ನೋಡು, ಮುಟ್ಟು ತಾ ತಡೆದು ಹುಟ್ಟಿರ್ದ ದೇಹವನು ಮುಟ್ಟುತಿಹರೇಕೆ ಸರ್ವಜ್ಞ'– ಈ ತ್ರಿಪದಿಯು ಹೆಣ್ಣಿನ ಅಸ್ಮಿತೆಯ ಧ್ವನಿಯನ್ನು ಸಂಕೇತಿಸುತ್ತದೆ. ಮುಟ್ಟಾದವರನ್ನು ಗೌರವದಿಂದ ಕಾಣುವ ವಾತಾವರಣ ಸೃಷ್ಟಿಯಾಗಬೇಕಿದೆ.

ವಿಶ್ವನಾಥ ಟಿ. ಸೋಮಗುದ್ದು, ಹಂಪಿ

ಕೊಲ್ಲಿ ಯುದ್ಧ: ಭಾರತ ಕಲಿತ ಪಾಠವೇನು?

ಕೊಲ್ಲಿ ಯುದ್ಧದಿಂದ ಭಾರತ ಕಲಿಯಬೇಕಾದ ಪಾಠಗಳು ಸಾಕಷ್ಟಿವೆ. ದೇಶದ ಜನರು ಎದುರಿಸಿದ ಸಂಕಷ್ಟಗಳ ಬಗ್ಗೆ ಪಟ್ಟಿ ಮಾಡಿ ಮುಂದಿನ ದಿನಗಳಲ್ಲಿ ಎಚ್ಚರಿಕೆಯ ಹೆಜ್ಜೆ ಇಡಬೇಕು. ದೈನಂದಿನ ಜೀವನಕ್ಕೆ ಬೇಕಾಗುವ ಸಾಮಗ್ರಿಗಳು, ರಫ್ತು, ಆಮದಿನಲ್ಲಿ ಸಮತೋಲಿತ ನೀತಿ ಪಾಲಿಸಬೇಕಿದೆ. ಈ ಬಗ್ಗೆ ಜನರಿಗೂ ತಿಳಿವಳಿಕೆ ನೀಡಬೇಕು. ರಾಷ್ಟ್ರದ ಭದ್ರತೆ ಬಗ್ಗೆಯೂ ಎಚ್ಚರವಹಿಸಬೇಕಿದೆ. 'ಮೇಕ್ ಇನ್ ಇಂಡಿಯಾ'ಕ್ಕೆ ಮತ್ತಷ್ಟು ಬಲ ತುಂಬಬೇಕು. ರಾಜಕೀಯ ಕಚ್ಚಾಟವು ದೇಶದ ಹಿತಾಸಕ್ತಿಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ತುರ್ತು ಸಂದರ್ಭವನ್ನು ಎದುರಿಸಲು ಕೇಂದ್ರದ ಹೊಣೆಗಾರಿಕೆಯ ಜೊತೆಗೆ ರಾಜ್ಯಗಳ ಜವಾಬ್ದಾರಿಯೂ ಹೆಚ್ಚಾಗಬೇಕು.

ದೊರೆಸ್ವಾಮಿ ಗದ್ದೆಬಿಂಡೇನಹಳ್ಳಿ, ಚನ್ನರಾಯಪಟ್ಟಣ

ವಾಸ್ತವದ ತಪ್ಪು ಹೆಜ್ಜೆಗೆ 'ಅರಿವಿನ ಕಣ್ಣು'

'ಊಟದ ತಟ್ಟೆಯಲ್ಲಿ 'ಭಾರ' ಲೋಹ (ಲೇ: ಟಿ.ಎನ್. ಪ್ರಕಾಶ್ ಕಮ್ಮರಡಿ) ಮತ್ತು 'ದೊಡ್ಡವರ ಪೋಷಾಕು ಮಕ್ಕಳಿಗೆ ಅಪಾಯಕರ' (ಲೇ: ಹುಲಿಕಲ್ ನಟರಾಜ್, ಪ್ರ.ವಾ., ಏ. 10) –ಎರಡೂ ಲೇಖನಗಳು ವಾಸ್ತವದ ತಪ್ಪುಹೆಜ್ಜೆಗೆ ಅರಿವಿನ ಕಣ್ಣು ತೆರೆಸುವಂತಿವೆ. ಕೈಗಾರಿಕೆಗಳು ಮಾಡುತ್ತಿರುವ ಮಾಲಿನ್ಯವನ್ನು ನಿವಾರಿಸಲು 'ಮಾಲಿನ್ಯ ಸೃಷ್ಟಿಸುವವನೇ ಪಾವತಿಸಲಿ' –ನಿಯಮವನ್ನು ಸರ್ಕಾರಗಳು ಕಟ್ಟುನಿಟ್ಟಾಗಿ ಪಾಲಿಸಬೇಕು. ಪ್ರತಿಭಾ ಪ್ರೋತ್ಸಾಹದ ನೆಪದಲ್ಲಿ ರಿಯಾಲಿಟಿ ಶೋಗಳಲ್ಲಿ ಮಕ್ಕಳ ಮನಸ್ಸನ್ನು ವಿಕಾರದೆಡೆಗೆ ಬೆಳೆಸುವ ನಟರು ಮತ್ತು ಪೋಷಕರು ಈ ಲೇಖನ ಓದಿ ಎಚ್ಚರಗೊಳ್ಳಲಿ.

ಎಸ್.ಜಿ. ಸಿದ್ಧರಾಮಯ್ಯ, ಬೆಂಗಳೂರು

ಪಿಯು ಪರೀಕ್ಷೆ–3 ಸ್ಥಗಿತ ಸ್ವಾಗತಾರ್ಹ ಕ್ರಮ

ಈ ಸಾಲಿನಿಂದಲೇ ದ್ವಿತೀಯ ಪಿಯುಸಿ ಪರೀಕ್ಷೆ–3 ಇರುವುದಿಲ್ಲವೆಂಬ ಸರ್ಕಾರದ ನಿರ್ಧಾರ ಒಳ್ಳೆಯದು. ಕಳೆದ ವರ್ಷಗಳಲ್ಲಿ ಪರೀಕ್ಷೆ–1, 2, ಮತ್ತು 3 ನಡೆಸಿ ಫಲಿತಾಂಶ ಬರುವಲ್ಲಿ ಮೂರು ತಿಂಗಳು ಕಳೆಯುತ್ತಿದ್ದವು. ತೇರ್ಗಡೆಯಾಗಿ ಬಂದ ವಿದ್ಯಾರ್ಥಿಗಳು ಸುಮಾರು ಮೂರು ತಿಂಗಳ ಪಾಠ ಕಳೆದುಕೊಳ್ಳುತ್ತಿದ್ದರು. ಮತ್ತೆ ಮುಂದಿನ ಪರೀಕ್ಷೆಯಲ್ಲಿ ಅನುತ್ತೀರ್ಣ ಆಗುವವರ ಸಂಖ್ಯೆ ಹೆಚ್ಚಿರುತ್ತಿತ್ತು. ಫಲಿತಾಂಶ ಹೆಚ್ಚು ಬರಲಿ, ಕಡಿಮೆ ಬರಲಿ ಎರಡು ಪರೀಕ್ಷೆ ನಡೆಸುವುದೇ ಸೂಕ್ತ.

ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ಚುರುಮುರಿ



ವಾರ್ ಹ್ಯಾಂಗೋವರ್!

● ತುರುವೇಕೆರೆ ಪ್ರಸಾದ್

'ಏಯ್, ಕದನ ವಿರಾಮ ಅಂದ್ರೂ ಯುದ್ಧದ್ ಕಿರಿಕಿರಿ ತಪ್ಪಂಗಿಲ್ಲ' ಎಂದ ಗುದ್ಲಿಂಗ.

'ವ್ಹಾ! ನ್ಯೂಸ್ ಚಾನೆಲ್ಲೋರು ಮುಂದೆ ಯುದ್ಧ ಇನ್ನೂ ಎಷ್ಟು ಭಯಾನಕ ಆಗ್ಬಹುದು ಅಂತ ಟ್ರಂಪ್‌ನ ಮೈಮೇಲೆ ಆವಾಹನೆ ಮಾಡ್ಕಂಡು ತೋರುಸ್ತಾವ್ರೆ. ತಲೆ ಕೆಟ್ಟು ಚಾನೆಲ್ ಚೇಂಜ್ ಮಾಡುದ್ರೆ 'ಭೂಮಿ ಮ್ಯಾಲೆ ನಮ್ಮ ಬಾಳು ಯುದ್ಧಕಾಂಡ ಕೇಳು' ಅಂತ ಹಾಡು ಬತ್ತಿತ್ತು. ಟಿವಿಗೆ ಮಕ್ ಉಗುದು ಈಚೆ ಬಂದೆ' ಎಂದ ಮಾಲಿಂಗ.

'ಖಾಲಿ ಪೆಟ್ರೋಲ್ ಪಂಪು, ಎಣ್ಣೆ ಒತ್ತಿದರೂ ನೆತ್ತಿ ಆಗದು ತಂಪು, ಸುಳಿಯದು ನಿದ್ದೆಯ ಜೊಂಪು, ಎಲ್ಲಕ್ಕೂ ಕಾರಣ ಹಾಳಾದವ ಟ್ರಂಪು' ಎಂದು ಕವನ ಕೊರೆದ ಕಲ್ಲೇಶಿ.

'ಟೆರೇಸ್ ಮೇಲಿದ್ದ ಪೇಣಿ ತರಕ್ ಓದ್ರೂ ನನ್ ಹೆಂಡ್ತಿ ಹಿಂದೇನೆ ಬಂದು ಯಾವ್ದಾರ ಕೆಟ್ ಕ್ಷಿಪಣಿ ತಲೆ ಮೇಲೆ ಬಿದ್ದಾತು ಅಂತ ಎಳ್ಕಂಡು ಬಂದ್ಲು' ಎಂದ ಭದ್ರ.

'ನೀನು ಪೇಣಿನಲ್ಲ, ಪಕ್ಕದ ಮನೆ ನಾಗವೇಣಿ ನೋಡಕ್ ಹೋಗಿದ್ದೆ ಅಂತ ನಿನ್ ಹೆಂಡ್ತಿಗೆ ಗೊತ್ತು ಬಿಡು. ನಾನೂ ಮನೇಲಿರಕ್ಕಾಗ್ದೆ ಈಚೆ ಬಂದು ನೋಡುದ್ರೆ ಸಿಲಿಂಡರಿಗೆ ಘೋರ ಯುದ್ಧ ನಡೀತಿತ್ತು'.

'ನಾನು ನಿದ್ದೇಲೇ ಶಾಂತಿ ಬೇಕು ಶಾಂತಿ ಅಂತ ಕನವರಿಸ್ತಿದ್ದೆ. ನನ್ ಹೆಂಡ್ತಿ ತಿವಿದು ಎಬ್ಸಿ ಯಾವಾಳ್ರೀ ಅವಳು ಶಾಂತಿ? ಅಂತ ಅವಾಜ್ ಹಾಕುದ್ಲು'.

'ಅಸಲಿ ಕದನ ಆಗ ಶುರುವಾಗುತ್ತೆ ಬುಡು. ಈ ಯುದ್ಧದ್ ಕಿರಿಕಿರಿ ತಪ್ಪುಸ್ಕೋಬೇಕು ಅಂದ್ರೆ ಆರತಿ ಮಿಸ್ ಹತ್ಕಂಡು ಚಂದ್ರನ ಕಡೆ ಓಯ್‌ಬಿಡ್ಬೇಕು'.

'ಲೇಯ್, ಅದು ಆರತಿ ಮಿಸ್ ಅಲ್ಲ ಕಣಲೇ! ಆರ್ಟಿಮಿಸ್! ಅದರಲ್ಯಾಕ್ ಹೋಗ್ಬೇಕು? ಯಾವ್ದಾರೂ ವಿಮಾನಕ್ಕೆ ಎಟಿಸಿ ಕ್ಲಿಯರೆನ್ಸ್ ಸಿಕ್ಕಿದ್ರೆ ಚಂದ್ರ, ನವಗ್ರಹ, ಸ್ವರ್ಗ ಎಲ್ಲಾ ಕಾಣ್ತದೆ' ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ವನ್ಯಜೀವಿ ಸಂತಾನಶಕ್ತಿ ಹರಣ: ಕೆಡುಕಿನ ಚಿಂತನೆ

ವನ್ಯಜೀವಿಗಳ ಬದುಕಿನಲ್ಲಿ ಹಸ್ತಕ್ಷೇಪ ನಡೆಸಿದ್ದು ಸಾಲದೆ, ಅವುಗಳ ಸಂತಾನಶಕ್ತಿ ಹರಣದ ಚಿಂತನೆಯೂ ಈಗ ಶುರುವಾಗಿದೆ. ಇದು ಅಮಾನವೀಯ ಯೋಚನೆ.

● ನಾಗರಾಜ ಕೂವೆ

ಪರಿಸರ ಮತ್ತು ವನ್ಯಜೀವಿ ನಾಶ ತೀವ್ರಗತಿಯಲ್ಲಿ ಇರುವ ಸಂದರ್ಭದಲ್ಲಿ, ವನ್ಯಜೀವಿಗಳನ್ನು ಗುಂಡು ಹೊಡೆದು ಕೊಲ್ಲುವ, ಅವುಗಳ ಸಂತಾನಶಕ್ತಿ ಹರಣ ಮಾಡುವ, ಸ್ಥಳಾಂತರಿಸುವ ಚರ್ಚೆಗಳು, ಚಿಂತನೆಗಳು ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರಿಂದಲೇ ನಡೆಯುತ್ತಿವೆ.

ಕೆಲವು ತಿಂಗಳ ಹಿಂದೆ ಆನೆ ದಾಳಿಯಿಂದ ಶೃಂಗೇರಿ ಕ್ಷೇತ್ರದ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟರು. ಆಗ, ಮಾಜಿ ಶಾಸಕ ಡಿ.ಎನ್. ಜೀವರಾಜ್, '20 ಲಕ್ಷ ರೂಪಾಯಿ ಕೊಡ್ತೀವಿ, ಆನೆ ಹೊಡೆಯೋದಕ್ಕೆ ಅನುಮತಿ ಕೊಡಿ' ಎಂದು ಕೊಪ್ಪ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಎದುರು ಹೇಳಿದ್ದರು. ಆ ವಿಡಿಯೊ ವೈರಲ್ ಆಗಿತ್ತು. ಕಳೆದ ವರ್ಷ ವಿಧಾನಸಭಾ ಅಧಿವೇಶನದಲ್ಲಿ ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ, 'ಆನೆಗಳಿಂದ ಕಾಡಂಚಿನ ಜನರಿಗೆ ತೊಂದರೆ ಆಗುತ್ತಿದೆ. ರೈತರಿಗೆ ಕೋವಿ ಪಡೆಯಲು ಪರವಾನಗಿ ನೀಡಿ, ಆನೆಗಳನ್ನು ಕೊಲ್ಲಲು ಅನುಮತಿ ನೀಡಿ' ಎಂದು ಆಗ್ರಹಿಸಿದ್ದರು. ಆ ಹೇಳಿಕೆ ಖಂಡಿಸಿದ್ದ ಅರಣ್ಯ ಸಚಿವ ಈಶ್ವರ ಖಂಡ್ರೆ, 'ಜವಾಬ್ದಾರಿ ಸ್ಥಾನದಲ್ಲಿರುವವರು ಈ ರೀತಿ ಮಾತನಾಡುವುದು ದುರದೃಷ್ಟಕರ' ಎಂದಿದ್ದರು. ವಿಪರ್ಯಾಸ ನೋಡಿ: ಈಗ ಈಶ್ವರ ಖಂಡ್ರೆಯವರೇ, 'ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಆಯ್ದ ವನ್ಯಜೀವಿಗಳ ಸಂತಾನಶಕ್ತಿ ಹರಣದ ಅಗತ್ಯ ಕುರಿತು ಸಾರ್ವಜನಿಕ ಚರ್ಚೆ ನಡೆಯಬೇಕು' ಎಂದು ಹೇಳಿದ್ದಾರೆ. ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಬಗೆಗೆ ಖಂಡ್ರೆಯವರು ಜವಾಬ್ದಾರಿಯಿಂದ ಮಾತನಾಡುತ್ತಾರೆ. ಆದರೆ, ಈಗ ಸಮಸ್ಯೆಯ ಮೂಲ ಕಾರಣಗಳನ್ನು ಹುಡುಕಿ ಪರಿಹರಿಸುವ ಕೆಲಸ ಮಾಡದೆ, ಬಿಡುಬೀಸಾಗಿ ಮಾತನಾಡಿದ್ದಾರೆ.



ಮನುಷ್ಯ ಮತ್ತು ವನ್ಯಜೀವಿ ಸಂಘರ್ಷದ ಬಗ್ಗೆ ಯೋಚಿಸುವಾಗ ಕೇಳಿಕೊಳ್ಳಬೇಕಾದ ಮೊದಲ ಪ್ರಶ್ನೆ 'ವನ್ಯಜೀವಿಗಳು ಕಾಡಿನಿಂದ ನಾಡಿನೆಡೆಗೆ ಬರುವುದು ಏಕೆ? ಚಿಕ್ಕಮಗಳೂರು ಜಿಲ್ಲೆಯಲ್ಲಿ ಆನೆ ದಾಳಿ ಪ್ರಕರಣಗಳು ಹೆಚ್ಚು. ಕಾರಣ ಹುಡುಕಿದರೆ, ಎತ್ತಿನಹೊಳೆ ಯೋಜನೆಯು ಆನೆಗಳ ಆವಾಸ ಸ್ಥಾನವನ್ನು ನಾಶ ಮಾಡಿರುವುದು ಮುನ್ನೆಲೆಗೆ ಬರುತ್ತದೆ. ತುಂಗಾ ಏತ ನೀರಾವರಿ ಯೋಜನೆ ಆನೆ ಕಾರಿಡಾರ್‌ಗಳನ್ನು ಕತ್ತರಿಸಿದೆ. ಪಶ್ಚಿಮಘಟ್ಟ ಭಾಗದಲ್ಲಿ ಸಾವಿರಾರು ಕಾಫಿ ಪ್ಲಾಂಟರ್‌ಗಳು ಲಕ್ಷಾಂತರ ಎಕರೆ ಅರಣ್ಯವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇಷ್ಟೆಲ್ಲ ಆದ ಮೇಲೆ ಆನೆ ನಾಡಿಗೆ ಬಾರದಿರುತ್ತದೆಯೆ?

ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಸುತ್ತಲೂ ಅಕ್ರಮ ರೆಸಾರ್ಟ್, ಹೋಂ ಸ್ಟೇಗಳು ರೂಪುಗೊಂಡಿವೆ. ಪ್ರವಾಸಿಗರ ಅಕ್ರಮ ಕಾಡು ಪ್ರವೇಶ, ವನ್ಯಜೀವಿಗಳ ಸಹಜ ಜೀವನಕ್ಕೆ ಅಡ್ಡಿ ಉಂಟು ಮಾಡುತ್ತಿದೆ. ಇದೆಲ್ಲದರಿಂದಾಗಿ ತಮ್ಮ ಮೂಲ ನೆಲೆಯಿಂದ ಹೊರಬಿದ್ದಿರುವ ಆನೆಗಳು ನೀರು–ಆಹಾರ ಅರಸಿ ಜನವಸತಿ ಪ್ರದೇಶಗಳತ್ತ ಬರುತ್ತಿವೆ.

ಮಲೆನಾಡಿನಲ್ಲಿ ಕಾಟಗಳು ಮೇಯುತ್ತಿದ್ದ ಶೋಲಾ ಹುಲ್ಲುಗಾವಲು ಈಗ ಅಕೇಶಿಯಾ ಮರಗಳ ಬೀಡಾಗಿದೆ. ವನ್ಯಜೀವಿಗಳು ಓಡಾಡುವ ದಾರಿಗಳನ್ನು ಹೆದ್ದಾರಿಗಳು ಕತ್ತರಿಸಿವೆ. ದೊಡ್ಡ ದೊಡ್ಡ ಯೋಜನೆಗಳು ವನ್ಯಜೀವಿಗಳ ಆವಾಸಸ್ಥಾನಗಳನ್ನು ಛಿದ್ರಗೊಳಿಸಿವೆ. ರೈತರ ಹೊಲ, ಗದ್ದೆಗಳು ಕಾಡುಗಳ ನಡುವಿನ ಸಂಪರ್ಕ ಕೊಂಡಿಯನ್ನೇ ತುಂಡರಿಸಿ, ಒಂದೊಂದು ಕಾಡನ್ನೂ ಒಂದೊಂದು ದ್ವೀಪವನ್ನಾಗಿಸಿದೆ. ಹೀಗಾಗಿ, ದಿಕ್ಕೆಟ್ಟ ವನ್ಯಜೀವಿಗಳು ಜನವಸತಿಗಳತ್ತ ಬರುತ್ತಿವೆ.

ಸರ್ಕಾರ ದೊಡ್ಡ ಒತ್ತುವರಿಗಳನ್ನು ತೆರವುಗೊಳಿಸುತ್ತಿಲ್ಲ. ವನ್ಯಜೀವಿಗಳ ಆವಾಸ ಸ್ಥಾನಗಳ ರಕ್ಷಣೆಗೆ ಅಗತ್ಯ ಕ್ರಮ ವಹಿಸುತ್ತಿಲ್ಲ. ಈಗ ಸಕಲ ಸಮಸ್ಯೆಗಳಿಗೂ ಮುಗ್ಧ ವನ್ಯಜೀವಿಗಳನ್ನು ಗುರಿಯಾಗಿಸಿ, ಸರ್ಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದೆ.

ವನ್ಯಜೀವಿಗಳ ಸಂತಾನಶಕ್ತಿ ಹರಣಗೊಳಿಸುವ ಚಿಂತನೆ ಮಾಡುವ ಮೊದಲು ದೊಡ್ಡ ದೊಡ್ಡ ಕಾಫಿ–ಟೀ ಎಸ್ಟೇಟ್ ಒತ್ತುವರಿಗಳು ತೆರವುಗೊಳ್ಳಲಿ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಇರುವ ಅಕ್ರಮ ಹೋಂ ಸ್ಟೇ, ರೆಸಾರ್ಟ್, ಹೋಟೆಲ್‌ಗಳು ತೆರವುಗೊಳ್ಳಲಿ. ಸಂರಕ್ಷಿತ ಪ್ರದೇಶದೊಳಗೆ, ಅದರ ಸುತ್ತಮುತ್ತಲೂ ಅರಣ್ಯ ಇಲಾಖೆ ಮತ್ತು ಖಾಸಗಿ ವ್ಯಕ್ತಿಗಳು ನಡೆಸುವ ಪ್ರವಾಸೋದ್ಯಮ ಚಟುವಟಿಕೆಗಳು ನಿಲ್ಲಲಿ. ಪರಿಸರ ನಾಶ ಮಾಡುವ, ರಾಜಕಾರಣಿಗಳು, ಗುತ್ತಿಗೆದಾರರು, ಅಧಿಕಾರಿಗಳಿಗೆ ಮಾತ್ರ ಬೇಕಾದ ಆಗುಂಬೆ ಸುರಂಗ ಮಾರ್ಗ, ಶೃಂಗೇರಿ ರೈಲು, ಚತುಷ್ಪಥ ಹೆದ್ದಾರಿ, ಶರಾವತಿ ಪಂಪ್ಡ್ ಸ್ಟೋರೇಜ್ ಮೊದಲಾದ ನಿಷ್ಪ್ರಯೋಜಕ ಯೋಜನೆಗಳು ನಿಲ್ಲಲಿ. ಇದೆಲ್ಲಾ ಆಗಿಯೂ ವನ್ಯಜೀವಿ ದಾಳಿ ಹತೋಟಿಗೆ ಬರಲಿಲ್ಲ ಎಂದರೆ ಮತ್ತೆ ಸಂತಾನಶಕ್ತಿ ಹರಣದ ಬಗೆಗೆ ಸರ್ಕಾರ, ಸಾರ್ವಜನಿಕರು ಚಿಂತನೆ ಮಾಡಬಹುದು.

ಹುಲಿ ಮತ್ತು ಚಿರತೆ ದಾಳಿಯಿಂದ ಜನರ ಸಾವುಗಳು ಆದಾಗ ಪ್ರತಿಭಟನೆಗಳು ನಡೆದವು. ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳ ವ್ಯಾಪ್ತಿಯಲ್ಲಿ ಸರ್ಕಾರ ತಾತ್ಕಾಲಿಕವಾಗಿ ಸಫಾರಿ ನಿಲ್ಲಿಸಿತು. ಅಷ್ಟೂ ದಿನಗಳಲ್ಲಿ ಯಾವುದೇ ವನ್ಯಜೀವಿ ದಾಳಿ ಪ್ರಕರಣ ದಾಖಲಾಗಲಿಲ್ಲ. ಪರಿಸ್ಥಿತಿ ಸುಧಾರಿಸಿತ್ತು. ಈಗ ಅರಣ್ಯ ಇಲಾಖೆಯು ಸಫಾರಿ ಪುನರಾರಂಭಿಸಿದೆ. ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ನೆಲ ಮೂಲದ ಜನರ ಅನುಭವಜನ್ಯ ವಿವೇಕದ ಮಾತುಗಳನ್ನು ಕೇಳಿಸಿಕೊಳ್ಳಲು ಆಡಳಿತ ನಡೆಸುವವರಿಗೆ ಆಸಕ್ತಿಯಿಲ್ಲ.

ಮನುಷ್ಯರು ಕಾಡಿನ ತಂಟೆಗೆ ಹೋಗುವುದು ನಿಂತರೆ ವನ್ಯಜೀವಿಗಳು ನಾಡಿನ ತಂಟೆಗೆ ಬರುವುದು ಕಡಿಮೆ ಆಗುತ್ತದೆ.

ಭಾರತ ಸಂವಿಧಾನದ 51ಎ(ಜಿ) ಪ್ರಕಾರ, 'ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು ಮತ್ತು ಪ್ರಾಣಿಗಳಿಗೆ ಅನುಕಂಪ ತೋರಿಸುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯ'. ಇದನ್ನು ಅಧಿಕಾರದಲ್ಲಿ ಇರುವವರಿಗೆ ನೆನಪಿಸಬೇಕಿದೆ. ಪ್ರಾಣಿಗಳಿಗೂ ಜೀವಿಸುವ ಹಕ್ಕಿರುವುದನ್ನು ಮರೆಯಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ಜಾಗತಿಕ ಮಟ್ಟದಲ್ಲಿ ಇಂಧನ ಬಿಕ್ಕಟ್ಟನ್ನು ಸೃಷ್ಟಿಸಿದೆ. ಈ ಸಂಘರ್ಷವು ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ವ್ಯಾಪಾರವನ್ನು ಅಸ್ತವ್ಯಸ್ತಗೊಳಿಸಿದೆ. ಭವಿಷ್ಯದಲ್ಲಿಯೂ ಇಂಥ ಸ್ಥಿತಿ ಮತ್ತೆ ಮತ್ತೆ ಎದುರಾಗುವ ಸಂಭವವಿದೆ. ಹೀಗಾಗಿ ತೈಲ ಮತ್ತು ಅನಿಲಕ್ಕೆ ಪರ್ಯಾಯಗಳನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಗಿದೆ. ಈ ವಿಚಾರದಲ್ಲಿ ಚೀನಾ ಗಮನಾರ್ಹ ಸಾಧನೆ ಮಾಡಿದ್ದರೆ, ಪಾಕಿಸ್ತಾನವೂ ಒಂದಷ್ಟು ಕೆಲಸ ಮಾಡಿದೆ. ಪವನ, ಸೌರಶಕ್ತಿ, ವಿದ್ಯುತ್‌ನಂಥ ಶುದ್ಧ ಇಂಧನದ ಪರ್ಯಾಯಗಳನ್ನು ಹೆಚ್ಚು ಬಳಸುವ ದಿಸೆಯಲ್ಲಿ ಹೆಜ್ಜೆ ಇಡಲು ಇದು ಸಕಾಲ

ಜಗತ್ತನ್ನು ಬದಲಿಸಲಿರುವ ಇಂಧನ ಬಿಕ್ಕಟ್ಟು

ಅಮೆರಿಕ–ಇಸ್ರೇಲ್ ಮತ್ತು ಇರಾನ್ ಯುದ್ಧದಿಂದ ಜಾಗತಿಕ ಮಾರುಕಟ್ಟೆಯಲ್ಲಿ ತೈಲ, ಅನಿಲ ಪೂರೈಕೆ ಅಸ್ತವ್ಯಸ್ತ

• ಜೊನಾಥನ್ ಮಿಂಗಲ್



ಶ್ರೀಲಂಕಾ ಮತ್ತು ಮ್ಯಾನ್ಮಾರ್ ಇಂಧನವನ್ನು ಈಗ ಪಡಿತರದ ರೀತಿ ವಿತರಿಸಲು ಆರಂಭಿಸಿವೆ. ಪೆಟ್ರೋಲ್ (ಗ್ಯಾಸೋಲಿನ್) ಮತ್ತು ವಿದ್ಯುತ್ ಉಳಿಸುವುದಕ್ಕಾಗಿ ಫಿಲಿಪ್ಪೀನ್ಸ್ ವಾರದಲ್ಲಿ ನಾಲ್ಕು ದಿನ ಮಾತ್ರ ಕೆಲಸ ಮಾಡುವ ನಿಯಮವನ್ನು ಜಾರಿಗೆ ತಂದಿದೆ. ಮನೆಗಳು ಮತ್ತು ಉದ್ದಿಮೆಗಳಿಗೆ ವಿದ್ಯುತ್ ಪೂರೈಸುವುದಕ್ಕಾಗಿ ಬಾಂಗ್ಲಾದೇಶವು ತನ್ನ ವಿಶ್ವವಿದ್ಯಾಲಯಗಳನ್ನು ತಾತ್ಕಾಲಿಕವಾಗಿ ಮುಚ್ಚಿದೆ. ಭಾರತದಾದ್ಯಂತ ಕುಟುಂಬಗಳು ಮತ್ತು ರೆಸ್ಟೋರೆಂಟ್‌ಗಳು ಅನಿಲ ಸಿಗದೆ ಇರುವ ಕಾರಣದಿಂದ ಸೌದೆ, ಉರುವಲನ್ನು ಅಡುಗೆಗೆ ಬಳಸುತ್ತಿವೆ. ವಿಮಾನಯಾನ ಸಂಸ್ಥೆಗಳು ವಿಮಾನಗಳ ಹಾರಾಟವನ್ನು ರದ್ದುಗೊಳಿಸುತ್ತಿವೆ.

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ನಡೆದ ಯುದ್ಧದ ಮೊದಲ ಹಂತದಲ್ಲಿ ಸೃಷ್ಟಿಯಾಗಿರುವ ಇಂಧನ ಬಿಕ್ಕಟ್ಟು ಜಾಗತಿಕ ಮಟ್ಟದಲ್ಲಿ ತೆರೆದಿಟ್ಟಿರುವ ಸಂಕಟಕರ ಸನ್ನಿವೇಶ ಇದು. ಭವಿಷ್ಯದಲ್ಲಿ ಈ ಬಿಕ್ಕಟ್ಟು ಇನ್ನಷ್ಟು ತೀವ್ರವಾಗಿರಲಿದೆ.

ಅಂತರರಾಷ್ಟ್ರೀಯ ಇಂಧನ ಸಂಸ್ಥೆಯ (ಇಂಟರ್‌ನ್ಯಾಷನಲ್ ಎನರ್ಜಿ ಏಜೆನ್ಸಿ– ಐಇಎ) ಮುಖ್ಯಸ್ಥ ಫಾತ್ಹಿ ಬಿರೋಲ್ ಅವರು ಈ ಬಿಕ್ಕಟ್ಟನ್ನು, ‘ಪ್ರಪಂಚದ ಇತಿಹಾಸದಲ್ಲೇ ಜಾಗತಿಕ ಇಂಧನ ಭದ್ರತೆಗೆ ಒಡ್ಡಿರುವ ಅತ್ಯಂತ ದೊಡ್ಡ ಬೆದರಿಕೆ’ ಎಂದು ಕರೆದಿದ್ದಾರೆ. 1970ರ ದಶಕದ ತೈಲ ಬಿಕ್ಕಟ್ಟಿಗಿಂತಲೂ, ಕೋವಿಡ್ ಸಾಂಕ್ರಾಮಿಕ ಅಥವಾ 2022ರಲ್ಲಿ ಉಕ್ರೇನ್ ಮೇಲೆ ರಷ್ಯಾ ನಡೆಸಿದ ಅತಿಕ್ರಮಣದ ಸಂದರ್ಭದಲ್ಲಿ ಕಂಡುಬಂದಿದ್ದಕ್ಕಿಂತಲೂ ಹೆಚ್ಚು ತೀವ್ರವಾದ ಬಿಕ್ಕಟ್ಟು ಇದು ಎಂಬುದು ಅವರ ಪ್ರತಿಪಾದನೆ.

ಈಗಿನ ಸಂಘರ್ಷವು ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ವ್ಯಾಪಾರವನ್ನೇ ಅಸ್ತವ್ಯಸ್ತಗೊಳಿಸಿದೆ. ಇಂಧನ ಪೂರೈಕೆಯಲ್ಲಿ ಉಂಟಾಗಿರುವ ಅಂತರ/ಕೊರತೆಯನ್ನು ತುಂಬಲು ತಕ್ಷಣಕ್ಕೆ ಮಾರ್ಗಗಳೂ ಇಲ್ಲದಂತಾಗಿವೆ.

ಶುದ್ಧ ಇಂಧನದ ಕಡೆ ಮುಖ

ನೈಸರ್ಗಿಕ ಅನಿಲದ ಬೆಲೆ ಹೆಚ್ಚಾಗಿದೆ. ಇದರಿಂದಾಗಿ ಎದುರಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲು ಭಾರತ, ಇಂಡೊನೇಷ್ಯಾ ಮತ್ತು ವಿಯೆಟ್ನಾಂನಂತಹ ರಾಷ್ಟ್ರಗಳು ಕಲ್ಲಿದ್ದಲನ್ನು ಹೆಚ್ಚು ಬಳಸುತ್ತಿವೆ. ಈ ಇಂಧನ ಬಿಕ್ಕಟ್ಟು ನೀಡಿರುವ ಆಘಾತವು ದೀರ್ಘ ಅವಧಿಯಲ್ಲಿ ಏಷ್ಯಾ ಮತ್ತು ಯುರೋಪ್ ಖಂಡಗಳ ದೇಶಗಳು ಶುದ್ಧ ಇಂಧನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಗೆ ವೇಗ ನೀಡಲಿವೆ.

ತೈಲ ಮತ್ತು ಅನಿಲಕ್ಕೆ ಪರ್ಯಾಯವಾಗಿರುವ ಸೌರ ಫಲಕಗಳು, ಗಾಳಿ ಟರ್ಬೈನ್‌ಗಳು, ಎಲೆಕ್ಟ್ರಿಕ್ ವಾಹನಗಳು ಮತ್ತು ಬ್ಯಾಟರಿಗಳು ಕಡಿಮೆ ಬೆಲೆಗೆ ಹಾಗೂ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವಾಗ ಉಂಟಾಗಿರುವ ಮೊದಲ ತೈಲ ಬಿಕ್ಕಟ್ಟು ಇದು.

ಇಂಧನದ ಪೂರೈಕೆಯಲ್ಲಿ ಆಗಿರುವ ವ್ಯತ್ಯಯವು ಈಗಾಗಲೇ ಗ್ರಾಹಕರು ಶುದ್ಧ ಇಂಧನ ತಂತ್ರಜ್ಞಾನಗಳನ್ನು ಅಪ್ಪಿಕೊಳ್ಳುವಂತೆ ಮಾಡಿದೆ. ಫಿಲಿಪ್ಪೀನ್ಸ್ ಸರ್ಕಾರ ಮಾರ್ಚ್ 24ರಂದು ರಾಷ್ಟ್ರೀಯ ಇಂಧನ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ ಕೂಡಲೇ, ಮನಿಲಾದ ಗ್ರಾಹಕರು ಎಲೆಕ್ಟ್ರಿಕ್ ಕಾರುಗಳನ್ನು ಖರೀದಿಸಲು ಚೀನಾದ ಕಾರು ತಯಾರಿಕಾ ಕಂಪನಿ ಬಿವೈಡಿಯ ಶೋರೂಂಗಳ ಮುಂದೆ ಜಮಾಯಿಸಿದರು. ಜರ್ಮನಿಯಲ್ಲಿ ಗ್ರಾಹಕರು ಸೌರಶಕ್ತಿಯ ಉಪಕರಣಗಳ ಅಳವಡಿಕೆಗೆ ಆಸಕ್ತಿ ತೋರಿದ್ದು, ಅಲ್ಲಿ ಸೌರಶಕ್ತಿ ಉಪಕರಣಗಳ ಮಾರಾಟಗಾರರಿಗೆ ವ್ಯಾಪಾರ ಮತ್ತು ಅವುಗಳನ್ನು ಅಳವಡಿಸುವವರಿಗೂ ಕೆಲಸ ಹೆಚ್ಚಾಯಿತು. ಬ್ರಿಟನ್‌ನಲ್ಲಿ ಹೀಟ್ ಪಂಪ್‌ಗಳ ಅಳವಡಿಕೆ ಹೆಚ್ಚಾಗಿದೆ. ಪಾಕಿಸ್ತಾನದಲ್ಲಿ ಎಲೆಕ್ಟ್ರಿಕ್ ರಿಕ್ಷಾಗಳ ಮಾರಾಟ ಏರಿಕೆ ಕಂಡಿದೆ. ಭಾರತದಲ್ಲಿ ಇ–ಕಾಮರ್ಸ್ ವೇದಿಕೆಗಳಲ್ಲಿ ಇಂಡಕ್ಷನ್ ಸ್ಟೌಗಳ ಮಾರಾಟ ಜಾಸ್ತಿಯಾಗಿದೆ. ವಿಯೆಟ್ನಾಂನಲ್ಲಿ ದೇಶದ ಅತ್ಯಂತ ದೊಡ್ಡ ದ್ರವೀಕೃತ ನೈಸರ್ಗಿಕ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಹೊರಟಿದ್ದ ಉದ್ದಿಮೆಗಳ ಸಮೂಹವೊಂದು ಈಗ ಆ ಯೋಜನೆಯನ್ನು ಕೈಬಿಟ್ಟು, ಅದರ ಬದಲಿಗೆ ನವೀಕರಿಸಬಹುದಾದ ಇಂಧನ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಮತ್ತು ವಿದ್ಯುತ್ ಅನ್ನು ಬ್ಯಾಟರಿಗಳಲ್ಲಿ ಸಂಗ್ರಹಿಸುವ ಯೋಜನೆ ಕೈಗೆತ್ತಿಕೊಳ್ಳಲು ಯೋಚಿಸುತ್ತಿದೆ.

ಯುದ್ಧ ಆರಂಭಗೊಂಡ ನಂತರ ಚೀನಾದ ಮೂರು ಬಹುದೊಡ್ಡ ಬ್ಯಾಟರಿ ಕಂಪನಿಗಳ ಷೇರು ಮಾರುಕಟ್ಟೆ ಮೌಲ್ಯ ತಲಾ ಅಂದಾಜು ಶೇ 20ರಷ್ಟು ಅಥವಾ ಒಟ್ಟಾಗಿ 7,000 ಕೋಟಿ ಡಾಲರ್‌ಗಳಷ್ಟು ಹೆಚ್ಚಾಗಿದೆ.

ಶುದ್ಧ ಇಂಧನದತ್ತ ತ್ವರಿತವಾಗಿ ಮುಖಮಾಡಬೇಕು ಎಂದು ಬಯಸುವ ಸರ್ಕಾರಗಳಿಗೆ ಪಾಕಿಸ್ತಾನದ ಇತ್ತೀಚಿನ ಇತಿಹಾಸದಲ್ಲಿ ಹಲವು ಪಾಠಗಳು ಸಿಗಬಹುದು. 2022ರಲ್ಲಿ ರಷ್ಯಾ ಉಕ್ರೇನ್ ಮೇಲೆ ಯುದ್ಧ ಸಾರಿದಾಗ ಪಾಕಿಸ್ತಾನವು ಇಂಧನದ ಆಘಾತಕ್ಕೆ ಒಳಗಾಗಿತ್ತು. ಅನಿಲದ ಬೆಲೆ ದಿಢೀರ್ ಹೆಚ್ಚಳವಾದಾಗ ಖರೀದಿ ಮಾಡುವ ಸಾಮರ್ಥ್ಯ ಅದಕ್ಕಿರಲಿಲ್ಲ. ಪಾಕಿಸ್ತಾನಕ್ಕೆ ಬರಬೇಕಾದ, ಹಡಗುಗಳಲ್ಲಿ ತುಂಬಿದ್ದ ಅನಿಲವನ್ನು ಯುರೋಪಿನ ಶ್ರೀಮಂತರು ಖರೀದಿಸಿದರು.

ಆದರೆ, ಅದೇ ಹೊತ್ತಿನಲ್ಲಿ ಅಗ್ಗದ ಸೌರ ಫಲಕಗಳು ಚೀನಾದಿಂದ ಭರಪೂರವಾಗಿ ಪೂರೈಕೆಯಾದವು. ಇದು ಪಾಕಿಸ್ತಾನದ ಇಂಧನ ವ್ಯವಸ್ಥೆಯನ್ನೇ ಬದಲಾಯಿಸಿತು. ಈಗ ಉಂಟಾಗಿರುವ ದ್ರವೀಕೃತ ನೈಸರ್ಗಿಕ ಅನಿಲ ಕೊರತೆಯ ಸವಾಲನ್ನು ಎದುರಿಸಲೂ ಅದಕ್ಕೆ ಇದರಿಂದ ಸಾಧ್ಯವಾಗಿದೆ. ಪಾಕಿಸ್ತಾನ ಉತ್ಪಾದಿಸುವ ಒಟ್ಟು ವಿದ್ಯುತ್‌ನಲ್ಲಿ ಸುಮಾರು ಶೇ 30ರಷ್ಟನ್ನು ಸೂರ್ಯನ ಬೆಳಕಿನಿಂದ ಉತ್ಪಾದಿಸುತ್ತಿದೆ. 2020ಕ್ಕೆ ಹೋಲಿಸಿದರೆ ಇದರ ಪ್ರಮಾಣ ಶೇ 3ರಷ್ಟು ಹೆಚ್ಚಾಗಿದೆ. ಪಾಕಿಸ್ತಾನದಲ್ಲಿ ಸೌರಶಕ್ತಿಯ ಬಳಕೆಯಲ್ಲಿ ಆಗುತ್ತಿರುವ ಹೆಚ್ಚಳವು ಈ ವರ್ಷ ಅದು 700 ಕೋಟಿ ಡಾಲರ್ ಮೌಲ್ಯದ ಪಳೆಯುಳಿಕೆ ಇಂಧನ ಆಮದು ಮಾಡಿಕೊಳ್ಳುವುದನ್ನು ತಪ್ಪಿಸಲಿದೆ. ಇದು ಪಾಕಿಸ್ತಾನಿಯರಿಗೆ ಇಂಧನದ ಕೊರತೆಯಾಗುವುದರಿಂದ ರಕ್ಷಣೆ ನೀಡಲಿದೆ ಎಂದು ‘ಸೆಂಟರ್ ಫಾರ್ ರಿಸರ್ಚ್ ಆ್ಯಂಡ್ ಕ್ಲೀನ್ ಏರ್’ ಅಂದಾಜಿಸಿದೆ.

‘ಸೌರಶಕ್ತಿಯನ್ನು ಗರಿಷ್ಠವಾಗಿ ಬಳಸಿಕೊಳ್ಳಲು ಆರಂಭಿಸಿದರೆ ಕೆಲವೇ ವರ್ಷಗಳಲ್ಲಿ ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯ’ ಎಂಬುದು ರಿಸರ್ಚ್ ಸೆಂಟರ್‌ನ ಮುಖ್ಯ ವಿಶ್ಲೇಷಕರಾದ ಲೌರಿ ಮಿಲ್ಲಿವಿರ್ತಾ ಅವರ ಅಭಿಪ್ರಾಯ.

ಚೀನಾ ಸಾಧನೆ

ಇಂಧನ ಭದ್ರತೆಯನ್ನು ಸಾಧಿಸುವುದು ಈ ಕ್ಷಣದ ತುರ್ತಾಗಿದೆ. ಅದರ ಅರ್ಥ ಹೆಚ್ಚು ಗಾಳಿ, ಸೌರಶಕ್ತಿ ಮತ್ತು ಬ್ಯಾಟರಿಗಳನ್ನು ಅಳವಡಿಸುವುದಲ್ಲ; ದೇಶೀಯ ಶುದ್ಧ ಇಂಧನ ಮೂಲಗಳ ಉತ್ಪಾದನಾ ಸಾಮರ್ಥ್ಯ ಬೆಳೆಸುವುದು ಮತ್ತು ಮನೆಗಳಲ್ಲಿ ಮತ್ತು ಸಾರಿಗೆಗೆ ವಿದ್ಯುತ್ ಉಪಕರಣ ಮತ್ತು ತಂತ್ರಜ್ಞಾನವನ್ನು ಬಳಸುವುದು. ಇಂಧನ ಸ್ವಾಯತ್ತೆಯು ಹೆಚ್ಚಾದಂತೆ, ಅಧಿಕ ರಾಷ್ಟ್ರಗಳು ಆರೋಗ್ಯ ಕೆಡಿಸುವ ವಾಯುಮಾಲಿನ್ಯ ಮತ್ತು ವಾತಾವರಣದ ಉಷ್ಣತೆ ಹೆಚ್ಚಿಸುವ ಹೊರಸೂಸುವಿಕೆಗಳನ್ನು ನಿರ್ಣಾಯಕವಾಗಿ ತಡೆಯಲು ಸಾಧ್ಯ.

ಈ ವಿಚಾರದಲ್ಲಿ ಚೀನಾ ಹೆಚ್ಚು ಪ್ರಗತಿ ಸಾಧಿಸಿದೆ; ಕಳೆದ ದಶಕದಲ್ಲಿ ಅದು ತನ್ನ ಸಾರಿಗೆ ಮತ್ತು ಕೈಗಾರಿಕಾ ವಲಯದ ಹೆಚ್ಚಿನ ಭಾಗವನ್ನು ವಿದ್ಯುತ್ ಆಧಾರಿತವಾಗಿ ರೂಪಿಸಿತು ಮತ್ತು ತನ್ನ ತೈಲ ಬಳಕೆಯಲ್ಲಿ ದಿನಕ್ಕೆ ಹತ್ತು ಲಕ್ಷ ಬ್ಯಾರಲ್‌ಗಳಷ್ಟು ಕಡಿಮೆ ಮಾಡಿತು. ಇದೇ ಪ್ರಸ್ತುತ ಯುದ್ಧದ ಬಿಕ್ಕಟ್ಟಿನಲ್ಲಿ ಚೀನಾವನ್ನು ಕಾಪಾಡಿರುವುದು. ಚೀನಾದ ಕಂಪನಿಗಳು ವಿವಿಧ ರಾಷ್ಟ್ರಗಳಲ್ಲಿ ಎಲೆಕ್ಟ್ರಿಕ್ ವಾಹನ ತಯಾರಿಕೆ, ಚಾರ್ಜರ್, ಬ್ಯಾಟರಿ, ಸೌರಶಕ್ತಿ, ಪವನ ವಿದ್ಯುತ್ ಮತ್ತು ಇತರ ಶುದ್ಧ ಇಂಧನ ತಂತ್ರಜ್ಞಾನ ಕ್ಷೇತ್ರದಲ್ಲಿ 22,700 ಕೋಟಿ ಡಾಲರ್‌ಗಿಂತಲೂ ಹೆಚ್ಚು ಮೊತ್ತವನ್ನು ಹೂಡಿಕೆ ಮಾಡಲು ಮುಂದಾಗಿವೆ ಎಂದು ಜಾನ್ಸ್ ಹಾಪ್ಕಿನ್ಸ್‌ನ ಸಹಾಯ್ ಲ್ಯಾಬ್ ವರದಿ ತಿಳಿಸಿದೆ.

ಚೀನಾಕ್ಕೆ ಯುದ್ಧಕಾಲದ ಇಂಧನ ಬಿಕ್ಕಟ್ಟು ಅಷ್ಟಾಗಿ ತಾಗದಿರಲು ಕಾರಣ, ಅದರ ಮುಂಜಾಗ್ರತೆ ಮತ್ತು ದೀರ್ಘಕಾಲದ ಸಿದ್ಧತೆ. ಸಹಾಯ್ ಹೇಳುವಂತೆ, 2003ರಲ್ಲಿ ಇರಾಕ್ ಮೇಲೆ ಅಮೆರಿಕ ದಾಳಿ ಮಾಡಿದಾಗ, ತೈಲ ದರಗಳು ಬಹುಕಾಲದವರೆಗೆ ಏರಿಕೆ ಕಂಡಿದ್ದವು. ಅದರಿಂದ ಎಚ್ಚೆತ್ತುಕೊಂಡಿದ್ದ ಚೀನಾ, ಪರ್ಯಾಯಗಳನ್ನು ರೂಪಿಸಿಕೊಂಡಿತು. ಮುಂದಿನ ದಿನಮಾನಗಳಲ್ಲಿಯೂ ಇಂಧನದ ಆಘಾತಗಳು ಎದುರಾಗುತ್ತಲೇ ಇರುತ್ತವೆ. ‘ಆ ಆಘಾತಕ್ಕೆ ವಿದ್ಯುತ್ ಆಧಾರಿತ ವ್ಯವಸ್ಥೆ ರೂಪಿಸುವುದೇ ಮದ್ದು’ ಎಂದು ಅವರು ಹೇಳುತ್ತಾರೆ.

ಈ ಆಯ್ಕೆ ಅಮೆರಿಕದ ಗ್ರಾಹಕರಿಗೂ ಇದೆ. ಇ.ವಿ (ವಿದ್ಯುತ್ ಚಾಲಿತ ವಾಹನ) ಮತ್ತು ಹೀಟ್ ಪಂಪ್‌ಗಳು ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಸಿಗಲು ಅವಕಾಶ ಕಲ್ಪಿಸಿದ್ದ ಪ್ರೋತ್ಸಾಹ ಕ್ರಮಗಳನ್ನು ಟ್ರಂಪ್ ಆಡಳಿತವು ನಿಲ್ಲಿಸಿದೆ. ಹಾಗಿದ್ದರೂ, ಅಮೆರಿಕನ್ನರು ಶೀಘ್ರ ಇ.ವಿಗಳು ಮತ್ತು ಹೀಟ್ ಪಂಪ್‌ಗಳ ಬಗ್ಗೆ ಗಮನ ಹರಿಸುವ ಸಾಧ್ಯತೆ ಇದೆ.

ಕಳೆದ ವಾರ, ಜಗತ್ತಿನ ಅತಿ ದೊಡ್ಡ ವಾರ್ಷಿಕ ಇಂಧನ ಸಮಾವೇಶದಲ್ಲಿ ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಅವರು ಮಾತನಾಡಿದ್ದನ್ನು ನಾನು ಕೇಳಿದೆ. ತೈಲ ಮತ್ತು ಅನಿಲ ಉತ್ಪಾದನೆಯನ್ನು ಪ್ರೋತ್ಸಾಹಿಸುವ ಟ್ರಂಪ್ ಆಡಳಿತದ ಪ್ರಯತ್ನಗಳನ್ನು ಅವರು ಮಾನವೀಯತೆಯ ಯೋಜನೆ ಎನ್ನುವಂತೆ ಬಣ್ಣಿಸಿದರು. ‘ಸತ್ಯ ಸರಳವಾಗಿದೆ; ಇಂಧನವೇ ಜೀವನ ಮತ್ತು ಜಗತ್ತಿಗೆ ಅದು ಬೃಹತ್ ಪ್ರಮಾಣದಲ್ಲಿ ಬೇಕು’ ಎಂದು ಅವರು ಘೋಷಿಸಿದರು.

ಇಲ್ಲಿ ಒಂದು ದುರಂತದ ಛಾಯೆಯುಳ್ಳ ವ್ಯಂಗ್ಯವಿದೆ. ಟ್ರಂಪ್ ಆಡಳಿತವು ಯುದ್ಧವನ್ನು ಆರಂಭಿಸಿದ್ದರಿಂದ ಜಗತ್ತಿನ ಪ್ರತಿ ಮೂಲೆಯಲ್ಲೂ ಇಂಧನವು ದುಬಾರಿಯಾಗಿದ್ದು, ಅಪಾಯಕಾರಿ ಮಟ್ಟ ಮುಟ್ಟಿದೆ. ಇದು ಜನರ ಅನಗತ್ಯ ನರಳಿಕೆಗೆ ಕಾರಣವಾಗಿದೆ. ಇಂಧನ ಮತ್ತು ಅನಿಲಕ್ಕಾಗಿ ಇತರ ದೇಶಗಳನ್ನು ಅವಲಂಬಿಸುವುದು ಎಷ್ಟು ಅಪಾಯಕಾರಿ ಎನ್ನುವುದನ್ನು ಇತ್ತೀಚಿನ ಅಮೆರಿಕದ ಇತಿಹಾಸದಲ್ಲಿಯೇ ಅತ್ಯಂತ ಪಳೆಯುಳಿಕೆ ಇಂಧನಸ್ನೇಹಿ ಸರ್ಕಾರವು ಸಾಬೀತುಪಡಿಸಿದೆ ಮತ್ತು ಶುದ್ಧ, ವಿದ್ಯುತ್ ಆಧಾರಿತ ಭವಿಷ್ಯದೆಡೆಗೆ ಹೆಜ್ಜೆ ಹಾಕುವುದರಲ್ಲಿ ಇಂಧನ ಭದ್ರತೆ ಅಡಗಿದೆ ಎನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟಿದೆ.

ಮೂಲ: ದಿ ನ್ಯೂಯಾರ್ಕ್ ಟೈಮ್ಸ್

ಸಹಜ ಸ್ಥಿತಿಗೆ ಬರಲು ವರ್ಷಗಳೇ ಬೇಕು

ಶುದ್ಧ ಇಂಧನದ ಬಳಕೆ ಈಗ ಬಹಳ ಮುಖ್ಯವಾಗುತ್ತದೆ. ಏಕೆಂದರೆ, ತೈಲ ಮತ್ತು ಅನಿಲದ ಪೂರೈಕೆ ಪ್ರಮಾಣ ಇರಾನ್ ಯುದ್ಧಕ್ಕೂ ಮೊದಲಿನ ಸ್ಥಿತಿಗೆ ಬರಲು ಹಲವು ವರ್ಷಗಳೇ ಬೇಕಾಗಬಹುದು. ಕತಾರಿನ ರಾಸ್ ಲಫ್ಫಾನ್ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ರಫ್ತು ಘಟಕದ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿದ ನಂತರ ದೇಶವು ಅನಿಲದ ಉತ್ಪಾದನೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿತು. ಇದರಿಂದಾಗಿ ಜಾಗತಿಕ ಮಾರುಕಟ್ಟೆಗೆ ಶೇ 20ರಷ್ಟು ಅನಿಲ ಪೂರೈಕೆ ಏಕಾಏಕಿ ನಿಂತುಹೋಯಿತು.

ಅಧಿಕಾರಿಗಳು ಹೇಳುವಂತೆ, ಆ ಘಟಕವನ್ನು ಮತ್ತೆ ಸೇವೆಗೆ ಸಜ್ಜುಗೊಳಿಸಲು ಮೂರರಿಂದ ಐದು ವರ್ಷ ಬೇಕು. ಈ ಪ್ರದೇಶದಲ್ಲಿನ ಇತರ ದೇಶಗಳು ಕೂಡ ದಾಸ್ತಾನು ಸ್ಥಳದ ಕೊರತೆ ಕಾರಣದಿಂದ ತೈಲ ಮತ್ತು ಅನಿಲದ ಉತ್ಪಾದನೆಯನ್ನು ಕಡಿತಗೊಳಿಸಿವೆ. ತೈಲ ಬಾವಿಗಳು ಯಥಾಸ್ಥಿತಿಗೆ ಹಿಂದಿರುಗುವುದು ಎಂದರೆ, ಸ್ವಿಚ್ ಹಾಕಿದರೆ ದೀಪ ಬೆಳಗುವಷ್ಟು ಸುಲಭವಲ್ಲ. ಅವು ಹಿಂದಿನ ಉತ್ಪಾದನಾ ಸಾಮರ್ಥ್ಯಕ್ಕೆ ಹಿಂದಿರುಗಲು ಹಲವು ತಿಂಗಳು ಬೇಕು. ಇದು ಪರ್ಯಾಯಗಳನ್ನು ಹುಡುಕಿಕೊಳ್ಳುವ ಒತ್ತಡ ಸೃಷ್ಟಿಸುತ್ತಿದೆ.

ಶುದ್ಧ ಇಂಧನ ವಲಯವೂ ಯುದ್ಧದಿಂದ ಹಲವು ವಿಧದಲ್ಲಿ ತೊಂದರೆಗೆ ಒಳಗಾಗಲಿದೆ. ಹಣದುಬ್ಬರ ಮತ್ತು ಬಡ್ಡಿದರ ಹೆಚ್ಚಾಗುತ್ತದೆ. ಇದರಿಂದಾಗಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವವರಿಗೆ ವಿದ್ಯುತ್ ಉತ್ಪಾದನಾ ಘಟಕ, ಗ್ರಿಡ್ ಸ್ಥಾಪನೆಗೆ ಹಣಕಾಸು ಒದಗಿಸುವುದು ಕಷ್ಟಕರವಾಗಬಹುದು. ಪರಿವರ್ತಕಗಳು, ಅಲ್ಯುಮಿನಿಯಂ ಮತ್ತು ತಾಮ್ರದ ತಂತಿಯಂಥ ಪ್ರಮುಖ ವಸ್ತುಗಳ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಬಹುದು. ಈ ಸಂದಿಗ್ಧ ಸಮಯದಲ್ಲಿ ಇಂಧನ ಮೂಲಸೌಕರ್ಯ ಅಭಿವೃದ್ಧಿ– ಅದು ಮಾಲಿನ್ಯಕಾರಕ ಇಂಧನ ಮೂಲಸೌಕರ್ಯ ಇರಲಿ ಅಥವಾ ಶುದ್ಧ ಇಂಧನ ವ್ಯವಸ್ಥೆ ಆಗಲಿ– ಜಟಿಲವಾಗಲಿವೆ ಮತ್ತು ದುಬಾರಿಯಾಗಲಿವೆ.

‘ಭಾರತದಂತಹ ದೇಶಗಳು ಕಲ್ಲಿದ್ದಲಿಗಾಗಿ ನಿರ್ಮಿಸಲಾದ ವಿದ್ಯುತ್ ಗ್ರಿಡ್‌ಗಳನ್ನು ಹೆಚ್ಚಿನ ಪ್ರಮಾಣದ ಗಾಳಿ ಮತ್ತು ಸೌರಶಕ್ತಿಗೆ ಹೊಂದಿಕೊಳ್ಳುವಂತೆ ಬದಲಾಯಿಸಬೇಕಾಗುತ್ತದೆ. ಶುದ್ಧ ಇಂಧನ ತಂತ್ರಜ್ಞಾನಕ್ಕೆ ಬೇಡಿಕೆ ಹೆಚ್ಚಾಗುವುದರಿಂದ, ಸೌರ ಫಲಕಗಳು, ಉಷ್ಣ ಪಂಪ್ ಮತ್ತು ಎಲೆಕ್ಟ್ರಿಕ್ ವಾಹನಗಳನ್ನು ದೊಡ್ಡ ಮಟ್ಟದಲ್ಲಿ ಉತ್ಪಾದಿಸಲು ಸರ್ಕಾರವು ತನ್ನ ಕಾರ್ಖಾನೆಗಳಲ್ಲಿ ಎಷ್ಟು ಬಂಡವಾಳ ಹೂಡಬೇಕು ಎನ್ನುವುದನ್ನು ನಿರ್ಧರಿಸಬೇಕಾಗುತ್ತದೆ. ಜತೆಗೆ, ಈ ವಸ್ತುಗಳನ್ನು ಆಮದು ಮಾಡಿಕೊಂಡರೆ, ಅವುಗಳಿಗೆ ಎಷ್ಟು ತೆರಿಗೆ ವಿಧಿಸಬೇಕಾಗುತ್ತದೆ ಎನ್ನುವುದನ್ನೂ ತೀರ್ಮಾನಿಸಬೇಕಾಗುತ್ತದೆ’ ಎನ್ನುತ್ತಾರೆ ಜಾನ್ಸ್ ಹಾಪ್ಕಿನ್ಸ್‌ನ ನೆಟ್ ಜೀರೋ ಇಂಡಸ್ಟ್ರಿಯಲ್ ಪಾಲಿಸಿಯ ಸಹನಿರ್ದೇಶಕ ಟಿಮ್ ಸಹಾಯ್.

ಆದರೆ, ದೇಶಗಳು ಮತ್ತು ಕಂಪನಿಗಳು ಅನಿಲ ದ್ರವೀಕರಣ ಟರ್ಮಿನಲ್‌ಗಳು, ಪೈಪ್‌ಲೈನ್‌ಗಳು ಮತ್ತು ಇಂಧನ ಘಟಕಗಳನ್ನು ನಿರ್ಮಿಸುವುದಕ್ಕಿಂತ ವೇಗವಾಗಿ ನವೀಕರಿಸಬಹುದಾದ ಇಂಧನ ಘಟಕಗಳನ್ನು ನಿರ್ಮಿಸಬಹುದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

11 ಏಪ್ರಿಲ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ನವಮಿ ಗಂ. 24-38 ನಕ್ಷತ್ರ: ಉತ್ತರಾಷಾಢ ಗಂ 13-40 ಯೋಗ: ಸಿದ್ಧ ಗಂ. 18-39 ಕರಣ: ತೈತಿಲ ಗಂ 12-02 ಮೀನ ಮಾಸದ 28 ನೇ ದಿನ. ಮಳೆ ನಕ್ಷತ್ರ : ರೇವತಿ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-24 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 22 ಶವ್ವಾಲ್, ಅದೃಷ್ಟ ಸಂಖ್ಯೆ : 1, 8

ಮೇಷ: ಮನೋಭಿಲಾಷೆಗೆ ಪೆಟ್ಟು ಬೀಳುವ ಕಾರಣದಿಂದ ಪ್ರೀತಿ ಪಾತ್ರರು ದೂರವಾಗುವ ಸಂಭವವಿದೆ. ಡಿಸೈನಿಂಗ್ ಕ್ಷೇತ್ರದವರಿಗೆ ಉತ್ತಮ ಅವಕಾಶಗಳು ಲಭಿಸಲಿವೆ. ಅನಗತ್ಯ ಚಿಂತೆ ಮೈಮೇಲೆ ಎಳೆದುಕೊಳ್ಳಬೇಡಿ.

ವೃಷಭ: ಪ್ರಯತ್ನಪೂರ್ವಕವಾಗಿ ಮಗನಿಗೆ ಹೇಳಿದ ವಿದ್ಯಾಮಾರ್ಗದಿಂದ ಮಗನು ಹಿಂದಿರುಗುವ ಸಾಧ್ಯತೆ ಇದೆ. ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯಬೇಕಾದ ಸಂದರ್ಭ ಎದುರಾಗುವುದು.

ಮಿಥುನ: ಸಹೋದರರಲ್ಲಿನ ಭಿನ್ನಾಭಿಪ್ರಾಯಗಳು ಪ್ರೀತಿಯ ಮಾತುಗಳಿಂದ ದೂರಾಗಲಿವೆ. ದಿಟ್ಟ ನಿಲುವನ್ನು ತೆಗೆದುಕೊಳ್ಳಲು ಈ ದಿನ ಸಮಂಜಸವಲ್ಲ. ವಾಹನದಲ್ಲಿ ಚಲಿಸುವಾಗ ಜಾಗ್ರತೆ ಇರಲಿ.

ಕರ್ಕಾಟಕ: ಹಿರಿಯರ ಮಾರ್ಗದರ್ಶನದಂತೆ ಧಾರ್ಮಿಕ ಕೆಲಸ ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ಸಂಪ್ರದಾಯಬದ್ಧವಾಗಿ ನಡೆಯುವುದು. ಆಸ್ತಿ ಖರೀದಿ ವಿಚಾರದಲ್ಲಿ ಸಮಂಜಸ ನಿರ್ಧಾರ ಕೈಗೊಳ್ಳುವಿರಿ.

ಸಿಂಹ: ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನ ಸಂಪಾದಿಸಿಕೊಳ್ಳುವಂತೆ ನಿಮ್ಮ ವ್ಯಕ್ತಿತ್ವವಿರಲಿ. ಅವಶ್ಯಕತೆಗೆ ಮೀರಿ ಕೆಲಸ ಮಾಡಬೇಕಾದ ಸಮಸ್ಯೆ ನಿಮಗಿಲ್ಲ.

ಕನ್ಯಾ: ವೃತ್ತಿ ನಿಪುಣತೆಯಿಂದ ಹೆಚ್ಚು ವರಮಾನ ಬರುವ ಕೆಲಸಕ್ಕೆ ಪ್ರಯತ್ನಿಸುವ ಸಲಹೆ ಬರುವುದು. ಜವಾಬ್ದಾರಿ ಹೆಚ್ಚಿರುವುದರಿಂದ ಸೃಜನಾತ್ಮಕ ಕಾರ್ಯ ನಿರ್ವಹಣೆ ಅಗತ್ಯವಾಗುವುದು.

ತುಲಾ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ, ಋಣಾತ್ಮಕ ಯೋಚನೆಗಳು ಬರಲಿವೆ. ಸಿಟ್ಟು, ಒರಟುತನ ಏಕಾಂಗಿತನಕ್ಕೆ ಮುಖ್ಯ ಕಾರಣ. ವಾಣಿಜ್ಯೋದ್ಯಮಿಗಳು ಭದ್ರತೆಯ ಬಗ್ಗೆ ಗಮನ ಹರಿಸಿ.

ವೃಶ್ಚಿಕ: ಕೆಲಸ ಕಾರ್ಯಗಳು ವಿಳಂಬ ನೀತಿಯನ್ನು ತೊರೆದು ಸರಾಗವಾಗಿ ನಡೆದು ಆರ್ಥಿಕವಾಗಿ ಮುನ್ನಡೆಯಲಿವೆ. ಸಣ್ಣ-ಪುಟ್ಟ ವಿಷಯಗಳಿಗೂ ಮಹತ್ವ ಕೊಡಬೇಕಾಗುವುದು. ನಿರಂತರ ಕೆಲಸಗಳಿಂದಾಗಿ ವಿಶ್ರಾಂತಿ ಬೇಕೆನಿಸಲಿದೆ.

ಧನು: ಕಾರ್ಯರಂಗದಲ್ಲಿ ಧೈರ್ಯ, ಪ್ರಯತ್ನಬಲ, ಆತ್ಮವಿಶ್ವಾಸದ ಪ್ರವೃತ್ತಿಯಿಂದ ಅಭಿವೃದ್ಧಿ ಹೊಂದಿದರೂ ಜನರ ಕೆಟ್ಟ ದೃಷ್ಟಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಗೆಳೆಯರ ಸೂಕ್ತ ಪ್ರತಿಕ್ರಿಯೆ ದೊರೆಯಲಿದೆ.

ಮಕರ: ಧಾರ್ಮಿಕ ಕ್ಷೇತ್ರದ ಆಡಳಿತ ವ್ಯಕ್ತಿಗೆ ಅಥವಾ ವ್ಯವಸ್ಥಾಪಕರಿಗೆ ನಿಂದನೆಯ ಭೀತಿ, ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶ ಎದುರಾಗಬಹುದು. ಕಟ್ಟಡಗಳನ್ನು ಬಾಡಿಗೆಗೆ ಕೊಡುವುದರಿಂದ ಆರ್ಥಿಕ ಅಭಿವೃದ್ಧಿ ಕಂಡುಬರುವುದು.

ಕುಂಭ: ಹೊಸ ವ್ಯಾಪಾರವನ್ನು ಅಥವಾ ಏಜೆನ್ಸಿಯೊಂದನ್ನು ಪ್ರಾರಂಭಿಸುವ ಯೋಚನೆ ಇರುವವರಿಗೆ ಪೂರ್ವ ತಯಾರಿ ನಡೆಸಲು ಸೂಕ್ತ ವ್ಯಕ್ತಿಗಳ ಮಾರ್ಗದರ್ಶನ ಸಿಗಲಿದೆ. ಸೌಹಾರ್ದದಿಂದ ವರ್ತಿಸಿ.

ಮೀನ: ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ವಿಭಿನ್ನ ಪ್ರಯೋಗಗಳಲ್ಲಿ ಆಸಕ್ತಿಯನ್ನು ಹೊಂದುವಿರಿ. ಆಹಾರದಲ್ಲಿನ ಬದಲಾವಣೆಯಿಂದಾಗಿ ದೇಹದಲ್ಲಿನ ಉಷ್ಣವ್ಯಾಧಿ ನಿವಾರಣೆಯಾಗುವುದು.

ಪದಬಂಧ 6370

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬರ ಕೊನೆಗಿದ್ದಾಗ ತೋರಿದ ಮಾತಿನ ಅಟ್ಟಹಾಸ (5)
3.ವಿಧಿಯನ್ನು ಬರೆಯುವವನು (3)
5.ಶತೃತ್ವ ಉಲ್ಟಾ ಕಾಣುತ್ತಿದೆ (2)
7. ಉತ್ತಮ ಜಾತಿಯ ಜೇನುತುಪ್ಪ (3)
8.ಪರಸ್ಥಳದಲ್ಲಿರುವ ಜಾಗ (2)
9.ವ್ಯಾಕರಣದಲ್ಲಿ ಒಂದಕ್ಕಿಂತ ಹೆಚ್ಚು ಸಂಖ್ಯೆಯನ್ನು ಸೂಚಿಸುವ ಪದ (5)
11.ಅಧಮನ ಹತ್ತಿರವಿರುವ ಹಣ (2)
13.ಚಿಗುರು ಇಲ್ಲಿ ಕಾಣುತ್ತಿದೆ (3)
14.ವನದ ಹತ್ತಿರ ತಿರುಗಿದಾಗ ಹೊಸತು ಕಾಣುತ್ತಿದೆ (2)
16.ಸ್ವಚ್ಛಂದತೆಯನ್ನು ಹೀಗೆನ್ನಿ (3)
17.ತುಂಬಾ ಆಸೆ ಪಡುವವನು (5)

ಮೇಲಿಂದ ಕೆಳಕ್ಕೆ

1.ನಾಲ್ಕು ಆಶ್ರಮದಲ್ಲಿ ಮೂರನೆಯದು (4)
2.ಬಡಿಯಲು ಕೈಗೆತ್ತಿಕೊಂಡಿರುವ ದೊಣ್ಣೆ (3)
4.ನಿಷ್ಣಾತನಿಲ್ಲಿ ತಿರುಗಿದ್ದಾನಲ್ಲಾ? (4)
6.ಅಶ್ವದ ಮೊಗವಿದು (5)
7.ನಯವಾಗಿ ಹೊಳೆಯುತ್ತಿರುವ ಕಣ್ಣು (3)
9.ಈತ ದುಡ್ಡಿಲ್ಲದವನು (3)
10.ನಡುವೆ ಪತ್ರವಿರುವುದಕ್ಕೇ ಈ ತೊಂದರೆ! (4)
12.ದಮಯಂತಿಯ ಪತಿ ಮಾಡಿರುವ ರುಚಿಕಟ್ಟಾದ ಅಡುಗೆ (4)
15.ವರನು ತೋರಿಸಿದ ವ್ಯಾಯಾಮದ ಪಟ್ಟು (3)



6369ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ವ್ಯವಸಾಯ 3.ಹರಿವಾಣ
5.ಮಲ್ಲಿಗೆ 6.ನಗದು
8.ಗುಲಾಮ 9.ನಾಭಿ
10.ಕರು 11.ಸನ್ಮಾನ
12.ನಮೂನೆ 14.ಕನಸು
16.ಕರೆಯೋಲೆ 17.ತಹಿರೋಪು

ಮೇಲಿಂದ ಕೆಳಕ್ಕೆ:

1.ವ್ಯಸನ 2.ಯಮ 3.ಹಗೆ
4.ಣರಮ 7.ದುರಭಿಮಾನ
8.ಗುಣಕಥನ 11.ಸಭಿಕ
13.ನೆನಪು 14.ಕಲೆ
15.ಸುತ

ಸುಡೊಕು 6753

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		8	3		7	5
	8		2		7		1	
7		3		9		8		2
	5				1			
6		7		5		2		8
	3		9					1
	2				8		6	
				3			8	
1		8	5			3		4

6752 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

1ನೇ ತರಗತಿಗೆ ಪ್ರವೇಶ: ನಿಯಮ ಸಡಿಲ

ಬೆಂಗಳೂರು: ಒಂದನೇ ತರಗತಿಗೆ 2026–27ನೇ ಸಾಲಿನಲ್ಲಿ ಪ್ರವೇಶ ಪಡೆಯುವ ಮಕ್ಕಳ ವಯೋಮಿತಿಯನ್ನು 5 ವರ್ಷ 10 ತಿಂಗಳಿಗೆ ನಿಗದಿ ಮಾಡಿ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಗುವಿಗೆ ಕಡ್ಡಾಯವಾಗಿ 6 ವರ್ಷ ತುಂಬಿರಬೇಕು ಎಂಬ ನಿಯಮ ರೂಪಿಸಲಾಗಿದೆ. ಆದರೆ, ಪೋಷಕರ ನಿರಂತರ ಮನವಿ ಹಾಗೂ ಮಕ್ಕಳ ಶೈಕ್ಷಣಿಕ ಹಿತಾಸಕ್ತಿ ಪರಿಗಣಿಸಿ, ವಿನಾಯಿತಿ ನೀಡಲಾಗಿದೆ. ಈ ಸಡಿಲಿಕೆ 2026-27ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತ ಎಂದು ಸ್ಪಷ್ಟಪಡಿಸಿದೆ. ಬದಲಾವಣೆಗೆ ಪೂರಕವಾಗಿ ಎಸ್‌ಎಟಿಎಸ್ ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಿಕೊಳ್ಳುವಂತೆ ಇಲಾಖೆಯ ಆಯುಕ್ತರಿಗೆ ನಿರ್ದೇಶನ ನೀಡಿದೆ.

ಈ ಕುರಿತು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ಈ ವರ್ಷ ಒಂದನೇ ತರಗತಿ ಪ್ರವೇಶ ಪಡೆಯುವ 60 ದಿನಗಳ ವಯೋಮಿತಿ ಸಡಿಲಿಕೆ ಮಾಡುವುದಾಗಿ ಬಜೆಟ್ ಅಧಿವೇಶನದಲ್ಲೇ ಭರವಸೆ ನೀಡಿದ್ದರು.

60.23 ಎಕರೆ ಒತ್ತುವರಿ ತೆರವಿಗೆ ಆದೇಶ

ರಮೇಶ್ ಕುಮಾರ್ ಮೇಲ್ಮನವಿ ತಿರಸ್ಕರಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಪ್ರಜಾವಾಣಿ ವಾರ್ತೆ

ಕೋಲಾರ: 'ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಜಿನಗಲಕುಂಟೆ ಅರಣ್ಯ ವಲಯದ ಹೊಸಹುಡ್ಯ ಗ್ರಾಮದಲ್ಲಿ ಒತ್ತುವರಿ ಆಗಿರುವ 60 ಎಕರೆ 23 ಗುಂಟೆ ಜಮೀನನ್ನು ಮೇಲ್ಮನವಿದಾರ ಕೆ.ಆರ್. ರಮೇಶ್ ಕುಮಾರ್ 30 ದಿನಗಳಲ್ಲಿ ತೆರವುಗೊಳಿಸಿ ಶಾಂತಿಯುತವಾಗಿ ಹಸ್ತಾಂತರಿಸಬೇಕು' ಎಂದು ಮೇಲ್ಮನವಿ ಪ್ರಾಧಿಕಾರಿ ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ–ಬೆಂಗಳೂರು) ಶಿವಶಂಕರ್ ಎಸ್. ಆದೇಶಿಸಿದ್ದಾರೆ.

ವಿಚಾರಣೆ ಬಳಿಕ ಶುಕ್ರವಾರ ಈ ಆದೇಶ ಹೊರಡಿಸಿದ್ದಾರೆ. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64ಎ (3) ಅಡಿಯಲ್ಲಿ ತಮಗೆ ನೀಡಿರುವ ಅಪೀಲು ಅಧಿಕಾರ ವ್ಯಾಪ್ತಿ ಬಳಸಿಕೊಂಡು ಹಾಗೂ ಕರ್ನಾಟಕ ಹೈಕೋರ್ಟ್‌ನ (ರಿಟ್ ಅರ್ಜಿ ಸಂಖ್ಯೆ 6613/2025, ದಿನಾಂಕ 15-09-2025) ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಈ ಆದೇಶ ನೀಡಿರುವುದಾಗಿ ತಿಳಿಸಿದ್ದಾರೆ.

ರಮೇಶ್ ಕುಮಾರ್ ಅವರ ಮೇಲ್ಮನವಿಯನ್ನು (ಸಂಖ್ಯೆ 168/2011) ಅವರು ತಿರಸ್ಕರಿಸಿದ್ದಾರೆ.

2011ರ ಜೂನ್ 24ರಂದು ಕೋಲಾರ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿಯು ಒತ್ತುವರಿ ತೆರವಿಗೆ ಆದೇಶಿಸಿದ ಕ್ರಮವನ್ನು ಎತ್ತಿಹಿಡಿದು, ದೃಢಪಡಿಸಿದ್ದಾರೆ. 2025ರ ಜನವರಿ 15 ಹಾಗೂ 16ರಂದು ನಡೆಸಿದ ಜಂಟಿ ಸಮೀಕ್ಷೆಯಲ್ಲಿ ಒತ್ತುವರಿ ದೃಢಪಟ್ಟಿದೆ. ಹೊಸಹುಡ್ಯ ಗ್ರಾಮದ ಸರ್ವೆ ಸಂಖ್ಯೆ 1ರಲ್ಲಿ 6 ಎಕರೆ ಮತ್ತು ಸರ್ವೆ ಸಂಖ್ಯೆ 2ರಲ್ಲಿನ 54 ಎಕರೆ 23 ಗುಂಟೆ ಸೇರಿ ಒಟ್ಟು 60 ಎಕರೆ 23 ಗುಂಟೆ ಜಮೀನನ್ನು ತೆರವುಗೊಳಿಸಬೇಕು ಎಂದು ಆದೇಶಿಸಿದ್ದಾರೆ.

ಮುಖ್ಯಾಂಶಗಳು

- ಹೊಸಹುಡ್ಯ ಗ್ರಾಮದ ಸರ್ವೆ ಸಂಖ್ಯೆ 1 ಹಾಗೂ 2ರಲ್ಲಿನ ಅರಣ್ಯ ಜಮೀನು
- ತೆರವುಗೊಳಿಸದಿದ್ದರೆ ಮುಂದಿನ ಕ್ರಮಕ್ಕೆ ಡಿಸಿಎಫ್‌ಗೆ ಸೂಚನೆ
- ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ಆದೇಶ

ಮೇಲ್ಮನವಿದಾರರು ನಿಗದಿತ ಅವಧಿಲ್ಲಿ ತೆರವುಗೊಳಿಸದಿದ್ದಲ್ಲಿ ಕೋಲಾರ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ತೆರವಿಗೆ ತಕ್ಷಣ ಕ್ರಮವಹಿಸಬೇಕು. ಅರಣ್ಯ ಭೂಮಿಯನ್ನು ಇಲಾಖೆ ವಶಕ್ಕೆ ಪಡೆಯಬೇಕು ಹಾಗೂ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64ಎ (2) ಪ್ರಕಾರ ವೆಚ್ಚ ವಸೂಲಿ ಮಾಡಬೇಕು ಎಂದೂ ಸೂಚನೆ ನೀಡಿದ್ದಾರೆ.

ಶ್ರೀನಿವಾಸಪುರ ತಾಲ್ಲೂಕಿನ ಜಿಗಲಕುಂಟೆ ಅರಣ್ಯ ಪ್ರದೇಶದ ಹೊಸಹುಡ್ಯ ಗ್ರಾಮದ ಸರ್ವೆ ನಂಬರ್ 1 ಮತ್ತು 2ರ ಜಮೀನಿನ ಜಂಟಿ ಸಮೀಕ್ಷೆ ವೇಳೆ ಅಧಿಕಾರಿಗಳು ಡ್ರೋನ್ ಬಳಸಿ ತೆಗೆದಿದ್ದ ಚಿತ್ರ

ಎರಡು ದಿನ ನಡೆದಿದ್ದ ಜಂಟಿ ಸರ್ವೆ

ಹೈಕೋರ್ಟ್ ಸೂಚನೆ ಮೇರೆಗೆ ಕೆ.ಆರ್.ರಮೇಶ್ ಕುಮಾರ್ ಉಪಸ್ಥಿತಿಯಲ್ಲೇ 2025ರ ಜ.15 ಹಾಗೂ 16ರಂದು ಶ್ರೀನಿವಾಸಪುರ ತಾಲ್ಲೂಕಿನ ಜಿನಗಲಕುಂಟೆ ಅರಣ್ಯ ವಲಯದ ಹೊಸಹುಡ್ಯ ಗ್ರಾಮದ ಸರ್ವೆ ನಂಬರ್ 1 ಮತ್ತು 2ರ ಅರಣ್ಯ ಜಮೀನಿನ ಜಂಟಿ ಸಮೀಕ್ಷೆ ನಡೆದಿತ್ತು.

ಸರ್ವೆಗೆ ಪ್ರತಿವಾದಿಯಾಗಿದ್ದ ಅವರೂ ಸಹಕರಿಸಿದ್ದರು. ಒಟ್ಟು 60 ಎಕರೆ 23 ಗುಂಟೆ ಅರಣ್ಯ ಭೂಮಿ ಒತ್ತುವರಿ ಆಗಿ, ಸ್ವಾಧೀನದಲ್ಲಿರುವುದನ್ನು ಜಂಟಿ ಸರ್ವೆ ನಡೆಸಿದ ತಂಡವು ತನ್ನ ವರದಿಯಲ್ಲಿ ನಮೂದಿಸಿತ್ತು.

ಅರಣ್ಯ ಇಲಾಖೆ ಜಂಟಿ ಸರ್ವೆ ಕಾರ್ಯದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಇದನ್ನು ದಾಖಲಿಸಿಕೊಂಡ ನ್ಯಾಯಾಲಯ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತ್ತು. ಬಳಿಕ ಅರಣ್ಯ ಇಲಾಖೆ ಮೇಲ್ಮನವಿ ಪ್ರಾಧಿಕಾರದಲ್ಲಿ 64ಎ ಪ್ರೊಸೀಡಿಂಗ್ಸ್ ಅಡಿಯಲ್ಲಿ ವಿಚಾರಣೆ ನಡೆದಿತ್ತು. ವಿಚಾರಣೆಗೆ ಹಾಜರಾಗಲು ರಮೇಶ್ ಕುಮಾರ್ ಅವರಿಗೆ ನೋಟಿಸ್ ಕೂಡ ನೀಡಲಾಗಿತ್ತು.

ಆದೇಶದ ಪ್ರತಿಯನ್ನು ಕೆ.ಆರ್. ರಮೇಶ್ ಕುಮಾರ್, ಕೋಲಾರ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ಉಪವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಶ್ರೀನಿವಾಸಪುರ ವಲಯದ ವಲಯ ಅರಣ್ಯಾಧಿಕಾರಿ ಅವರಿಗೂ ಕಳುಹಿಸಲಾಗಿದೆ.

ಈ ವಿಚಾರವನ್ನು 'ಪ್ರಜಾವಾಣಿ'ಗೆ ಕೋಲಾರ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಿಗಾರ್ ಕೂಡ ದೃಢಪಡಿಸಿದ್ದಾರೆ.

> ಕೆ.ಆರ್.ರಮೇಶ್ ಕುಮಾರ್ ಈ ಆದೇಶ ಸ್ವೀಕರಿಸಿದ 30 ದಿನಗಳಲ್ಲಿ ಒತ್ತುವರಿ ಮಾಡಿರುವ ಭೂಮಿಯನ್ನು ಖಾಲಿ ಮಾಡಿ, ಶಾಂತಿಯುತವಾಗಿ ಹಸ್ತಾಂತರಿಸಬೇಕು
>
> **ಶಿವಶಂಕರ್ ಎಸ್.**
> ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ–ಬೆಂಗಳೂರು)

ರಮೇಶ್ ಕುಮಾರ್ ಮುಂದಿನ ನಡೆ ಏನು?

ಒತ್ತುವರಿ ತೆರವಿಗೆ ಆದೇಶದ ಬೆನ್ನಲೇ ಕೆ.ಆರ್. ರಮೇಶ್ ಕುಮಾರ್ ಇಡಲಿರುವ ಮುಂದಿನ ಹೆಜ್ಜೆಯತ್ತ ಜನರ ಚಿತ್ತ ನೆಟ್ಟಿದೆ. ಮತ್ತೆ ಹೈಕೋರ್ಟ್ ಮೊರೆ ಹೋಗುವ ಸಾಧ್ಯತೆ ಎಂದು ಅವರ ಆಪ್ತ ವಲಯದ ಮೂಲಗಳು ತಿಳಿಸಿವೆ.

'ನಾನು ಈ ಜಮೀನು ಖರೀದಿಸಿದ್ದೇನೆಯೇ ಹೊರತು ಒತ್ತುವರಿದಾರ ಅಲ್ಲ' ಎಂದು ರಮೇಶ್ ಕುಮಾರ್ ಹಲವು ವೇದಿಕೆಗಳಲ್ಲಿ ಹೇಳುತ್ತಾ ಬಂದಿದ್ದಾರೆ.

ಸುದ್ದಿ 2 ನಿಮಿಷ

'ಸಂಪುಟ ಪುನರ್ ರಚನೆಯಾಗಲಿ'

ಬೆಳಗಾವಿ: 'ಸದ್ಯ ಕಾಂಗ್ರೆಸ್ ಪಕ್ಷದಲ್ಲಿ ಇರುವ ಗೊಂದಲವನ್ನು ಇತ್ಯರ್ಥ ಪಡಿಸಬೇಕು. ಸಚಿವ ಸಂಪುಟ ಪುನರ್ ರಚಿಸಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಪಕ್ಷ ಅಧಿಕಾರಕ್ಕೆ ಬಂದು 30 ತಿಂಗಳು ಕಳೆದಿದೆ. ಸಮಯ ದಾಟಿದೆ. ಈ ಬಗ್ಗೆ ಗಮನ ಹರಿಸಬೇಕಿದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ನಿಮಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಿಗಲಿದೆಯೇ' ಎಂಬ ಪ್ರಶ್ನೆಗೆ, 'ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾಗಬೇಕಿದೆ. ಅದು ಅನಿವಾರ್ಯ. ಆದರೆ, ಪಕ್ಷದ ಹೈಕಮಾಂಡ್ ಈ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಲಿದೆ' ಎಂದರು.

'ಒಳ ಮೀಸಲಾತಿ ಜಾರಿ ವಿಷಯದಲ್ಲಿ ನಮಗೆ ಬದ್ಧತೆ ಇದೆ. ಆದರೆ, ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ ರಾಜ್ಯ ಸರ್ಕಾರವು ದತ್ತಾಂಶವನ್ನು ಸಂಗ್ರಹಿಸಿ ಜಾರಿ ಮಾಡಬೇಕಿದೆ. ನಾವು ಯಾವ ಸಮುದಾಯದ ವಿರುದ್ಧವೂ ಇಲ್ಲ' ಎಂದರು.

'ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನವರು ಹಣದ ಹೊಳೆ ಹರಿಸಿದ್ದಾರೆ' ಎಂದು ಬಿಜೆಪಿಯವರ ಆರೋಪಕ್ಕೆ, 'ಎಲ್ಲ ಪಕ್ಷದವರೂ ಹಣ ಹಂಚಿದ್ದಾರೆ. ₹10 ಕೊಟ್ಟರೂ ತಪ್ಪು. ₹1 ಸಾವಿರ ಕೊಟ್ಟರೂ ತಪ್ಪೇ' ಎಂದು ಪ್ರತಿಪಾದಿಸಿದರು.



'ಉಪಚುನಾವಣೆ ನಡೆಸಲು ಸರ್ಕಾರದಿಂದ ಹೆಚ್ಚಿನ ವ್ಯಯ ಆಗುತ್ತಿರುವುದನ್ನು ತಪ್ಪಿಸಲು ಕಾಯ್ದೆ ತಂದರೆ ಒಳ್ಳೆಯದು. ಶಾಸಕ ಮೃತಪಟ್ಟಲ್ಲಿ ಆಯಾ ಕ್ಷೇತ್ರದಲ್ಲಿ, ಅದೇ ಪಕ್ಷದ ಒಬ್ಬರನ್ನು ನಾಮನಿರ್ದೇಶನ ಮಾಡುವ ಕಾನೂನು ಮಾಡಬೇಕು' ಎಂದು ಹೇಳಿದರು.

'ಫಿಸಿಯೊಥೆರಪಿ: ಪಠ್ಯಕ್ರಮ ಅನುಷ್ಠಾನ ಕಡ್ಡಾಯ'

ಮಂಗಳೂರು: 'ರಾಷ್ಟ್ರೀಯ ಅಲೈಡ್ ಆ್ಯಂಡ್ ಹೆಲ್ತ್ ಕೇರ್ ಪ್ರೊಫೆಷನ್ಸ್ ಆಯೋಗ (ಎನ್‌ಸಿಎಎಚ್‌ಪಿ) ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿ ಫಿಸಿಯೊಥೆರಪಿ ಸೇರಿದಂತೆ 17 ವಿಭಾಗಗಳಿಗೆ ಪಠ್ಯಕ್ರಮ ರೂಪಿಸಿದ್ದು, ಸದ್ಯದಲ್ಲೇ ಇದನ್ನು ಜಾರಿಗೆ ತರಲಾಗುವುದು' ಎಂದು ಆಯೋಗದ ಅಧ್ಯಕ್ಷೆ ಡಾ.ಯಜ್ಞಾ ಉನ್ಮೇಶ್ ಶುಕ್ಲಾ ಹೇಳಿದರು.

ಸೌತ್ ಕೆನರಾ ಫಿಸಿಯೊಥೆರಪಿ ಟೀಚರ್ಸ್ ಅಸೋಸಿಯೇಷನ್ ನೇತೃತ್ವದಲ್ಲಿ ನಗರದ ಟಿಎಂಎ ಪೈ ಸಭಾಭವನದಲ್ಲಿ ಆಯೋಜಿಸಿರುವ ಎರಡು ದಿನಗಳ ಅಂತರರಾಷ್ಟ್ರೀಯ ಫಿಸಿಯೊಥೆರಪಿ ಸಮ್ಮೇಳನ 'ಮಂಗಳೂರು ಫಿಸಿಯೊಕಾನ್' ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

'ಪಠ್ಯಕ್ರಮ, ನಿಯಮಾವಳಿಗಳ ಅನುಷ್ಠಾನ ಶಿಕ್ಷಣ ಸಂಸ್ಥೆಗಳಿಗೆ ಕಡ್ಡಾಯವಾಗಿದ್ದು, ಈ ಸಂಬಂಧ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದೆ. ಅನುಷ್ಠಾನದ ಪರಿಶೀಲನೆಯ ಹೊಣೆ ರಾಜ್ಯದ ಅಲೈಡ್ ಆ್ಯಂಡ್ ಹೆಲ್ತ್ ಕೇರ್ ಕೌನ್ಸಿಲ್‌ಗಳದ್ದಾಗಿದೆ' ಎಂದು ಹೇಳಿದರು.

ಪ್ರಶ್ನಿಸಿದ್ದ ಅರ್ಜಿದಾರರಿಗೆ ₹1 ಲಕ್ಷ ದಂಡ

ಒಂದನೇ ಪುಟದಿಂದ...

ಇದಕ್ಕೆ ಅರ್ಜಿದಾರರ ಪರ ವಕೀಲರು, 'ಹಿಂದಿಯನ್ನು ಸಂಪೂರ್ಣವಾಗಿ ಕೈಬಿಡಲಾಗುತ್ತದೆ ಎಂಬ ಸಚಿವರ ಹೇಳಿಕೆ ಸರಿಯಾದ ದೃಷ್ಟಿಕೋನವಲ್ಲ' ಎಂದು ಆಕ್ಷೇಪಿಸಿ ಅರ್ಜಿಯ ಜೊತೆಗಿನ ಪತ್ರಿಕಾ ವರದಿಗಳ ಅಡಕವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಅಡಕಗಳನ್ನು ಪರಿಶೀಲಿಸಿದ ನ್ಯಾಯಪೀಠ, 'ಪತ್ರಿಕಾ ವರದಿಯಲ್ಲಿ ಹಿಂದಿಯನ್ನು ಕೈಬಿಡುವ ಹೇಳಿಕೆಯೇ ಇಲ್ಲ. ಹಾಗಾಗಿ, ದಂಡದ ಮೊತ್ತವನ್ನು ₹1 ಲಕ್ಷಕ್ಕೆ ಏರಿಕೆ ಮಾಡಲಾಗುತ್ತಿದೆ' ಎಂದು ಹೇಳಿತು. ಅಂತೆಯೇ, ಆದೇಶದಲ್ಲಿ ಮಾರ್ಪಾಡು ಮಾಡಿ ದಂಡದ ಮೊತ್ತವನ್ನು ₹1 ಲಕ್ಷಕ್ಕೆ ಏರಿಕೆ ಮಾಡಿತು.

ಇದೇ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ದಂಡದ ಮೊತ್ತವನ್ನು ವಕೀಲರ ಗುಮಾಸ್ತರ ನಿಧಿಗೆ ನೀಡಲು ಪರಿಗಣಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಕೋರಿಕೆ ಏನಿತ್ತು?: 'ಭಾಷಾ ನೀತಿಯನ್ನು ಬದಲಾವಣೆ ಮಾಡಬಾರದು ಮತ್ತು ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿಯನ್ನು ಕೈಬಿಡುವ ಶಾಲಾ ಶಿಕ್ಷಣ ಇಲಾಖೆಯ ಉದ್ದೇಶಿತ ಬದಲಾವಣೆಯ ನಿರ್ಧಾರ ಅನುಷ್ಠಾನಗೊಳಿಸದಂತೆ ಆದೇಶಿಸ ಬೇಕು' ಎಂದು ಅರ್ಜಿದಾರರು ಕೋರಿದ್ದರು. 'ಮೂರನೇ ಭಾಷೆಗೆ ಗ್ರೇಡ್ ನೀಡುವ ಹೊಸ ಪದ್ಧತಿಯನ್ನು 2026ರ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲಾಗುವುದು ಎಂಬ ಶಾಲಾ ಶಿಕ್ಷಣ ಸಚಿವರ ಹೇಳಿಕೆ ಏಕಪಕ್ಷೀಯವಾಗಿದೆ' ಎಂದು ಆಕ್ಷೇಪಿಸಿದ್ದರು.

'ಸಚಿವರು ಈ ನಿರ್ಧಾರ ಪ್ರಕಟಿಸುವ ಮುನ್ನ ಸಾರ್ವಜನಿಕವಾಗಿ ಚರ್ಚೆ ನಡೆಸಿಲ್ಲ. ಸಂಪುಟದ ಅನುಮೋದನೆ ಪಡೆದಿಲ್ಲ, ಭಾಷಾ ತಜ್ಞರ ಸಲಹೆ ಪಡೆದಿಲ್ಲ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಅಂದರೆ, ಮಾರ್ಚ್ 31ರಂದು ಈ ರೀತಿಯ ಹೇಳಿಕೆ ಹೊರಬಿದ್ದಿರುವುದರಿಂದ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿದ್ದಾರೆ' ಎಂದು ವಿವರಿಸಿದರು.

ಅಧಿಸೂಚನೆ ಕರಡು ಪ್ರಕಟ

ಒಂದನೇ ಪುಟದಿಂದ...

'ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಯ ಅಂಕಗಳನ್ನು ಒಟ್ಟು ಫಲಿತಾಂಶಕ್ಕೆ ಪರಿಗಣಿಸುವುದಿಲ್ಲ. ಗರಿಷ್ಠ ಅಂಕಗಳನ್ನು 625ರ ಬದಲು 525 ಎಂದು ಪರಿಗಣಿಸಲಾಗುವುದು. ತೃತೀಯ ಭಾಷೆಗೆ ಅಂಕಗಳ ಬದಲು ನಾಲ್ಕು ಶ್ರೇಣಿಗಳನ್ನು ನೀಡಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಕಟಿಸಿದ್ದರು.

'ತೃತೀಯ ಭಾಷೆ, ಎನ್‌ಎಸ್‌ಕ್ಯೂಎಫ್ ವಿದ್ಯಾರ್ಥಿಗಳು ಗಳಿಸುವ ಅಂಕಗಳ ಆಧಾರದ ಮೇಲೆ ಎ,ಬಿ,ಸಿ ಎಂಬ ಮೂರು ಶ್ರೇಣಿಗಳನ್ನು ನೀಡಲಾಗುತ್ತದೆ. ಈ ವಿಷಯದಲ್ಲಿ ಶೇ 80ರಿಂದ 100 ಅಂಕ ಪಡೆದರೆ 'ಎ' ಶ್ರೇಣಿ, ಶೇ 50 ರಿಂದ 79ರವರೆಗೆ 'ಬಿ' ಮತ್ತು ಶೇ 49ರವರೆಗೆ 'ಸಿ' ಶ್ರೇಣಿ ನೀಡಲಾಗುವುದು. ಈ ನಿಯಮವನ್ನು 2025–26ನೇ ಸಾಲಿನ ಪರೀಕ್ಷೆಯಿಂದಲೇ ಅನ್ವಯಿಸಲಾಗುತ್ತದೆ' ಎಂದು ಕರಡು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆಯಲ್ಲಿ ಶೇ 33 ಅಂಕಗಳನ್ನು ಪಡೆಯಬೇಕು. ಒಟ್ಟು 525 ಅಂಕಗಳಲ್ಲಿ ಕನಿಷ್ಠ 173 ಅಂಕಗಳನ್ನು ಗಳಿಸುವುದರೊಂದಿಗೆ ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 30 ಅಂಕಗಳನ್ನು ಗಳಿಸಿದರೆ ಅಂತಹ ಅಭ್ಯರ್ಥಿಗಳನ್ನು ಉತ್ತೀರ್ಣ ಎಂದು ಘೋಷಿಸಲಾಗುವುದು ಎಂದು ವಿವರಿಸಲಾಗಿದೆ.

ಲಂಚ: ಪಿಡಿಒಗೆ 4 ವರ್ಷ ಜೈಲು ಶಿಕ್ಷೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ದನದ ಕೊಟ್ಟಿಗೆ ನಿರ್ಮಾಣಕ್ಕೆ ಸಹಾಯಧನ ಬಿಡುಗಡೆಗೆ ₹15 ಸಾವಿರ ಲಂಚ ಪಡೆದಿದ್ದ ಗೊರೆಬಾಳ ಗ್ರಾಮ ಪಂಚಾಯಿತಿ ಪಿಡಿಒ ಮಹಮ್ಮದ್ ಖಾಜಾಗೆ ಲಿಂಗಸುಗೂರಿನ 3ನೇ ಹೆಚ್ಚುವರಿ ಮತ್ತು ಜಿಲ್ಲಾ ಸೆಷನ್ಸ್ ಕೋರ್ಟ್ ಶುಕ್ರವಾರ ನಾಲ್ಕು ವರ್ಷ ಜೈಲುಶಿಕ್ಷೆ ಹಾಗೂ ₹75 ಸಾವಿರ ದಂಡ ವಿಧಿಸಿದೆ.

ಗೊರೆಬಾಳ ತಾಂಡಾದ ಚೇತನ್ ಲೋಕಪ್ಪ ಸಹಾಯಧನ ಬಿಡುಗಡೆಗೆ ಮನವಿ ಮಾಡಿದ್ದರು. ಆದರೆ, ಪಿಡಿಒ ₹15 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. 2017ರ ನ. 22ರಂದು ಈ ಬಗ್ಗೆ ದೂರು ದಾಖಲಾಗಿತ್ತು.

ಇನ್‌ಸ್ಪೆಕ್ಟರ್ ಶ್ರೀಧರ ದೊಡ್ಡಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ.ಬಿ.ಜಕಾತಿ ಅವರು ಶಿಕ್ಷೆ ವಿಧಿಸಿದ್ದು, ಪ್ರತಿಕೂಲ ಸಾಕ್ಷಿ ನೀಡಿದ್ದಕ್ಕೆ ಪಿರ್ಯಾದಿ ಚೇತನ್ ಲೋಕಪ್ಪ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಆದೇಶಿಸಿದ್ದಾರೆ.

ಮತಪತ್ರ ಬಳಕೆ: ಮಸೂದೆಗೆ ತಡೆ

ಒಂದನೇ ಪುಟದಿಂದ...

ಒಪ್ಪಿಗೆ ಪಡೆದ ಮಸೂದೆಗಳು: ಕರ್ನಾಟಕ ಪೊಲೀಸ್ ಮಸೂದೆ, ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ, ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ.

ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಮಸೂದೆ, ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿ (ರಕ್ಷಣೆ ಮತ್ತು ಸಕ್ರಮಾತಿ) ಮಸೂದೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆ, ಕರ್ನಾಟಕ ಧನ ವಿನಿಯೋಗ ಮಸೂದೆ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ತಿದ್ದುಪಡಿ ಮಸೂದೆ.

'ದುಬಾರಿಗೆ ಮಾರಿದರೆ 'ಬೀಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್‌ಪಿಜಿ ಸಿಲಿಂಡರ್‌ಗಳನ್ನು ಸರ್ಕಾರ ನಿಗದಿ ಮಾಡಿರುವ ದರದಲ್ಲೇ ವಿತರಿಸಬೇಕು. ಹೆಚ್ಚಿನ ದರದಲ್ಲಿ ಗ್ರಾಹಕರಿಗೆ ಮಾರಿದರೆ, ಅಂತಹ ಕಂಪನಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಎಚ್ಚರಿಕೆ ನೀಡಿದ್ದಾರೆ.

ಮುನಿಯಪ್ಪ

ಸರ್ಕಾರಿ ಸ್ವಾಮ್ಯವೂ ಸೇರಿ ವಿವಿಧ ತೈಲ ಕಂಪನಿಗಳ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಅವರು, ಎಲ್‌ಪಿಜಿ ಸಿಲಿಂಡರ್ ವಿತರಣೆಯ ಪರಿಸ್ಥಿತಿಯ ಕುರಿತು ಮಾಹಿತಿ ಪಡೆದರು.

'ಹೆಚ್ಚಿನ ದರದಲ್ಲಿ ಎಲ್‌ಪಿಜಿ ಮಾರಾಟ ಮಾಡುವ ಕಂಪನಿಗಳಿಗೆ ಬೀಗ ಹಾಕಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದ ಅವರು, 'ಕಾಳಸಂತೆಯಲ್ಲಿ ಮಾರುತ್ತಿರುವ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ' ಎಂದೂ ಹೇಳಿದರು.

'ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಿರುವಷ್ಟು ಎಲ್‌ಪಿಜಿ ಸಿಲಿಂಡರ್‌ಗಳನ್ನು ಸರಬರಾಜು ಮಾಡುವಲ್ಲಿ ವಿಫಲವಾಗಿದೆ. ಕೇಂದ್ರ ಎಷ್ಟು ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಕೆ ಮಾಡುತ್ತಿದೆಯೋ ಅಷ್ಟು ಸಿಲಿಂಡರ್‌ಗಳನ್ನು ನಾವು ವಿತರಣೆ ಮಾಡುತ್ತಿದ್ದೇವೆ. ಕಡಿಮೆ ಪೂರೈಕೆ ಆಗುತ್ತಿದ್ದರೆ, ಅದಕ್ಕೆ ಕೇಂದ್ರ ಸರ್ಕಾರವೇ ಹೊಣೆ, ಇದರಲ್ಲಿ ನಮ್ಮ ಪಾತ್ರವಿಲ್ಲ. ಹೆಚ್ಚಿನ ಪ್ರಮಾಣದ ಪೂರೈಕೆಗೆ ಒತ್ತಡ ಹೇರುತ್ತಿದ್ದೇವೆ' ಎಂದು ಮುನಿಯಪ್ಪ ತಿಳಿಸಿದರು.

ರಾಜ್ಯದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. ಇದುವರೆಗೆ ಒಟ್ಟು 88,99,796 ಗೃಹ ಸಿಲಿಂಡರ್‌ಗಳು ವಿತರಣೆಗೊಂಡಿವೆ. ಜೊತೆಗೆ 5,30,426 ವಾಣಿಜ್ಯ ಸಿಲಿಂಡರ್‌ಗಳು ಮತ್ತು ಸುಮಾರು 1,17,522 ಆಟೊ ಎಲ್‌ಪಿಜಿ ಸಿಲಿಂಡರ್‌ಗಳು (2232.68 ಟನ್) ವಿತರಣೆಗೊಂಡಿವೆ. ಆಟೊ ಎಲ್‌ಪಿಜಿ ಸರಬರಾಜು ಸರಾಸರಿ ಶೇ 98 ಮಟ್ಟದಲ್ಲಿ ಸ್ಥಿರವಾಗಿದೆ ಎಂದು ಹೇಳಿದರು.

ವಾಣಿಜ್ಯ ಸಿಲಿಂಡರ್‌ಗಳ ಬೇಡಿಕೆ ದಿನಕ್ಕೆ 44,700 ಇದ್ದು, ಲಭ್ಯತೆ ಆಧಾರದ ಮೇಲೆ ಹಂತ ಹಂತವಾಗಿ ಪೂರೈಕೆ ಹೆಚ್ಚಿಸಲಾಗಿದೆ. ಇದೇ ವರ್ಷದ ಮಾರ್ಚ್ 16 ರಿಂದ ಶೇ 20, ಮಾರ್ಚ್ 23ರಿಂದ ಶೇ 40 ಮತ್ತು ಮಾರ್ಚ್ 29ರಿಂದ ಪರಿಷ್ಕೃತವಾಗಿ ಶೇ 68 ರಷ್ಟು ಪೂರೈಕೆ ಮಾಡಲಾಗಿದೆ ಎಂದರು.

ಆಟೊ ಎಲ್‌ಪಿಜಿ; ದರ ಕಡಿತಕ್ಕೆ ಮನವಿ

'ಆಟೊ ಎಲ್‌ಪಿಜಿ ಹಂಚಿಕೆ ಹೆಚ್ಚಿಸುವುದರ ಜತೆಗೆ ದರವನ್ನು ಕಡಿತಗೊಳಿಸುವಂತೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರಿಗೆ ಪತ್ರ ಬರೆಯಲಾಗಿದೆ' ಎಂದೂ ಸಚಿವ ಮುನಿಯಪ್ಪ ಹೇಳಿದರು.

ಈಗಿನ ಪರಿಸ್ಥಿತಿಯನ್ನು ಮನಗಂಡು ತಾತ್ಕಾಲಿಕವಾಗಿ ಪೆಟ್ರೋಲ್ ಬಳಕೆ ಮಾಡುವಂತೆ ಅವರು ಆಟೊ ಚಾಲಕರಿಗೆ ಮನವಿ ಮಾಡಿದರು.

ಇತರೆ ರಾಜ್ಯಗಳಿಂದ ಬಂದಿರುವ ವಲಸೆ ಕಾರ್ಮಿಕರು ಮತ್ತು ಬಡಜನರಿಗೆ ಸಹಾಯವಾಗುವಂತೆ 5 ಕೆ.ಜಿ ಸಿಲಿಂಡರ್‌ಗಳ ವಿತರಣೆಯೂ ನಡೆಯುತ್ತಿದೆ. ಇದುವರೆಗೆ 4,048 ಸಿಲಿಂಡರ್ ವಿತರಿಸಲಾಗಿದೆ ಎಂದು ಹೇಳಿದರು.

ಚಾರಣ: ಸುರಕ್ಷೆ ಅರಣ್ಯರೋದನ

ಒಂದನೇ ಪುಟದಿಂದ...

'ಸಿಬ್ಬಂದಿಯು ಹೆಚ್ಚೆಂದರೆ, ಅರಣ್ಯ ಪ್ರದೇಶದಲ್ಲಿ ಪ್ಲಾಸ್ಟಿಕ್ ಬಿಸಾಡಬೇಡಿ ಎಂದು ಸೂಚಿಸುತ್ತಾರೆ. ಚಾರಣಿಗರು ದಹನೀಯ ವಸ್ತುಗಳು, ಸಿಗರೇಟ್ ಮತ್ತು ಮದ್ಯ ತೆಗೆದುಕೊಂಡು ಹೋಗದಿರುವುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಆದರೆ, ಚಾರಣ ಕೈಗೊಳ್ಳುವವರ ಜತೆಯಲ್ಲಿ ವಾಚರ್‌ಗಳನ್ನು ಕಳುಹಿಸುವ ವ್ಯವಸ್ಥೆ ಮಾಡುವುದಿಲ್ಲ. ಇಲ್ಲವೇ ಚಾರಣದ ತಂಡದಲ್ಲಿ ತರಬೇತಿ ಪಡೆದ ಮತ್ತು ನೋಂದಣಿ ಮಾಡಿಕೊಂಡ ಮಾರ್ಗದರ್ಶಿ ಇದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಿಲ್ಲ. ಈ ಮೂಲಕ ಚಾರಣಿಗರ ಸುರಕ್ಷತೆಯನ್ನು ಕಡೆಗಣಿಸಲಾಗುತ್ತಿದೆ' ಎಂಬುದು ಅವರ ವಿವರಣೆ.

ಮತ್ತೊಬ್ಬ ಚಾರಣಿಗ ಸುನಿಲ್ ರಾಮಕೃಷ್ಣ, 'ಹಲವು ಚಾರಣ ತಾಣಗಳ ಚೆಕ್‌ಪೋಸ್ಟ್‌ಗಳಲ್ಲಿ ಚಾರಣಿಗರ ಬ್ಯಾಗ್‌ಗಳನ್ನು ಅಲ್ಲಿಯೇ ಇರಿಸಿಕೊಳ್ಳಲಾಗುತ್ತದೆ. ಪ್ರಥಮ ಚಿಕಿತ್ಸೆಗೆ ಅಗತ್ಯವಿರುವ ಔಷಧ–ಸಲಕರಣೆಗಳು, ಹೆಚ್ಚುವರಿ ತಿಂಡಿ–ತಿನಿಸನ್ನೂ ಒಯ್ಯಲು ಬಿಡುವುದಿಲ್ಲ. ತುರ್ತು ಸಂದರ್ಭದಲ್ಲಿ ಅತ್ಯಗತ್ಯವಾದ ಈ ವಸ್ತುಗಳನ್ನು ಸಿಬ್ಬಂದಿಯು ಚೆಕ್‌ಪೋಸ್ಟ್‌ನಲ್ಲಿಯೇ ಇರಿಸಿಕೊಳ್ಳುವುದು ಅಪಾಯಕ್ಕೆ ಎಡೆಮಾಡಿಕೊಡುತ್ತದೆ. ಎಸ್‌ಒಪಿ ರಚನೆ ವೇಳೆ ಇಲಾಖೆ ಇದೆಲ್ಲವನ್ನೂ ಪರಿಗಣಿಸಬೇಕು' ಎನ್ನುತ್ತಾರೆ.

ಸುರಕ್ಷಿತ ಚಾರಣ ಕೈಗೊಳ್ಳುವ ಬಗ್ಗೆ ಪೋರ್ಟಲ್‌ನಲ್ಲಿ ಯಾವುದೇ ಮಾಹಿತಿ ಇಲ್ಲ. ಈ ಎಲ್ಲ ಅಂಶಗಳ ಕುರಿತು ಪ್ರತಿಕ್ರಿಯೆ ಪಡೆಯಲು ಅರಣ್ಯ ಭವನ ಕಚೇರಿಗೆ ಹಲವು ಬಾರಿ ಕರೆ ಮಾಡಿದರೂ, ಯಾರೂ ಕರೆ ಸ್ವೀಕರಿಸಲಿಲ್ಲ.

ಕೇರಳದ ವಿದ್ಯಾರ್ಥಿನಿ ಶವವಾಗಿ ಪತ್ತೆ

ಒಂದನೇ ಪುಟದಿಂದ...

ಕೇರಳದ ಪಾಲಕ್ಕಾಡ್‌ನಿಂದ ಒಂದೇ ಕುಟುಂಬದ 40ಕ್ಕೂ ಹೆಚ್ಚು ಜನ ಪ್ರವಾಸ ಬಂದಿದ್ದರು. ಇದರಲ್ಲಿ 10ನೇ ತರಗತಿ ಓದುತ್ತಿದ್ದ 16 ವರ್ಷದ ಬಾಲಕಿ ಇದ್ದಳು. ಇತ್ತೀಚೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕೂಡ ಬರೆದಿದ್ದಳು. ಮಾಣಿಕ್ಯಧಾರಾ ಜಲಪಾತದ ಬಳಿ ಜನದಟ್ಟಣೆ ನಡುವೆ ಮಂಗಳವಾರ ಸಂಜೆ 5.30ರ ನಂತರ ಬಾಲಕಿ ನಾಪತ್ತೆಯಾಗಿದ್ದಳು. ಪೊಲೀಸರು ಮೂರು ದಿನಗಳಿಂದ ನಿರಂತರ ಹುಡುಕಾಟ ನಡೆಸುತ್ತಿದ್ದರು.

ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್, ಪಶ್ಚಿಮ ವಲಯ ಡಿಐಜಿ ಅಮಿತ್ ಸಿಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರಕುಮಾರ್ ದಯಾಮ ಸ್ಥಳದಲ್ಲಿದ್ದರು. ಕೇರಳ ಕಾಂಗ್ರೆಸ್ ಕಾರ್ಯಾಧ್ಯಕ್ಷ ಸಂದೀಪ್ ವಾರಿಯರ್ ಇದ್ದರು. 'ಇಂತಹ ಪ್ರಸಿದ್ಧ ಪ್ರವಾಸಿ ತಾಣದಲ್ಲಿ ಸಿಸಿಟಿವಿ ಕ್ಯಾಮೆರಾ ಇಲ್ಲ. ಇದ್ದಿದ್ದರೆ ಏನಾಯಿತು ಎಂಬುದು ಗೊತ್ತಾಗುತ್ತಿತ್ತು. ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಸಬೇಕು' ಎಂದು ಬಾಲಕಿಯ ಸಂಬಂಧಿಕರು ಒತ್ತಾಯಿಸಿದರು.

ಬಾಲಕಿ ಸಾವಿನ ವಿಷಯ ಸೂಕ್ಷ್ಮ ಆಗಿರುವುದರಿಂದ ತಜ್ಞ ವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪಟ್ಟಿಯಲ್ಲಿಲ್ಲ ನೂರಾರು ತಾಣ

ಒಂದನೇ ಪುಟದಿಂದ...

ಕಡಿದಾದ ಹಾದಿಯಲ್ಲಿ ಸಾಗಬೇಕಿರುವ ರಾಮದೇವರ ಬೆಟ್ಟ, ಕರಡಿ ಮತ್ತು ಚಿರತೆಗಳ ಸಂಖ್ಯೆ ಹೆಚ್ಚು ಇರುವ ನಾರಾಯಣಗಿರಿ, ಜೇನುಕಲ್ಲು ಬೆಟ್ಟಗಳಿಗೆ ಚಾರಣ ಕೈಗೊಳ್ಳುವವರ ಸಂಖ್ಯೆ ಹೆಚ್ಚೇ ಇದೆ.

ಹಾಸನದ ಸಕಲೇಶಪುರ ಬಳಿಯ ಎಡಕುಮೇರಿ ಮತ್ತು ಕಾಗಿನಹರೆಗೆ ಚಾರಣ ಕೈಗೊಳ್ಳುವುದನ್ನು ಅರಣ್ಯ ಇಲಾಖೆ ನಿಷೇಧಿಸಿದೆ. ಆದರೆ ಈ ಎರಡೂ ಪ್ರದೇಶಗಳಿಗೆ ಚಾರಣ ಅವ್ಯಾಹತವಾಗಿ ನಡೆಯುತ್ತದೆ. ಚಿಕ್ಕಮಗಳೂರಿನ ಚಂದ್ರದ್ರೋಣ ಪರ್ವತ ಸಾಲಿನ ಕಲ್ಲತ್ತಗಿರಿ ಜಲಪಾತದ ತುದಿ, ಚಾರ್ಮಾಡಿ ಘಾಟಿ, ಮುತ್ತೋಡಿ ವಲಯದ ನಾರ್ವೆ ಪ್ರದೇಶದಲ್ಲಿ ಚಾರಣಗಳನ್ನು ನಡೆಸಲಾಗುತ್ತದೆ.

ಸೀಮಾತೀತ ಮೇರು ವಿದ್ವನ್ನಿಧಿ

• ಮಂಜುನಾಥ ಅಜ್ಜಂಪುರ

ವಿದ್ವಾಂಸ ರಾಮಸ್ವಾಮಿ ಇನ್ನಿಲ್ಲ

ಬೆಂಗಳೂರು: ವಿದ್ವಾಂಸ ಎಸ್.ಆರ್. ರಾಮಸ್ವಾಮಿ (88) ಅವರು ಶಂಕರಪುರದ ರಂಗರಾವ್ ರಸ್ತೆಯಲ್ಲಿರುವ ತಮ್ಮ ನಿವಾಸದಲ್ಲಿ ಶುಕ್ರವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಬೆಳಿಗ್ಗೆ 10.30ರಿಂದ 12 ಗಂಟೆಯವರೆಗೆ ಕೆಂಪೇಗೌಡ ನಗರದಲ್ಲಿರುವ ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಕಚೇರಿ ಕೇಶವಶಿಲ್ಪದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬಳಿಕ, ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ರಾಮಸ್ವಾಮಿ ಅವರು 1937ರ ಅ.29ರಂದು ಬೆಂಗಳೂರಿನಲ್ಲಿ ಜನಿಸಿದ್ದರು. ಆರು ದಶಕಗಳ ಕಾಲ ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 'ಸುಧಾ' ವಾರಪತ್ರಿಕೆಯಲ್ಲಿ ಮುಖ್ಯ ಉಪಸಂಪಾದಕರಾಗಿ ಕಾರ್ಯನಿರ್ವಹಿಸಿದ್ದ ಅವರು, ನಂತರ ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅವರು 50ಕ್ಕೂ ಅಧಿಕ ವಿದ್ವತ್ ಪೂರ್ಣ ಗ್ರಂಥಗಳು, ಸಾವಿರಕ್ಕೂ ಅಧಿಕ ಲೇಖನಗಳನ್ನು ಬರೆದಿದ್ದಾರೆ.

ಉತ್ಥಾನ ಮಾಸಪತ್ರಿಕೆ ಮತ್ತು ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ಡಿ.ವಿ. ಗುಂಡಪ್ಪ (ಡಿವಿಜಿ) ಅವರ ಶಿಷ್ಯರಾಗಿದ್ದ ರಾಮಸ್ವಾಮಿ ಅವರು, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಗೌರವ ಪುರಸ್ಕಾರ, ಪಂಪ ಪ್ರಶಸ್ತಿ, ಅನಕೃ ಪ್ರಶಸ್ತಿ, ಗೌರವ ಡಾಕ್ಟರೇಟ್ ಸೇರಿ ಹಲವು ಪ್ರಶಸ್ತಿ, ಪುರಸ್ಕಾರಗಳು ಅವರಿಗೆ ಸಂದಿವೆ.

ನುಡಿ ನಮನ

ಎಸ್.ಆರ್.ರಾಮಸ್ವಾಮಿಯವರ ಅನುಭವ, ಅಧ್ಯಯನಗಳ ವ್ಯಾಪ್ತಿ ಬಹಳ ದೊಡ್ಡದು. ಸಾಹಿತ್ಯ, ರಾಷ್ಟ್ರೀಯ ಸಾಹಿತ್ಯ, ಇತಿಹಾಸ, ಸಮಾಜಶಾಸ್ತ್ರ, ಪರಿಸರ, ಸಂಗೀತ, ಕಥೆ, ಕಾದಂಬರಿ, ಭಾಷಾಂತರ ಇತ್ಯಾದಿ ಅನೇಕ ಕ್ಷೇತ್ರಗಳ ಹರಹು ಅವರದ್ದು. ಇಷ್ಟು ಸಾಲದೆಂದು, ಅವರು ಪರಿಸರ ಸೇರಿದಂತೆ ಅನೇಕ ಚಳವಳಿಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು, ಎನ್ನುವುದು ನನಗೆ ಇಂದಿಗೂ ವಿಸ್ಮಯವೇ.

ಕನ್ನಡದ ವೈಚಾರಿಕ ಲೋಕದಲ್ಲಿ ವಿದ್ವನ್ನಿಧಿಯಾದ ರಾಮಸ್ವಾಮಿಯವರು ಸದ್ದಿಲ್ಲದೆಯೇ ತಮ್ಮ ಅಪಾರ ಅಧ್ಯಯನದಿಂದ, ವಿಚಾರ ಮಂಥನದಿಂದ ಮಹತ್ತ್ವದ ನೂರಾರು ಲೇಖನಗಳನ್ನು ಬರೆದರು. ಆ ಎಲ್ಲ ಬರೆಹಗಳ ಹಿಂದೆ ಸಾಕ್ಷ್ಯಾಧಾರಗಳದ್ದೇ ಅಂತಃಶಕ್ತಿ. ಆ ಕಾರಣದಿಂದ ಅವರು ಹತ್ತರಲ್ಲಿ ಒಬ್ಬ ಎನ್ನುವಂತಹ ಬರಹಗಾರರಾಗಿ ಉಳಿಯಲಿಲ್ಲ.

ಅನೇಕ ದಶಕಗಳ ಕಾಲ ಕನ್ನಡದಲ್ಲಿ ಅರ್ಥಶಾಸ್ತ್ರದ ವಿಷಯವಾಗಿ ಅದೇಕೋ ಮಹತ್ತ್ವದ ಗ್ರಂಥಗಳು ಬರಲೇ ಇಲ್ಲ. ಅವುಗಳಲ್ಲಿಯೂ ಮುಖ್ಯವಾಗಿ ಐರೋಪ್ಯ ಚಿಂತನೆಗಳ ಎರವಲು ವಿಚಾರಗಳಿದ್ದವು. ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯ ವಿಜ್ಞಾನ, ಇತಿಹಾಸ ಮುಂತಾದ ಕ್ಷೇತ್ರಗಳಿಗೆ - ವಿಭಾಗಗಳಿಗೆ ಬಹಳ ಕಾಲ ಗ್ರಹಣವೇ ಹಿಡಿದಿತ್ತು.

ಇಪ್ಪತ್ತೂರು ಶತಮಾನಗಳ ಹಿಂದೆ, ಆಚಾರ್ಯ ಚಾಣಕ್ಯರು ಅವರೆಗಿನ ನೂರೆಂಟು ಸಂಗತಿಗಳನ್ನು ಕ್ರೋಡೀಕರಿಸಿ 'ಅರ್ಥಶಾಸ್ತ್ರ' ರಚಿಸಿದ್ದರು. ಅದರಲ್ಲಿ ಬೇಹುಗಾರಿಕೆ, ಕರನಿರ್ಧರಣ, ಆಡಳಿತ, ನೇಮಕಾತಿ ಮುಂತಾದ ವಿಷಯಗಳನ್ನು ಚರ್ಚಿಸಲಾಗಿತ್ತು. ಪ್ರಸಕ್ತ ವಿಶ್ವವಿದ್ಯಾಲಯಗಳಿಗೆ, ಶಿಕ್ಷಣ ತಜ್ಞರಿಗೆ ಏನಾಗಿದೆ, ನಮ್ಮಲ್ಲಿ ಮೂಲಭೂತ ಚಿಂತನೆಯೇಕೆ ನಡೆಯುತ್ತಿಲ್ಲ? ಆಚಾರ್ಯ ಚಾಣಕ್ಯರಂಥವರ ವಿದ್ವತ್-ಪರಂಪರೆಯೇ ಅಂತ್ಯವಾಯಿತೇ, ಎನ್ನುವಂತಹ ದುರ್ಭರ ಕಾಲಘಟ್ಟದಲ್ಲಿ ರಾಮಸ್ವಾಮಿಯವರ 'ಆರ್ಥಿಕತೆಯ ಎರಡು ಧ್ರುವ' (1994) ಪ್ರಕಟವಾಗಿ ಕನ್ನಡದ ಓದುಗರ ಕೈಸೇರಿದಾಗ, ವಿಸ್ಮಯಕ್ಕಿಂತಲೂ ವಿಸ್ಮಯಾಘಾತವೇ ಆಗಿಬಿಟ್ಟಿತು. ಅಂದಿನ ಜಾಗತಿಕ ಆರ್ಥಿಕ ವ್ಯವಸ್ಥೆಯ ಅನೇಕ ಆಯಾಮಗಳ ಅಪರೂಪದ ಪ್ರಸ್ತುತಿ ಅಲ್ಲಿತ್ತು. ಭಾರತೀಯ ಆರ್ಥಿಕ ಚಿಂತನೆಯ ಅತ್ಯಂತ ಮಹತ್ವದ ಕೃತಿಯಿದು.

ಬಂಡವಾಳಶಾಹಿ, ಸಂಪನ್ಮೂಲಗಳ ಅತಿ-ಬಳಕೆ (Consumerism) ಮತ್ತು ಶೋಷಣೆಯ ಮೇಲೆ ಆಧಾರಿತ (ಪಾಶ್ಚಾತ್ಯ ಆರ್ಥಿಕ ಮಾದರಿ) ಜಾಗತಿಕ ಆರ್ಥಿಕ ವ್ಯವಸ್ಥೆಯ ಲೋಪದೋಷಗಳ ಅರಿವು ನಮಗಾಯಿತು. ಜಾಗತೀಕರಣದ ವಿಷಫಲವಾಗಿ ಪಾಶ್ಚಾತ್ಯ ಆರ್ಥಿಕ ನೀತಿಗಳು, ಹೇಗೆ ನಮ್ಮ ಸ್ಥಳೀಯ ಕುಶಲಕರ್ಮಿಗಳನ್ನು ಮತ್ತು ರೈತರನ್ನು ಸಂಕಷ್ಟಕ್ಕೆ ದೂಡುತ್ತವೆ ಎಂಬುದನ್ನು ರಾಮಸ್ವಾಮಿಯವರು ಇಲ್ಲಿ ತಾರ್ಕಿಕವಾಗಿ ವಿವರಿಸಿದ್ದರು. ಭಾರತವು ತನ್ನದೇ ಆದ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಗೆ ಹೊಂದಿಕೆಯಾಗುವ ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳುವ ಅಗತ್ಯವನ್ನು (ಸ್ವದೇಶಿ ಜಾಗೃತಿ) ಈ ಕೃತಿ ಒತ್ತಿಹೇಳಿತು. ಶೈಕ್ಷಣಿಕ ವಲಯದಲ್ಲೂ ಅಚ್ಚರಿ ಹುಟ್ಟಿಸಿದ ಕೃತಿ ಇದಾಗಿತ್ತು.

ಇಲ್ಲಿ ಇನ್ನೂ ಒಂದು ಸ್ವಾರಸ್ಯಪೂರ್ಣ ಸಂಗತಿ ನೆನಪಾಗುತ್ತದೆ. ತನ್ನ ಹೊಸತನದಿಂದ ಖ್ಯಾತಿ ಪಡೆದಿದ್ದ ಅಂದಿನ ವಾರಪತ್ರಿಕೆಯೊಂದರ ಸಂಪಾದಕರು, ಆರೆಸ್ಸೆಸ್ - ಬಿಜೆಪಿಗಳ ಕಟು ಟೀಕಾಕಾರರಾಗಿದ್ದರು. ದಶಕಗಳ ಕಾಲ ಅವರಿಂದ ಒಮ್ಮೆಯೂ ಮೆಚ್ಚುಗೆಯ ಮಾತು ಬರಲಿಲ್ಲ. ಆದರೆ, ಸಂಘದವರೇ ಆದ ರಾಮಸ್ವಾಮಿಯವರ 'ಆರ್ಥಿಕತೆಯ ಎರಡು ಧ್ರುವ' ಕೃತಿಯನ್ನು ಮೆಚ್ಚಿ ಬರೆದ ಆ ಪತ್ರಿಕೆಯ ಆ ಒಂದು ವಿಮರ್ಶೆ ಅಚ್ಚರಿಯ ಹೆದ್ದೆರೆಗಳನ್ನೇ ಹುಟ್ಟುಹಾಕಿತು. ಹೀಗೆಯೇ ಅನೇಕ ವಲಯಗಳಲ್ಲಿ ಮಹತ್ತರವಾದ ವೈಚಾರಿಕ ಅಲೆಗಳನ್ನು ಅವರ ಹಲವಾರು ಕೃತಿಗಳು ಹುಟ್ಟುಹಾಕಿವೆ.

ಎಸ್‌ಆರ್‌ರಾಮಸ್ವಾಮಿ

ರಾಮಸ್ವಾಮಿಯವರು ಪತ್ರಕರ್ತರಾಗಿಯೂ (ಸುಧಾ, ಉತ್ಥಾನ) ನೆನಪಿಡುವಂತಹ ಕೆಲಸ ಮಾಡಿದವರು. ಅವರು ಆಡುತ್ತಿದ್ದ ಒಂದೆರಡು ವಾಕ್ಯಗಳಲ್ಲಿ ನೂರು ಮಾತುಗಳ ಸಾರ ಅಡಕವಾಗಿರುತ್ತಿತ್ತು. ಒಂದು ಪುಸ್ತಕದ ಮೂಲಕ ಹೇಳುವಂತಹುದನ್ನು ಅವರ ಒಂದು ಲೇಖನ ಪ್ರಸ್ತುತಪಡಿಸುತ್ತಿತ್ತು. ಅವರ ಅತಿವಿಶಿಷ್ಟ ಸಾಹಿತ್ಯಾಧ್ಯಯನವೇ - ಅವುಗಳ ಮನನವೇ, ಅವರಿಗೆ ನಾವು ಸಲ್ಲಿಸುವ ಗೌರವಾಂಜಲಿ. ಅವರ ಬರೆಹಗಳನ್ನು ತಿಲಮಾತ್ರದಷ್ಟು ಓದಿದರೂ, ಅವರದ್ದು ಎಂತಹ ವಿದ್ವದ್‌ವ್ಯಕ್ತಿತ್ವ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ನಿಜಾರ್ಥದಲ್ಲಿ ರಾಮಸ್ವಾಮಿಯವರು ನಮ್ಮ ಸಾರಸ್ವತ - ಸಾಂಸ್ಕೃತಿಕ ಲೋಕದ ವಿದ್ವನ್ಮಣಿ.

ಅರಣ್ಯದಿಂದ ಜನರನ್ನು ಒಕ್ಕಲೆಬ್ಬಿಸದಂತೆ ಮನವಿ

ಕಣ್ಣೀರಿಟ್ಟ ಉಪ ಸಭಾಧ್ಯಕ್ಷ ಲಮಾಣಿ

ಪ್ರಜಾವಾಣಿ ವಾರ್ತೆ

ಹಾವೇರಿ: 'ಹಳೆಯ ಕಾಯ್ದೆ ಮುಂದಿಟ್ಟುಕೊಂಡು ಸುಪ್ರೀಂಕೋರ್ಟ್ ಆದೇಶವಿದೆಯೆಂದು ಹೇಳಿ, ನನ್ನ ತೋಟ ಸೇರಿ ಹಲವು ಜನರ ಜಾಗವನ್ನು ತೆರವು ಮಾಡಲಾಗುತ್ತಿದೆ. ನಮ್ಮ ಅಜ್ಜನ ಕಾಲದಿಂದ ವಾಸವಿರುವ ಜಾಗವನ್ನು ಹೇಗೆ ತೆರವು ಮಾಡುತ್ತಾರೆ?' ಎಂದು ವಿಧಾನಸಭೆ ಉಪ ಸಭಾಧ್ಯಕ್ಷರೂ ಆದ, ಶಾಸಕ ರುದ್ರಪ್ಪ ಲಮಾಣಿ ಅವರು ಇಲ್ಲಿ ಕಣ್ಣೀರಿಟ್ಟರು.



ರುದ್ರಪ್ಪ ಲಮಾಣಿ

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅರಣ್ಯ ಇಲಾಖೆಯ ಡಿಎಫ್‌ಒ ಡಿಸಿಎಫ್ ಪ್ರಕಾಶಕರ್ ಅಕ್ಷಯ್ ಅವರನ್ನು ಈ ಬಗ್ಗೆ ಪ್ರಶ್ನಿಸಿದ ಲಮಾಣಿ, 'ನಮ್ಮ ಸಮಸ್ಯೆಯನ್ನು ಬಗೆಹರಿಸಿ. ನಮ್ಮನ್ನು ಬದುಕಲಿ ಬಿಡಿ' ಎಂದರು.

'ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಜನರಿಗೆ ಬದುಕಲು ಬಿಡುತ್ತಿಲ್ಲ. ಹಲವು ವರ್ಷಗಳಿಂದ ವಾಸವಿರುವ ಜನರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಗುತ್ತಲ ಬಳಿ ಎಸ್‌ಟಿಪಿ ಘಟಕದ ಕಾಂಪೌಂಡ್ ವಿಷಯದಲ್ಲಿ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಹಾವೇರಿ ನಗರಸಭೆಯ ಅಧಿಕಾರಿಗಳು ಕೆಲಸ ಮಾಡಲೂ ಬಿಡುತ್ತಿಲ್ಲ. ಈ ರೀತಿಯಾದರೆ, ಜನರ ಕೆಲಸ ಮಾಡುವುದು ಹೇಗೆ? ಅರಣ್ಯ ಇಲಾಖೆಯವರು ಪ್ರಶ್ನಿಸಿದವರ ಮೇಲೆ ಪ್ರಕರಣ ಹಾಕುತ್ತ ಹೋದರೆ, ಎಲ್ಲಿಗೆ ಹೋಗಬೇಕು. ನಾವೇ ಊರು ಬಿಟ್ಟು ಹೋಗುತ್ತೇವೆ. ಅರಣ್ಯ ಇಲಾಖೆಯವರೇ ಇಲ್ಲಿ ಬದುಕಲಿ' ಎಂದು ಆಕ್ರೋಶ ಹೊರಹಾಕಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ, 'ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಪಡಿಸಬಾರದು. ಸುಖಾಸುಮ್ಮನೇ ಊರಿನಲ್ಲಿರುವ ಎಲ್ಲರ ವಿರುದ್ಧವೂ ಪ್ರಕರಣ ಹಾಕುತ್ತೀರಾ' ಎಂದು ಡಿಎಫ್‌ಒ ಅವರನ್ನು ಪ್ರಶ್ನಿಸಿದರು.

ಡಿಎಫ್‌ಒ ಪ್ರಭಾಕರನ್ ಅಕ್ಷಯ್ ಮಾತನಾಡಿ, 'ಉಪಗ್ರಹದ ಮೂಲಕ ಕೇಂದ್ರ ಸರ್ಕಾರವೇ ಅರಣ್ಯ ಜಾಗವನ್ನು ಫೋಟೊ ಸಮೇತ ದಾಖಲಿಸುತ್ತಿದೆ. ಒತ್ತುವರಿ ತೆರವಿಗೆ ಆದೇಶಗಳು ಬರುತ್ತಿವೆ. ಜಾರಿಗೊಳಿಸದಿದ್ದರೆ, ನನ್ನ ಹಾಗೂ ಇತರರ ಮೇಲೆ ಕ್ರಮ ಆಗುತ್ತದೆ. ಅದೇ ಕಾರಣಕ್ಕೆ ಕಾನೂನು ಪ್ರಕಾರವೇ ಕ್ರಮಜರುಗಿಸಲಾಗುತ್ತಿದೆ. ಸಭೆಯಲ್ಲಿ ವ್ಯಕ್ತವಾಗಿರುವ ಅಂಶವನ್ನೂ ನಡಾವಳಿಯಲ್ಲಿ ಸೇರಿಸಿ. ಅದನ್ನು ಇಲಾಖೆಗೆ ಕಳುಹಿಸುತ್ತೇನೆ' ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, 'ಸಮಸ್ಯೆಯನ್ನು ಬಗೆಹರಿಸಿ' ಎಂದು ಡಿಎಫ್‌ಒ ಗೆ ಸೂಚನೆ ನೀಡಿ ರುದ್ರಪ್ಪ ಲಮಾಣಿ ಅವರನ್ನು ಸಮಾಧಾನಪಡಿಸಿದರು.

ಹಿರಿಯರಿಂದ ಷಡ್ಯಂತ್ರ: ದೂರು

ದಾವಣಗೆರೆ ದಕ್ಷಿಣ ಕ್ಷೇತ್ರ: ಮುಸ್ಲಿಂ ಮುಖಂಡರ ಒಳಜಗಳ ತಾರಕಕ್ಕೆ

ಪ್ರಜಾವಾಣಿ ವಾರ್ತೆ

ಉಪ ಚುನಾವಣೆ

ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಮಗಿದ ಬೆನ್ನಲ್ಲೇ ಮುಸ್ಲಿಂ ಸಮುದಾಯದ ಮುಖಂಡರ ಒಳಜಗಳ ತಾರಕಕ್ಕೇರಿದ್ದು, ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಷಡ್ಯಂತ್ರ ನಡೆಸಿದ್ದರು ಎಂದು ಆರೋಪಿಸಿ ಮೂವರು ಪ್ರಭಾವಿ ಮುಸ್ಲಿಂ ನಾಯಕರ ವಿರುದ್ಧ ಪಕ್ಷದ ಹೈಕಮಾಂಡ್‌ಗೆ ದೂರು ಸಲ್ಲಿಕೆಯಾಗಿದೆ.

'ವಸತಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರು ಪಕ್ಷ ಆಯ್ಕೆ ಮಾಡಿದ್ದ ಅಧಿಕೃತ ಅಭ್ಯರ್ಥಿ ಸಮರ್ಥ್ ಶಾಮನೂರು ಅವರನ್ನು ಸೋಲಿಸಲು ಷಡ್ಯಂತ್ರ ನಡೆಸಿದ್ದರು. ತಾವು ಹೇಳಿದ ಹಾಗೆ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಲಿಲ್ಲ ಎನ್ನುವ ಕಾರಣಕ್ಕೆ ಇಂತಹ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರು ಸಲ್ಲಿಸಿದ್ದಾರೆ' ಎಂದು ಪಕ್ಷದ ಮೂಲಗಳು ಹೇಳಿವೆ.

ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯದ

ಸಮರ್ಥ್ ಶಾಮನೂರು

ಮತದಾರರ ಸಂಖ್ಯೆ ಸುಮಾರು 70 ಸಾವಿರಷ್ಟಿದೆ. ಹಾಗಾಗಿ, ಮುಸ್ಲಿಂ ಅಭ್ಯರ್ಥಿಗೇ ಟಿಕೆಟ್ ನೀಡಬೇಕು ಎಂದು ಜಮೀರ್ ಅಹಮದ್ ಸೇರಿದಂತೆ ಬಹುತೇಕ ಮುಸ್ಲಿಂ ನಾಯಕರು ಪಟ್ಟು ಹಿಡಿದಿದ್ದರು.

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಕ್ಷೇತ್ರದಲ್ಲಿ ಅವರ ಮೊಮ್ಮಗ, ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ್‌ಗೆ ಟಿಕೆಟ್ ನೀಡಬೇಕು ಎಂದು ಅವರ ಕುಟುಂಬ ಪಟ್ಟು ಹಿಡಿದಿತ್ತು. ಸಚಿವರಾದ ಈಶ್ವರ ಖಂಡ್ರೆ, ಶರಣಪ್ರಕಾಶ ಪಾಟೀಲ ಸೇರಿದಂತೆ ಹಲವರು, ಶಾಸಕರು ಮೃತರಾದಾಗ ಅನುಕಂಪದ ಆಧಾರದಲ್ಲಿ ಮೃತರ ಕುಟುಂಬಕ್ಕೇ ಟಿಕೆಟ್ ನೀಡುತ್ತಾ ಬರಲಾಗಿದೆ. ಬಾಗಲಕೋಟೆಯಂತೆ ದಾವಣಗೆರೆಯಲ್ಲೂ ಇದೇ ನಿಯಮ ಅನುಸರಿಸಬೇಕು ಎಂದು ಒತ್ತಡ ಹಾಕಿದ್ದರು.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಹಲವು ಸುತ್ತಿನ ಮಾತುಕತೆ ನಡೆಸಿ, ಹೈಕಮಾಂಡ್ ನಿರ್ಧಾರದಂತೆ ಸಮರ್ಥ್ ಹೆಸರು ಅಂತಿಮಗೊಳಿಸಿದ್ದರು. ನಾಮಪತ್ರ ಸಲ್ಲಿಕೆ ಹಿಂಪಡೆಯುವ ದಿನ ಮುಗಿದ ನಂತರ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಾಧಿಕ್ ಪೈಲ್ವಾನ್ ಸ್ವಯಂ ನಿವೃತ್ತಿ ಪಡೆದು ಸಮರ್ಥ್‌ಗೆ ಬೆಂಬಲ ಘೋಷಿಸಿದ್ದರು.

ಕೆಲವರ ಯತ್ನ ವಿಫಲ, ಅಭ್ಯರ್ಥಿ ಗೆಲುವು: ಸಲೀಂ, ರಿಜ್ವಾನ್ ವಿಶ್ವಾಸ

ಅಲ್ಪಸಂಖ್ಯಾತ ಸಮುದಾಯದ ಕೆಲ ಮುಖಂಡರು ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಷಡ್ಯಂತ್ರ ನಡೆಸಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ ಎಂದು ವಿಧಾನಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಲ್ಲರೂ ಸೇರಿಯೇ ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂಬ ಬೇಡಿಕೆ ಇಟ್ಟಿದ್ದೆವು. ಟಿಕೆಟ್ ತಮಗೇ ನೀಡಲು ಅಬ್ದುಲ್ ಜಬ್ಬಾರ್ ಕೋರಿದ್ದರು. ರಣದೀಪ್ ಸಿಂಗ್ ಸುರ್ಜೇವಾಲಾ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ಎಲ್ಲಾ ಮುಖಂಡರ ಒಪ್ಪಿಗೆ ಪಡೆದು ಸಮರ್ಥ್ ಅವರಿಗೆ ಟಿಕೆಟ್ ನೀಡುವ ತೀರ್ಮಾನ ಮಾಡಿದ್ದರು. ಆದರೂ, ಪಕ್ಷದ ಅಭ್ಯರ್ಥಿಯನ್ನು ಸೋಲಿಸಲು ಷಡ್ಯಂತ್ರ ನಡೆಸಲಾಯಿತು. ಈ ಕುರಿತು ರಾಜ್ಯ ಹಾಗೂ ಎಐಸಿಸಿ ನಾಯಕರಿಗೆ ಮಾಹಿತಿ ಇದೆ' ಎಂದರು.

'ಪಕ್ಷದ ಹಿರಿಯ ಮುಖಂಡರೇ ಪಕ್ಷದ ಅಭ್ಯರ್ಥಿಯನ್ನು ಸೋಲಿಸಲು ಷಡ್ಯಂತ್ರ ಮಾಡಿರುವುದು ಬೇಸರದ ಸಂಗತಿ. ಅಲ್ಪಸಂಖ್ಯಾತರಿಗೆ ದ್ರೋಹವಾಗಿದೆ ಎಂದು ಸಾಮಾಜಿಕ ಜಾಲತಾಣಗಳ ಮುಖಾಂತರ ವಿರೋಧ ಪಕ್ಷಗಳು ಕೂಗು ಎಬ್ಬಿಸಿದವು. ಬಿಜೆಪಿಗೆ ಅವಕಾಶ ಸಿಗಬಾರದು ಎಂಬ ಕಾರಣಕ್ಕೇ ಖ್ವಾಜ ಬಂದೇ ನವಾಜ್ ಗುರುಗಳು ಸೇರಿದಂತೆ ಹಲವು ಮುಖಂಡರು ನೀಡಿದ ಸಂದೇಶಕ್ಕೆ ಬೆಲೆ ಕೊಟ್ಟು ಅಲ್ಪಸಂಖ್ಯಾತ ಮತದಾರರು ಕಾಂಗ್ರೆಸ್ ಬೆಂಬಲಿಸಿದರು' ಎಂದು ಹೇಳಿದರು.

ಶಾಸಕ ಯಾಸಿರ್ ಖಾನ್ ಪಠಾಣ್, ವಿಧಾನಪರಿಷತ್ ಸದಸ್ಯೆ ಬಲ್ಕಿಸ್ ಬಾನು, ಕೆಪಿಸಿಸಿ ಉಪಾಧ್ಯಕ್ಷರಾದ ಸಹೀದ್ ಅಹಮದ್, ಉಬೇದುಲ್ಲಾ ಷರೀಫ್, ಅಘಾ ಸುಲ್ತಾನ್, ಮಕಂದರ್, ಚಾಂದ್ ಪಾಷ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದಿನಿಂದ ಪತ್ರಕರ್ತರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೀದರ್: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರು ಹಾಗೂ ಬೀದರ್ ಜಿಲ್ಲಾ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನಕ್ಕೆ ಶನಿವಾರ (ಏ.11) ಚಾಲನೆ ಸಿಗಲಿದೆ.

ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಸ್ತು ಪ್ರದರ್ಶನ ಉದ್ಘಾಟಿಸುವರು. ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು. ಪೌರಾಡಳಿತ ಸಚಿವ ರಹೀಂ ಖಾನ್ ಛಾಯಾಚಿತ್ರ ಪ್ರದರ್ಶನ, ಸಂಸದ ಸಾಗರ ಖಂಡ್ರೆ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡುವರು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಬೇಡವೇ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜಾರಿಗೊಳಿಸುತ್ತಿರುವ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ಕೈ ಬಿಟ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಬಲಪಡಿಸಬೇಕು. ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಯ (ಎಐಡಿಎಸ್‌ಒ) ರಾಜ್ಯ ಮಟ್ಟದ ಸಮಾವೇಶ ಆಗ್ರಹಿಸಿದೆ.

ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ನಡೆದ ಸಮಾವೇಶದಲ್ಲಿ ಮಾತನಾಡಿದ ಸಾಹಿತಿ ಕೆ.ಮರುಳಸಿದ್ದಪ್ಪ, 'ಕರ್ನಾಟಕ ಮಾತ್ರವಲ್ಲದೇ ಹಲವು ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆ ಜಾರಿಗೊಳಿಸಲಾಗುತ್ತಿದೆ. ಜನರಿಗೆ ನೀಡಿದ ಭರವಸೆ ಈಡೇರಿಸಲು ಕೈಲಾಗದವರು ಬಾಯಿ ಮುಚ್ಚಿಸಲು ಗ್ಯಾರಂಟಿ ಯೋಜನೆ ಜಾರಿ ಮಾಡುತ್ತಿದ್ದು, ನಮಗೆ ಇಂತಹ ಯೋಜನೆಗಳು ಬೇಕಾಗಿಲ್ಲ. ಇದರ ಬದಲು ಶಿಕ್ಷಣ, ಆರೋಗ್ಯ ಹಾಗೂ ಉದ್ಯೋಗ ಗ್ಯಾರಂಟಿ ಕೊಡಿ' ಎಂದು ಒತ್ತಾಯಿಸಿದರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, 'ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನೇ ಕರ್ನಾಟಕದಲ್ಲಿ ಹಾಳು ಮಾಡುವ ಪ್ರಯತ್ನ ನಡೆಯುತ್ತಿದೆ. ನಮ್ಮಲ್ಲಿ ಪ್ರಾದೇಶಿಕ ಪಕ್ಷ ಇದ್ದಿದ್ದರೆ ಶಿಕ್ಷಣ, ಭಾಷೆ ವಿಚಾರದಲ್ಲಿ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದು ಹೇಳಿದರು.

ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ, 'ಶಿಕ್ಷಣ ಹಕ್ಕು ಕಾಯ್ದೆಯನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಜಾರಿಗೊಳಿಸಿತು. ಈಗ ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಗೆ ವಿರುದ್ಧವಾದ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ಜಾರಿಗೊಳಿಸುತ್ತಿರುವುದು ಸಂವಿಧಾನ ವಿರೋಧಿ ಕ್ರಮ. ಶಾಲಾ ಶಿಕ್ಷಣ ಸಂಕಷ್ಟದಲ್ಲಿದ್ದು, ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ವಿಶೇಷ ಕಾರ್ಯ ಯೋಜನೆ ರೂಪಿಸಬೇಕು' ಎಂದರು.

ವಿಶ್ರಾಂತ ಕುಲಪತಿಗಳಾದ ಎ.ಮುರಿಗೆಪ್ಪ, ಸಬಿಹಾ ಭೂಮಿಗೌಡ, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ದಲಿತ ಸಂಘರ್ಷ ಸಮಿತಿ ಸಂಚಾಲಕ ಗುರುಪ್ರಸಾದ್ ಕೆರಗೋಡು, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಾಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು, ಎಐಡಿಎಸ್‌ಒ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಸಿದ್ದಾರ್ಥ್ ರಥ್ ಮಾತನಾಡಿದರು. ಎಐಡಿಎಸ್‌ಒ ರಾಜ್ಯ ಅಧ್ಯಕ್ಷೆ ಕೆ.ಎಸ್.ಅಶ್ವಿನಿ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರದ ಪರವಾಗಿ ಶಿಕ್ಷಣ ಇಲಾಖೆ ನಿರ್ದೇಶಕಿ ವಿಜಯಾ ಮನವಿ ಸ್ವೀಕರಿಸಿದರು.

ಸಮಾವೇಶದಲ್ಲಿ ಮಕ್ಕಳ ದನಿ: ಸಮಾವೇಶದಲ್ಲಿ ತಾಯಂದಿರ ಜತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ ಮಕ್ಕಳು ಆಗಮಿಸಿದ್ದರು. ಶಾಲಾ ಶಿಕ್ಷಣ ಉಳಿಸಿ ಎನ್ನುವ ಫಲಕಗಳನ್ನು ಹಿಡಿದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಇದನ್ನು ಪ್ರಸ್ತಾಪಿಸಿದ ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, 'ಸಮಾವೇಶಕ್ಕೆ ಮಕ್ಕಳು ಬಂದು ಯೋಜನೆ ವಿರುದ್ಧ ದನಿ ಎತ್ತುವ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ಯಾವುದೇ ಸರ್ಕಾರ ಮಾಡಬಾರದು. ಸರ್ಕಾರ ಸೂಕ್ಷ್ಮತೆ ಕಳೆದುಕೊಂಡಿರುವುದಕ್ಕೆ ಇದು ಸಾಕ್ಷಿ' ಎಂದು ಟೀಕಿಸಿದರು.

The perfect medium for all Educational Institutions

DECCAN HERALD Education
Your window to the world of learning
For Advertisements contact:
9986006598
E-mail: dineshnayak@deccanherald.co.in

ತಾಂತ್ರಿಕ ಲೋಪ: ಹಿಂದಿ ವಿಷಯದಲ್ಲಿ 111 ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶದಲ್ಲಿ ಕೆಲ ವಿದ್ಯಾರ್ಥಿಗಳು ಶೇ 100ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಒಬ್ಬ ವಿದ್ಯಾರ್ಥಿಗೆ ಒಟ್ಟು 683 ಅಂಕಗಳನ್ನು ನೀಡಲಾಗಿದೆ. ಮತ್ತೊಬ್ಬ ವಿದ್ಯಾರ್ಥಿಗೆ ಹಿಂದಿ ಭಾಷಾ ಪತ್ರಿಕೆಯಲ್ಲಿ 111 ಅಂಕಗಳು ಬಂದಿವೆ.

ಹೌದು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಶುಕ್ರವಾರ ಪ್ರಕಟಿಸಿದ್ದ 2025-26ನೇ ಸಾಲಿನ ದ್ವಿತೀಯ ಪಿಯು ಫಲಿತಾಂಶದಲ್ಲಿ ತಾಂತ್ರಿಕ ದೋಷದ ಕಾರಣ ಪುನರಾವರ್ತಿತ ವಿದ್ಯಾರ್ಥಿಗಳಲ್ಲಿ 14 ಮಂದಿಗೆ ಗರಿಷ್ಠ ಅಂಕಗಳಿಗಿಂತ ಹೆಚ್ಚು ಅಂಕಗಳನ್ನು ನೀಡಲಾಗಿತ್ತು. ಮಾಹಿತಿ ಬಹಿರಂಗವಾಗುತ್ತಿದ್ದಂತೆ ಪರೀಕ್ಷಾ ಮಂಡಳಿ ಲೋಪಕ್ಕೆ ವಿಷಾದ ವ್ಯಕ್ತಪಡಿಸಿದೆ.

ತಮಗೆ ಬಂದಿರುವ ಫಲಿತಾಂಶವನ್ನು ನೋಡಿ ಆಶ್ಚರ್ಯಗೊಂಡ ವಿದ್ಯಾರ್ಥಿಗಳು ತಕ್ಷಣ ಮಂಡಳಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ತಕ್ಷಣ ಎಲ್ಲ ವಿದ್ಯಾರ್ಥಿಗಳ ಫಲಿತಾಂಶವನ್ನು ಪುನರಾವಲೋಕನ ನಡೆಸಿ, ತಪ್ಪನ್ನು ಸರಿಪಡಿಸಲಾಗಿದೆ.

'2024 ಮತ್ತು 2025ನೇ ಸಾಲಿನ ಖಾಸಗಿ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳು ಇಲ್ಲದ ಕಾರಣ ಫಲಿತಾಂಶ ನೀಡುವಾಗ ಅವರು ಪಡೆದ 80 ಅಂಕಗಳನ್ನು 100 ಅಂಕಗಳಿಗೆ ಪರಿವರ್ತಿಸಿ ನೀಡಬೇಕಾಗುತ್ತದೆ. ಪ್ರೋಗ್ರಾಮಿಂಗ್ ವೇಳೆ ಆದ ತಾಂತ್ರಿಕ ದೋಷದಿಂದ ಫಲಿತಾಂಶದಲ್ಲಿ ಲೋಪವಾಗಿದೆ. ಆದರೆ, ಮೊದಲ ಬಾರಿಗೆ ಪರೀಕ್ಷೆ ಬರೆದವರ ಫಲಿತಾಂಶದಲ್ಲಿ ಯಾವುದೇ ಲೋಪ ಅಥವಾ ವ್ಯತ್ಯಾಸ ಆಗಿಲ್ಲ' ಎಂದು ಮಂಡಳಿ ಅಧ್ಯಕ್ಷ ಪ್ರಕಾಶ್ ನಿಟ್ಟಾಲಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಕಾರ್ಮಿಕರ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರ

ಬೆಂಗಳೂರು: ಹುಲಿಕಲ್ ಘಾಟಿ ತಿರುವಿನಲ್ಲಿ ರಸ್ತೆ ತಡೆಗೋಡೆ ನಿರ್ಮಾಣ ಕಾಮಗಾರಿಯ ವೇಳೆ ಮಣ್ಣು ಕುಸಿದು ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi P.O., Bangalore - 560 072.

TENDER NOTIFICATION

No: ISEC/Regr/Estate/2026-27/01 10 April, 2026

Sealed short term tenders are invited for Procurement of required furniture, appliances and fabrication works at Dr V K R V Rao Hostel Building at ISEC for **Rs 29 lakhs** (approx) from the reputed Bengaluru based suppliers/contractors. Interested agencies may collect the tender by paying **Rs.1000/-** by cash / DD / Pay Order of any scheduled bank drawn in favour of "The Registrar, Institute for Social and Economic Change, Bengaluru", from Estate Office at the above address from **13.04.2026** to **17.04.2026.** Last Date for submission of scheduled tender: **27 April 2026**. Tenders will be opened on **28 Apr 2026** at **11.00 a.m.** in the Committee Room. Interested Tenderers may be present while opening the tenders.

Sd/-
Registrar ISEC
DIPR/CP/149/Shirdi Sai/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
ಸಂಖ್ಯೆ:ಎಸ್‌ಯುಪಿ(1)C-74/2025-26 ದಿನಾಂಕ: 24.03.2026

ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ **Consumables** ಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 06.05.2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **kppp.karnataka.gov.in** ನ್ನು ಸಂಪರ್ಕಿಸಲು ಕೋರಿದೆ.

Tender number : DHFWS/2026-27/IND2404

ಸಹಿ/- ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
DIPR/DK/KSMCA/66/26-27 dt. 10.04.2026

ಕರ್ನಾಟಕ ಗ್ರಾಮೀಣ ಬ್ಯಾಂಕ್
(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್)
ಪ್ರಧಾನ ಕಚೇರಿ: ನಂ. 32 ಸಂಗನಕಲ್ ರಸ್ತೆ, ಗಾಂಧಿನಗರ, ಬಳ್ಳಾರಿ – 583103
Phone : (08392) 470023, 470024, 470025, & 470026 Mob-9845652671
e-mail: iciw.inspection@kgbk.in
ತಪಾಸಣಾ ವಿಭಾಗ

ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಸಮಕಾಲೀನ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಕೆಲಸಗಳಿಗಾಗಿ ಬಾಹ್ಯ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳ ನಿಯೋಜನೆ

ಭಾರತದಲ್ಲಿನ ಒಂದು ಪ್ರಮುಖ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಆಗಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್, ಕರ್ನಾಟಕದ ಎಲ್ಲಾ ಜಿಲ್ಲೆಗಳಾದ್ಯಂತ 1750 ಶಾಖೆಗಳನ್ನು ಹೊಂದಿದ್ದು, ಇದೀಗ ತನ್ನ ಶಾಖೆಗಳಲ್ಲಿನ, ಕಚೇರಿಗಳಲ್ಲಿನ ಮತ್ತು ಇನ್ನಿತರ ಆಡಳಿತಾತ್ಮಕ ಘಟಕಗಳಲ್ಲಿನ ಸಮಕಾಲೀನ ಲೆಕ್ಕ ಪರಿಶೋಧನಾ ಕೆಲಸಕ್ಕೆ ನೆರವು ಪಡೆಯಲೆಂದು, ಬಾಹ್ಯ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳನ್ನು ನಿಯೋಜಿಸಿಕೊಳ್ಳಲು ಉದ್ದೇಶಿಸಿರುತ್ತದೆ.

ಅರ್ಹತಾ ಮಾನದಂಡ, ಸಂಭಾವನೆ ಮತ್ತು ಇನ್ನಿತರ ವಿವರಗಳನ್ನು ಬ್ಯಾಂಕ್‌ನ https://karnatakagb.bank.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಗಳು ಡೌನ್‌ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು.

ಸಂಪೂರ್ಣ ಭರ್ತಿ ಮಾಡಿದ ಅರ್ಜಿಯನ್ನು ಬ್ಯಾಂಕ್‌ನ ಪ್ರಧಾನ ಕಚೇರಿ, ಬಳ್ಳಾರಿ ವಿಳಾಸದಲ್ಲಿ ಸ್ವೀಕರಿಸಲು ಕೊನೆಯ ದಿನಾಂಕ: 02.05.2026.

ಅಧಿಸೂಚನೆ ಮತ್ತು ಅರ್ಜಿ ನಮೂನೆ ಡೌನ್‌ಲೋಡ್ ಮಾಡಿಕೊಳ್ಳಲು, ದಯವಿಟ್ಟು ಬ್ಯಾಂಕ್‌ನ ವೆಬ್‌ಸೈಟ್‌ಗೆ ಭೇಟಿನೀಡಿ.
https://karnatakagb.bank.in -> Menu -> Others -> Empanelment - > Empanelment of External Chartered Accountant Firms for Concurrent Audit related works in Karnataka Grameena Bank.

ದಿನಾಂಕ: 10.04.2026
ಸಹಿ/- ಮಹಾ ಪ್ರಬಂಧಕರು, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಧಾನ ಕಚೇರಿ: ಬಳ್ಳಾರಿ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯವರ ಕಛೇರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಹೊಸೂರು ರಸ್ತೆ, ಬೆಂಗಳೂರು ನಗರ ಜಿಲ್ಲೆ. ದೂ.ಸಂಖ್ಯೆ: 080-29752324
ಇ-ಮೇಲ್: dwd.ddwo@gmail.com
ಸಂ:ಜಿಅಂಕಅ/ಬೆಂನಜಿ/80/2025-26 ದಿನಾಂಕ:06.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಬರುವ ವಿಧಾನಸಭಾ ಕ್ಷೇತ್ರಗಳ ಮಾನ್ಯ ಶಾಸಕರು/ಪರಿಷತ್ ಸದಸ್ಯರು/ಮಾನ್ಯ ಲೋಕಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ಮೋಟಾರು ವಾಹನಗಳನ್ನು ಇ-ಟೆಂಡರ್ **(website:https://kppp.karnataka.gov.in/#/portal-home)** ಮೂಲಕ ಖರೀದಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಟೆಂಡರ್ ಪ್ರಾರಂಭ ದಿನಾಂಕ: **06.04.2026. ಪ್ರೀ-ಬಿಡ್ ದಿನಾಂಕ:18.04.2026,** ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **06.05.2026ಕ್ಕೆ** ನಿಗದಿಪಡಿಸಲಾಗಿದೆ. ಆದ್ದರಿಂದ ಅರ್ಹ ತಯಾರಕರು/ಸರಬರಾಜುದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಹೊಸೂರು ರಸ್ತೆ, ಬೆಂಗಳೂರು ನಗರ ಜಿಲ್ಲೆ, **ದೂರವಾಣಿ ಸಂಖ್ಯೆ:080-29752324 ಇ-ಮೇಲ್: dwd.ddwo@gmail.com** ಸಂಪರ್ಕಿಸಲು ತಿಳಿಸಿದೆ.

ಸಹಿ/- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
ವಾಸಾಸಂಇ/ಉನಿ-ಸಿ.ಪಿ/145/ಕೆಎಸ್‌ಎಂಸಿಎ/2026-27

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
BANGALORE THE IT CAPITAL OF INDIA
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಖ್ಯೆ 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020
ನಂ: KSEDC/P038/2026-27 ದಿನಾಂಕ: 10.04.2026

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ನಿಯಮದನ್ವಯ ಕೆಪಿಪಿಪಿ ಪೋರ್ಟ್‌ಲ್ ಮುಖಾಂತರ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **Short Term E-Tender for engagement of Chartered Accountants/ Firms for the Internal Audit work of KEONICS (Call-2)** ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 10 ದಿನಗಳ ಅವಧಿಗೆ ಓಪನ್ ಇ-ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ
1	KEONICS/2026-27/SE0133	Short Term E-Tender for engagement of Chartered Accountants/ Firms for the Internal Audit work of KEONICS (Call-2)	**21.04.2026**

DIPR/CP/140/SA/2026-27
ಸಹಿ/- ನಿರ್ದೇಶಕರು (ತಾಂತ್ರಿಕ)

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಸಂ:02/2026-2027 ದಿನಾಂಕ:09.04.2026

ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರುಗಳ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **KW-4** ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https:// kppp.karnataka.gov.in** ಮುಖಾಂತರ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು.

ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ **ದಿನಾಂಕ:15.04.2026 ರಂದು ಬೆಳಿಗ್ಗೆ 11.00** ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು **ದಿನಾಂಕ:10.04.2026** ರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ: 23.04.2026 ಸಂಜೆ 4.00 ಘಂಟೆವರೆಗೆ** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24.04.2026 ಸಂಜೆ 4.30 ಘಂಟೆವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 27.04.2026 ಬೆಳಿಗ್ಗೆ 11.00 ಗಂಟೆ** ನಂತರಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ **ದಿನಾಂಕ:28.04.2026 ಬೆಳಿಗ್ಗೆ 11.00 ಗಂಟೆಗೆ** ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ-ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 9 ತಿಂಗಳು ಒಟ್ಟು2 (ಎರಡು), ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ.890.00** ಲಕ್ಷಗಳು ಕನಿಷ್ಠ ಅಂದಾಜು ಮೊತ್ತ **ರೂ.810.00 ಲಕ್ಷಗಳು** ಇ.ಎಂ.ಡಿ. ಬೆಲೆ ಇ-ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/037/2026-27
ಸಹಿ/- ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ

ಕಂದಾಯ ಇಲಾಖೆ
ಸಹಾಯಕ ಆಯುಕ್ತರ ಕಚೇರಿ
ಮೈಸೂರು ಉಪವಿಭಾಗ, ಮೈಸೂರು 2ನೇ ಮಹಡಿ, ಹೊಸ ಡಿಸಿ ಕಚೇರಿ ಕಟ್ಟಡ, ಮೈಸೂರು- ಬನ್ನೂರು ರಸ್ತೆ, ಸಿದ್ಧಾರ್ಥನಗರ, ಮೈಸೂರು. ದೂರವಾಣಿ: 0821-2422100, ಫ್ಯಾಕ್ಸ್: 0821-2422100, ಇ-ಮೇಲ್: mysac1@yahoo.com
No: MYSAC-MAG/2/2024 Date 09-04-2026

ಸಾರ್ವಜನಿಕ ಪ್ರಕಟಣೆ

ಅಪರಾಧ ಸಂ.0060/2021, 0003/2022 ಮತ್ತು 0009/2021 (ಸೋಲಾರ್ ಪ್ರಾಜೆಕ್ಟ್) ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ, 2004 ರ ಕಲಂ 7(2) ರ ಅನ್ವಯ ಭದ್ರತೆ ಸಾಲ ಕೊಟ್ಟವರಿಂದ ಮತ್ತು ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳಿವಳಿಕೆ.

ಕ್ಲೇಮು ಅರ್ಜಿಗಳನ್ನು ಉಪವಿಭಾಗಾಧಿಕಾರಿಗಳ ಕಛೇರಿ, ಮೈಸೂರು ಉಪವಿಭಾಗ, 2ನೇ ಮಹಡಿ, ನೂತನ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಮೈಸೂರು - ಬನ್ನೂರು ರಸ್ತೆ, ಸಿದ್ಧಾರ್ಥನಗರ, ಮೈಸೂರು-570005 ರವರ ಕಛೇರಿಯಲ್ಲಿ ಠೇವಣಿದಾರರು/ಅಧಿಕೃತ ಪ್ರತಿನಿಧಿ/ನಾಮಿನಿದಾರರಿಗೆ ವಿತರಿಸಲಾಗುವುದು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮು ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ.

ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ:	15.04.2026	10-00 AM
ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ	14.05.2026	05-30 PM

ಹೆಚ್ಚಿನ ವಿವರಗಳಿಗಾಗಿ ಮತ್ತು ಸಲ್ಲಿಸಬೇಕಾದ ದಾಖಲೆಗಳ ಪಟ್ಟಿಗಾಗಿ https://sploca.org/

ಸಹಿ/-
ಸಹಾಯಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರಿಗಳು
ಅಪರಾಧ ಸಂ..0060/2021, 0003/2022 ಮತ್ತು 0009/2021 (ಸೋಲಾರ್ ಪ್ರಾಜೆಕ್ಟ್)
DIPR/CP/148/NR/2026-27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಸೋಮಗುದ್ದು ರಸ್ತೆ, ಚಳ್ಳಕೆರೆ.
ದೂ.ಸಂ: 08195-200307E.Mail I.D.: ubpee06@gmail.com
ಸಂಖ್ಯೆ: ವಿಜನಿನಿ/ಭಮೇಯೋ/ಕಾಇಂ ವಿ-6/ಚಳ್ಳಕೆರೆ/ಟೆಂಡರ್ ಪ್ರಕಟಣೆ/2026-27/12 ದಿನಾಂಕ: 09.04.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನಂ.148, ಎಂಬೆಸಿ ಸ್ಕ್ವೇರ್, ಇನ್‌ಫ್ಯಾಂಟರಿ ರೋಡ್, ಬೆಂಗಳೂರು-560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಚಳ್ಳಕೆರೆ ಕಛೇರಿ ವ್ಯಾಪ್ತಿಯಲ್ಲಿ 4701 ಟಿ.ಎಸ್.ಪಿ. ಲೆಕ್ಕಶೀರ್ಷಿಕೆಯಡಿ ಬರುವ ಕಾಮಗಾರಿಗೆ ಸಂಬಂಧಿಸಿದಂತೆ ದ್ವಿ-ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು ಕಾಮಗಾರಿಯ ಇಂಡೆಂಟ್ ಸಂ. 499 ಟೆಂಡರ್‌ಗಿಟ್ಟ ಮೊತ್ತ ಕ್ರಮವಾಗಿ, ರೂ. 126.66 ಲಕ್ಷಗಳು ಇರುತ್ತದೆ. ಗುತ್ತಿಗೆದಾರರು ಕಾಮಗಾರಿಗೆ ಬಿಡ್ ಸಲ್ಲಿಸುವ ಅಂತಿಮ ದಿನಾಂಕ: 24.04.2026 (ಸಂಜೆ 5.00 ಗಂಟೆ ವರೆಗೆ), ಕಾಮಗಾರಿಗಳ ತಾಂತ್ರಿಕ ಬಿಡ್ಡನ್ನು ದಿನಾಂಕ: 27.04.2026 ರಂದು ಬೆಳಿಗ್ಗೆ 11.00 ಗಂಟೆಗೆ ವಿಭಾಗ ಕಛೇರಿಯಲ್ಲಿ ತೆರೆಯಲಾಗುವುದು. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪೂರ್ವಭಾವಿ (ಪ್ರೀ ಬಿಡ್) ಸಭೆಯನ್ನು ದಿನಾಂಕ: 17.04.2026 ರಂದು ಬೆಳಿಗ್ಗೆ 11.30 ಗಂಟೆಗೆ ಮಾನ್ಯ ಮುಖ್ಯ ಇಂಜಿನಿಯರ್‌ರವರ ಕಚೇರಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ ಇಲ್ಲಿ ನಿಗಧಿಪಡಿಸಲಾಗಿರುತ್ತದೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಅರ್ಹಗುತ್ತಿಗೆದಾರರು www.kppp.karnataka.gov.in ಅಂತರ್‌ಜಾಲ ಪೋರ್ಟಲ್ ಮೂಲಕ ಎಲ್ಲಾ ವಿವರಗಳನ್ನು ಪಡೆದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

DIPR/CTA/KSMCA/25/2026-27
ಸಹಿ/ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭ.ಮೇ.ಯೋ. ವಿಭಾಗ ನಂ.06, ಚಳ್ಳಕೆರೆ.

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ
ದಿನಾಂಕ: 10-04-2025

ಟೆಂಡರ್ ಪ್ರಕಟಣೆ-01
(ಇ-ಪ್ರಕ್ಯೂರ್ಮೆಂಟ್ ಪದ್ಧತಿಯಲ್ಲಿ e-procurment portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಂದ 2025-26ನೇ ಸಾಲಿನ 2024-25ನೇ ಸಾಲಿನ **Infrastructure for Karnataka Public School (4202-01-201-0-06(139))** ಲೆಕ್ಕ ಶೀರ್ಷಿಕೆ ಯೋಜನೆಯಡಿ ಇ-ಪ್ರಕ್ಯೂರ್ಮೆಂಟ್ ಪದ್ಧತಿಯಲ್ಲಿ **(Standard Tender Documents for Procurment of Works)** ನ ನಿಭಂದನೆಗೊಳಪಟ್ಟಂತೆ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಇ-ಪ್ರಕ್ಯೂರ್‌ಮೆಂಟ್ ನಮೂದಿಸಿದ ದಿನಾಂಕದಂದು **Government of Karnataka e-procurement portal WEB site https://www.kppp.karnataka.gov.in** ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ.ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ
	2024-25ನೇ ಸಾಲಿನ Infrastructure for Karnataka Public School (4202-01-201-0-06(139))				
1	Constructions of 3 Class rooms to Primary School Section and 3 Class Room to High School Section in K. P. S Bidkalkatte of Kundapura Taluk. (RDPR/2025-26/BD/WORK_INDENT25661)	106.47	89.05	178109.00	3ನೇ ದರ್ಜೆ ಮೇಲ್ಪಟ್ಟು

Tender Should coat separately of each Items in web Sit Portal
1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 10-04-2026 ರಿಂದ 22-04-2026 ರ 4.30.00 ಗಂಟೆಯವರೆಗೆ.
2. ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ ದಿನಾಂಕ 23-04-2026 4.30.01 ಗಂಟೆಯ ನಂತರ.

ಇನ್ನಿತರೆ ನಿಬಂಧನೆಗಳು. ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು **WEB site https://www.kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ.

ಕರ್ನಾಟಕ ಸೋಪ್ & ಡಿಟರ್ಜೆಂಟ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
An ISO-9001:2015 & 14001:2015 Company
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂಖ್ಯೆ: 5531, ಬೆಂಗಳೂರು-ಪುಣೆ ಹೆದ್ದಾರಿ, ಬೆಂಗಳೂರು-560 055,
ದೂರವಾಣಿ ಸಂಖ್ಯೆ: 080-22164879, 22164886 ಜಾಲತಾಣ: www.mysoresandal.org ಇ-ಮೇಲ್: ksdl.dgmmtls@gmail.com
ದಿನಾಂಕ: 10.04.2026

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ **(https://kppp.karnataka.gov.in/)** ದ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2026-27/IND1211	ಗುವಾಕ್‌ವುಡ್ (Guaiacwood oil) ಖರೀದಿ	7800 ಕೆಜಿ	09.04.2026	24.04.2026
2	KSDL/2026-27/IND1212	ಸ್ಯಾಂಡಲ್ ಮೈಸೂರ್ ಕೋರ್ (Sandal Mysore Core) (SMC) ಖರೀದಿ	17300 ಕೆಜಿ	09.04.2026	24.04.2026
3	KSDL/2026-27/IND1213	ಡೈ ಈಥೈಲ್ ಥಾಲೇಟ್ (Diethyl Phthalate) (DEP) ಖರೀದಿ	273000 ಕೆಜಿ	09.04.2026	24.04.2026
4	KSDL/2026-27/IND1214	ಸೂಪರ್ ಸಾಂಟೋಲ್ (Super Santol) ಖರೀದಿ	50900 ಕೆಜಿ	09.04.2026	11.05.2026
5	KSDL/2026-27/IND1215	ಪಚೋಲಿ ಆಯಿಲ್ (Patchouli Oil) ಖರೀದಿ	17600 ಕೆಜಿ	09.04.2026	11.05.2026
6	KSDL/2026-27/IND1216	ಅಮೈರಿಸ್ ಆಯಿಲ್ (Amyris Oil) ಖರೀದಿ	13200 ಕೆಜಿ	09.04.2026	24.04.2026
7	KSDL/2026-27/IND1218	ಟೆಟ್ರಾಮೀಥೈಲ್ ಪರ್ ಹೈಡ್ರೋನಾಪ್ಥೊ ಫ್ಯೂರಾನ್ ಆಂಬ್ರೋಕ್ಸನ್ (Tetramethyl perhydronaptho furan Ambroxan) ನ ಖರೀದಿ	900 ಕೆಜಿ	10.04.2026	14.05.2026
8	KSDL/2026-27/IND1219	ಕುಮರಿನ್ ಕ್ರಿಸ್ಟಲ್ (Coumarin crystals) ನ ಖರೀದಿ	29500 ಕೆಜಿ	10.04.2026	14.05.2026
9	KSDL/2026-27/IND1220	ಕ್ಲೋವ್ ಲೀಫ್ ಆಯಿಲ್ (Clove Leaf Oil) ನ ಖರೀದಿ	45900 ಕೆಜಿ	10.04.2026	14.05.2026
10	KSDL/2026-27/IND1221	ಹ್ಯಾಬನೊಲೈಡ್/ಗ್ಲೋಬಲೈಡ್ (Habanolide/Globalide) ನ ಖರೀದಿ	8300 ಕೆಜಿ	10.04.2026	14.05.2026
11	KSDL/2026-27/IND1222	ಸಿಟ್ರೊನೆಲೋಲ್ (Citronellol) ನ ಖರೀದಿ	25700 ಕೆಜಿ	10.04.2026	14.05.2026
12	KSDL/2026-27/IND1223	ಜೆರೇನಿಯಂ ಆಯಿಲ್ (Geranium Oil) ನ ಖರೀದಿ	8500 ಕೆಜಿ	10.04.2026	14.05.2026

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.
ಸಹಿ/- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಪ್ರಜಾವಾಣಿ

ಶಾಂತಿ ಮಾತುಕತೆ ಇನ್ನೂ ಅನಿಶ್ಚಿತ

ಹೊರ್ಮುಜ್ ಮುಚ್ಚಿರುವುದು, ಲೆಬನಾನ್ ಮೇಲಿನ ಇಸ್ರೇಲ್ ದಾಳಿಯೇ ಒಪ್ಪಂದಕ್ಕೆ ಪ್ರಮುಖ ಅಡ್ಡಿ

ದುಬೈ/ ಬೈರುತ್ / ಜೆರುಸಲೆಂ/ ಇಸ್ಲಾಮಾಬಾದ್ (ರಾಯಿಟರ್ಸ್, ಎಪಿ): ಪಶ್ಚಿಮ ಏಷ್ಯಾದಲ್ಲಿ ಯುದ್ಧ ನಿಲ್ಲಿಸಿ ಶಾಂತಿ ಸ್ಥಾಪಿಸುವ ಕುರಿತ ಮಾತುಕತೆಗೆ ಇಸ್ಲಾಮಾಬಾದ್‌ನಲ್ಲಿ ವೇದಿಕೆ ಸಜ್ಜಾಗಿದ್ದರೂ, ಕೆಲ ವಿವಾದಗಳಿಂದಾಗಿ ಕದನ ವಿರಾಮ ಒಪ್ಪಂದಕ್ಕೆ ತಾರ್ಕಿಕ ಅಂತ್ಯ ಸಿಗುವ ಬಗ್ಗೆ ಶುಕ್ರವಾರವೂ ಅನಿಶ್ಚಿತತೆ ಮುಂದುವರಿಯಿತು.

ಹೊರ್ಮುಜ್ ಜಲಸಂಧಿಯನ್ನು ಶುಕ್ರವಾರ ಮುಚ್ಚಲಾಗಿದ್ದು, ಲೆಬನಾನ್‌ನಲ್ಲಿ ಹಿಜ್ಬುಲ್ಲಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿಗಳನ್ನು ನಡೆಸಿದೆ. ಈ ಬೆಳವಣಿಗೆಗಳು ತಾತ್ಕಾಲಿಕ ಕದನ ವಿರಾಮ ಒಪ್ಪಂದದ ಉಲ್ಲಂಘನೆ ಎಂದು ಕ್ರಮವಾಗಿ ಅಮೆರಿಕ ಹಾಗೂ ಇರಾನ್ ಪ್ರತಿಪಾದಿಸಿವೆ. ಈ ಅಂಶಗಳು ಕೂಡ ಶಾಂತಿ ಮಾತುಕತೆ ಮೇಲೆ ವ್ಯಾಪಕ ಪರಿಣಾಮ ಬೀರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ ಎಂದೇ ವಿಶ್ಲೇಷಿಸಲಾಗುತ್ತಿದೆ.

ಇಸ್ಲಾಮಾಬಾದ್‌ನ ಐಷಾರಾಮಿ ಹೋಟೆಲ್‌ವೊಂದರಲ್ಲಿ ಅಮೆರಿಕ ಮತ್ತು ಇರಾನ್ ನಿಯೋಗಗಳು ಮಾತುಕತೆ ನಡೆಸುವುದು ನಿಗದಿಯಾಗಿದೆ.

ಎರಡು ವಾರಗಳ ಕದನ ವಿರಾಮ ಜಾರಿಗೊಂಡು ಎರಡು ದಿನ ಕಳೆದಿವೆ. ಈ ಅವಧಿಯಲ್ಲಿ, ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ದಾಳಿ ನಡೆಸಿಲ್ಲ. ಆದರೆ, ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಿ, ಜಾಗತಿಕ ಇಂಧನ ಬಿಕ್ಕಟ್ಟು ನಿವಾರಿಸುವ ನಿಟ್ಟಿನಲ್ಲಿ ಯಾವುದೇ ಪ್ರಗತಿ ಕಂಡುಬಂದಿಲ್ಲ.

'ತೈಲ ಹೊತ್ತ ಹಡಗುಗಳು ಹೊರ್ಮುಜ್ ಮೂಲಕ ಸಾಗುವುದಕ್ಕೆ ಅನುಮತಿ ನೀಡುವ ಕುರಿತು ಇರಾನ್ ಕೈಗೊಂಡಿರುವ ಕ್ರಮಗಳು ತೃಪ್ತಿಕರವಾಗಿಲ್ಲ. ನಾವು ಮಾಡಿಕೊಂಡಿರುವ ಒಪ್ಪಂದ 'ಇದಲ್ಲ'' ಎಂದು ಹೇಳುವ ಮೂಲಕ, ಎರಡು ವಾರಗಳ ಕದನ ವಿರಾಮದ ಪರಿಣಾಮ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮಾನ ವ್ಯಕ್ತಪಡಿಸಿದ್ದಾರೆ.

'ಹೊರ್ಮುಜ್ ಮೂಲಕ ಸಾಗುವ ಹಡಗುಗಳಿಗೆ ಇರಾನ್ ಶುಲ್ಕ ವಿಧಿಸುತ್ತಿದೆ ಎಂಬ ವರದಿಗಳಿವೆ. ಅವರು(ಇರಾನ್) ಈ ರೀತಿ ಶುಲ್ಕ ವಿಧಿಸುತ್ತಿರುವುದು ಸರಿಯಲ್ಲ. ಒಂದು ವೇಳೆ ಶುಲ್ಕ ಸಂಗ್ರಹ ಮಾಡುತ್ತಿದ್ದಲ್ಲಿ, ಅದನ್ನು ತಕ್ಷಣವೇ ನಿಲ್ಲಿಸಬೇಕು' ಎಂದು ಟ್ರಂಪ್ ಅವರು 'ಟ್ರೂತ್ ಸೋಷಿಯಲ್'ನಲ್ಲಿ ಬರೆದುಕೊಂಡಿದ್ದಾರೆ.

ಪ್ರತ್ಯೇಕ ಪೋಸ್ಟ್‌ವೊಂದನ್ನು ಮಾಡಿರುವ ಅವರು, 'ತೈಲ ಹೊತ್ತ ಹಡಗುಗಳು ಯುದ್ಧನೌಕೆಗಳ ಅಡೆತಡೆ ಇಲ್ಲದೇ ಮತ್ತೆ ಸಂಚರಿಸಲಿವೆ' ಎಂದಿದ್ದು, ಹೆಚ್ಚಿನ ವಿವರಗಳನ್ನು ನೀಡಿಲ್ಲ.

ಕೊಲ್ಲಿಯ ದಕ್ಷಿಣದಲ್ಲಿ ಸಿಲುಕಿರುವ ನೂರಾರು ಹಡಗುಗಳು ಸಾಗುವುದಕ್ಕೆ ಅನುಕೂಲ ಮಾಡಿಕೊಡಲು ಹೊರ್ಮುಜ್ ಜಲಸಂಧಿಯನ್ನು ತೆರೆಯಬೇಕು ಎಂಬ ಷರತ್ತು ಏಪ್ರಿಲ್ 7ರಂದು ಘೋಷಿಸಲಾದ ಎರಡು ವಾರಗಳ ಕದನ ವಿರಾಮ ಒಪ್ಪಂದವು ಒಳಗೊಂಡಿದೆ ಎಂಬುದು ಗಮನಾರ್ಹ.

'ಎರಡು ವಾರಗಳ ಕದನ ವಿರಾಮದ ಅವಧಿಯಲ್ಲಿ, ಹೊರ್ಮುಜ್ ಮೂಲಕ ಸಾಗುವ ಹಡಗುಗಳಿಂದ ಇರಾನ್ ಶುಲ್ಕ ಸಂಗ್ರಹಿಸಲಿದೆ. ಈ ಶುಲ್ಕವನ್ನು ಕ್ರಿಪ್ಟೊ ಕರೆನ್ಸಿ ರೂಪದಲ್ಲಿ ಪಾವತಿಸಬೇಕು ಎಂಬುದು ಇರಾನ್ 'ಬೇಡಿಕೆ'' ಎಂದು ಇರಾನ್‌ನ ತೈಲ, ಅನಿಲ ಮತ್ತು ಪೆಟ್ರೋಕೆಮಿಕಲ್ ಉತ್ಪನ್ನಗಳ ರಫ್ತುದಾರರ ಒಕ್ಕೂಟದ ವಕ್ತಾರ ಹಮೀದ್ ಹುಸ್ಸೇನಿ 'ಫೈನಾನ್ಷಿಯಲ್ ಟೈಮ್ಸ್'ಗೆ ತಿಳಿಸಿದ್ದಾರೆ.

ತೈಲ ಬಿಡುಗಡೆ ಮಾಡಿದ ಜಪಾನ್: ಮೇ ತಿಂಗಳಿನಿಂದ ಹೆಚ್ಚುವರಿಯಾಗಿ 20 ದಿನಗಳಿಗೆ ಆಗುವಷ್ಟು ತೈಲವನ್ನು ಮೀಸಲು ಸಂಗ್ರಹದಿಂದ ಬಿಡುಗಡೆ ಮಾಡಲಾಗುವುದು ಎಂದು ಜಪಾನ್ ಪ್ರಧಾನಿ ಸನೆ ತಕೈಚಿ ಹೇಳಿದ್ದಾರೆ.

ತನ್ನ ಒಟ್ಟು ಬೇಡಿಕೆಯ ಶೇ95ರಷ್ಟು ತೈಲಕ್ಕೆ ಸಂಬಂಧಿಸಿ ಜಪಾನ್, ಕೊಲ್ಲಿ ರಾಷ್ಟ್ರಗಳನ್ನೇ ಅವಲಂಬಿಸಿದೆ.

ಕಚ್ಚಾ ತೈಲ ರಫ್ತು ಅಬಾಧಿತ: ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಯುದ್ಧ ಮಾಡುತ್ತಿದ್ದರು ಕೂಡ ಇರಾನ್‌ನ ಕಚ್ಚಾ ತೈಲ ರಫ್ತು ಅಬಾಧಿತವಾಗಿಯೇ ನಡೆಯುತ್ತಿದೆ.

ಚೀನಾದಲ್ಲಿನ ಸಣ್ಣ ಮತ್ತು ಸ್ವತಂತ್ರ ತೈಲ ಸಂಸ್ಕರಣಾ ಘಟಕಗಳು ಅಧಿಕ ಪ್ರಮಾಣದಲ್ಲಿ ಇರಾನ್‌ನಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತವೆ. ಯುದ್ಧ ಹಾಗೂ ಅಮೆರಿಕ ವಿಧಿಸಿರುವ ನಿರ್ಬಂಧಗಳಿಂದಾಗಿ ಇರಾನ್ ರಿಯಾಯಿತಿ ದರದಲ್ಲಿ ಕಚ್ಚಾ ತೈಲವನ್ನು ಮಾರಾಟ ಮಾಡುತ್ತಿದೆ.

ಅಮೆರಿಕ ಮತ್ತು ಇರಾನ್ ನಿಯೋಗಗಳ ನಡುವೆ ಶಾಂತಿ ಮಾತುಕತೆ ನಿಗದಿಯಾಗಿರುವ ಸ್ಥಳ ಇರುವ ಇಸ್ಲಾಮಾಬಾದ್‌ನ 'ರೆಡ್ ಝೋನ್' ಬಳಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿರುವುದು ಶುಕ್ರವಾರ ಕಂಡುಬಂತು –ಎಎಫ್‌ಪಿ ಚಿತ್ರ

ಮಾತುಕತೆ ಬಳಿಕ ಶಾಂತಿ ಸ್ಥಾಪನೆ ಕುರಿತ ಒಪ್ಪಂದ ಏರ್ಪಡದಿದ್ದಲ್ಲಿ ಇರಾನ್ ಮೇಲೆ ಹೊಸದಾಗಿ ದಾಳಿ ನಡೆಸಲಾಗುವುದು. ಇದಕ್ಕಾಗಿ ಶಸ್ತ್ರ ಸಜ್ಜಿತ ಯುದ್ಧನೌಕೆಗಳನ್ನು ಸಜ್ಜುಗೊಳಿಸಲಾಗುತ್ತಿದೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಇಸ್ರೇಲ್ ದಾಳಿಯಲ್ಲಿ 13 ಸಾವು: ಲೆಬನಾನ್

ಕದನ ವಿರಾಮ ಒಪ್ಪಂದದ ಭಾಗವಾಗಿ ಲೆಬನಾನ್ ಜೊತೆ ಮಾತುಕತೆ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ ಬೆನ್ನಲ್ಲೇ, ಇಸ್ರೇಲ್ ಪಡೆಗಳು ಲೆಬನಾನ್ ಮೇಲೆ ದಾಳಿ ನಡೆಸಿವೆ.

ದಕ್ಷಿಣ ಲೆಬನಾನ್‌ನಲ್ಲಿರುವ ಭದ್ರತಾ ಸಂಕೀರ್ಣ ಕಟ್ಟಡ ಗುರಿಯಾಗಿಸಿ ಇಸ್ರೇಲ್ ಪಡೆಗಳು ಶುಕ್ರವಾರ ನಡೆಸಿದ ವಾಯು ದಾಳಿಯಲ್ಲಿ 13 ಮಂದಿ ಭದ್ರತಾ ಅಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ಎನ್‌ಎನ್‌ಎ ಸುದ್ದಿಸಂಸ್ಥೆ ವರದಿ ಮಾಡಿದೆ.

ಕಳೆದ 24 ಗಂಟೆಗಳಲ್ಲಿ ಹಿಜ್ಬುಲ್ಲಾ ಬಂಡುಕೋರರಿಗೆ ಸೇರಿದ 120 ನೆಲೆಗಳ ಮೇಲೆ ಇಸ್ರೇಲ್ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ.

'ದೇಶದ ಉತ್ತರ ಭಾಗವನ್ನು ಗುರಿಯಾಗಿಸಿ ಲೆಬನಾನ್ ಗುರುವಾರ ಸಂಜೆ ಉಡ್ಡಯನ ಮಾಡಿದ್ದ 10 ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ' ಎಂದಿದೆ.

ವಂಚಿಸುವ ಯತ್ನ ಬೇಡ: ವಾನ್ಸ್ ಎಚ್ಚರಿಕೆ

ವಾಷಿಂಗ್ಟನ್/ದುಬೈ (ಎಪಿ): 'ಇಸ್ಲಾಮಾಬಾದ್‌ನಲ್ಲಿ ನಡೆಯುವ ಶಾಂತಿ ಮಾತುಕತೆ ವೇಳೆ ಇರಾನ್ ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕು. ಒಂದು ವೇಳೆ ಅವರು ಅಮೆರಿಕಕ್ಕೆ ಮೋಸ ಮಾಡಲು ಯತ್ನಿಸಿದಲ್ಲಿ ನಾವು ಬೇರೆ ಆಲೋಚನೆಯನ್ನೇ ಮಾಡಬೇಕಾಗುತ್ತದೆ' ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ. ವಾನ್ಸ್ ಅವರು ಇರಾನ್‌ಗೆ ಶುಕ್ರವಾರ ಎಚ್ಚರಿಸಿದರು.

ಮಾತುಕತೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಇಸ್ಲಾಮಾಬಾದ್‌ಗೆ ತೆರಳುವ ಮುನ್ನ ವಾಷಿಂಗ್ಟನ್‌ನಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಅವರು ಅಮೆರಿಕ ನಿಯೋಗದ ನೇತೃತ್ವ ವಹಿಸಿದ್ದಾರೆ.

'ಮಾತುಕತೆ ಹೇಗಿರಬೇಕು ಎಂಬ ಬಗ್ಗೆ ಟ್ರಂಪ್ ಅವರು ನಮಗೆ ಸ್ಪಷ್ಟ ಮಾರ್ಗ-ಸೂಚಿಗಳನ್ನು ನೀಡಿದ್ದಾರೆ. ಇರಾನ್ ನಿಯೋಗ ಪ್ರಾಮಾಣಿಕತೆಯಿಂದ ಮಾತುಕತೆ ನಡೆಸಿದರೆ ನಮ್ಮ ಪ್ರತಿಕ್ರಿಯೆಯೂ ಮುಕ್ತವಾಗಿರಲಿದೆ' ಎಂದರು. ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಅಳಿಯ ಜರೇಡ್ ಕುಶ್ನರ್ ಅವರೂ ನಿಯೋಗದಲ್ಲಿದ್ದಾರೆ.

ಪ್ರಮುಖ ಅಂಶಗಳು

- ಕೆಂಪು ಸಮುದ್ರದ ಯಾನ್ಬು ಬಂದರಿನ ಮೂಲಕ ತೈಲ ರಫ್ತಿಗೆ ಸೌದಿ ಅರೇಬಿಯಾ ಕ್ರಮ
- ಇರಾನ್ ದಾಳಿಯಿಂದಾಗಿ ತನ್ನ ತೈಲ ಉತ್ಪಾದನೆ ಸಾಮರ್ಥ್ಯ ಪ್ರತಿದಿನ 6 ಲಕ್ಷ ಬ್ಯಾರಲ್‌ನಷ್ಟು ಕಡಿಮೆಯಾಗಿದ್ದಾಗಿ ಸೌದಿ ಅರೇಬಿಯಾ ಸರ್ಕಾರ ತಿಳಿಸಿದೆ
- ಯಾನ್ಬು ಮತ್ತು ರಾಸ್ ತನುರಾ ಬಂದರುಗಳ ಮೂಲಕ ತೈಲ ರಫ್ತು ಮಾಡಲು ಸೌದಿಯ ಆರಾಮ್ಕೊ ಮುಂದಾಗಿದ್ದು, ಮೇ ತಿಂಗಳ ಬೇಡಿಕೆ ಸಲ್ಲಿಸುವಂತೆ ತನ್ನಿಂದ ತೈಲ ಖರೀದಿಸುವ ರಾಷ್ಟ್ರಗಳಿಗೆ ಸೂಚಿಸಿದೆ
- ಗಾಜಾದಲ್ಲಿ ಶಾಂತಿ ಸ್ಥಾಪಿಸುವ ಸಂಬಂಧ ಅಮೆರಿಕ ರಚಿಸಿರುವ ಮೇಲ್ವಿಚಾರಣಾ ಸಮಿತಿಯಿಂದ ಸ್ಪೇನ್ ಅನ್ನು ಇಸ್ರೇಲ್ ಹೊರಹಾಕಿದೆ. ಇರಾನ್ ವಿರುದ್ಧದ ಯುದ್ಧದ ಸಮಯದಲ್ಲಿ ಸ್ಪೇನ್ ಸರ್ಕಾರ ಇಸ್ರೇಲ್ ವಿರೋಧಿ ಚಟುವಟಿಕೆಯಲ್ಲಿ ತೊಡಗಿತ್ತು ಎಂದು ಆರೋಪಿಸಿದೆ
- ಗುರುವಾರ ರಾತ್ರಿ ಕೊಲ್ಲಿ ರಾಷ್ಟ್ರಗಳ ಮೇಲೆ ತಾನು ಯಾವುದೇ ಕ್ಷಿಪಣಿ ದಾಳಿ ನಡೆಸಿಲ್ಲ ಎಂದು ಇರಾನ್‌ನ ಐಆರ್‌ಜಿಸಿ ಹೇಳಿದೆ

'ರೆಡ್ ಝೋನ್'ಗೆ ಭಾರಿ ಭದ್ರತೆ

ಇಸ್ಲಾಮಾಬಾದ್‌ನ ಐಷಾರಾಮಿ ಹೋಟೆಲ್‌ವೊಂದರಲ್ಲಿ ಅಮೆರಿಕ ಮತ್ತು ಇರಾನ್ ನಿಯೋಗಗಳು ಮಾತುಕತೆ ನಡೆಸಲಿದ್ದು, ಈ ಸ್ಥಳಕ್ಕೆ ಭಾರಿ ಭದ್ರತೆ ಒದಗಿಸಲಾಗಿದೆ. ನಿಯೋಗಗಳ ಆಗಮನ ಹಾಗೂ ವಾಸ್ತವ್ಯ ಸುಲಲಿತವಾಗಿರಬೇಕು ಎಂಬ ಕಾರಣಕ್ಕೆ ಗುರುವಾರ ಮತ್ತು ಶುಕ್ರವಾರ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ರಜೆ ಘೋಷಿಸಲಾಗಿತ್ತು.

ಸಭೆ ನಡೆಯುವ ಸ್ಥಳವನ್ನು 'ರೆಡ್ ಝೋನ್' ಎಂದು ಘೋಷಿಸಲಾಗಿದ್ದು, ಈ ಸ್ಥಳದಿಂದ 3 ಕಿ.ಮೀ.ನಷ್ಟು ಸುತ್ತಮುತ್ತಲಿನ ಪ್ರದೇಶದಲ್ಲಿ ಭಾರಿ ಬಂದೋಬಸ್ತ್ ಹಾಕಲಾಗಿದೆ. ಅಮೆರಿಕ ಯೋಧರು ಕೂಡ ಭದ್ರತೆಗೆ ನಿಯೋಜನೆಗೊಂಡಿದ್ದಾರೆ.

ಪಾಕ್ ಪ್ರಧಾನಿ ಪೋಸ್ಟ್ ಹಿಂದೆ ಶ್ವೇತಭವನ: ವರದಿ

ನ್ಯೂಯಾರ್ಕ್ (ಪಿಟಿಐ): 'ಅಮೆರಿಕ-ಇರಾನ್ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಅವರು 'ಎಕ್ಸ್'ನಲ್ಲಿ ಪ್ರಕಟಿಸಿದ ಪೋಸ್ಟ್‌ನ ಹಿಂದೆ ಶ್ವೇತಭವನದ ನೇರ ಪಾತ್ರ ಇದೆ' ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಹೇಳಿದೆ.

ಉಭಯ ದೇಶಗಳು ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಏ.7ರಂದು ರಾತ್ರಿ ಶರೀಫ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಆದರೆ, ಅವರ ಪೋಸ್ಟ್‌ನಲ್ಲಿ 'ಪಾಕಿಸ್ತಾನಿ ಪ್ರಧಾನಿ ಎಕ್ಸ್ ಸಂದೇಶದ ಕರಡು' ಎಂಬ ಶೀರ್ಷಿಕೆ ಹಾಗೆಯೇ ಉಳಿದುಕೊಂಡಿತ್ತು. ಅಮೆರಿಕ ಸಿದ್ಧಪಡಿಸಿಕೊಟ್ಟ ಸಂದೇಶವನ್ನು ಯಥಾವತ್ತಾಗಿ ಪಾಕ್ ಪ್ರಧಾನಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಟೀಕೆಗಳು ವ್ಯಕ್ತವಾಗಿದ್ದವು. ಇದರ ಬೆನ್ನಲ್ಲೇ, ಪೋಸ್ಟ್‌ನಲ್ಲಿದ್ದ ತಲೆಬರಹವನ್ನು ಪಾಕ್ ಅಳಿಸಿಹಾಕಿತ್ತು.

'ಶರೀಫ್ ಎಕ್ಸ್‌ನಲ್ಲಿ ಪೋಸ್ಟ್ ಮಾಡುವುದಕ್ಕೂ ಕೆಲವೇ ನಿಮಿಷ ಮುನ್ನವಷ್ಟೇ ಶ್ವೇತಭವನವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಹಿ ಹಾಕಿತ್ತು. ಇರಾನ್ ಜತೆಗೆ ಕದನ ವಿರಾಮ ಒಪ್ಪಂದಕ್ಕೆ ಬರಲು ಅಮೆರಿಕ ಈ ಪ್ರಸ್ತಾವವನ್ನು 'ಕೊನೆಯ ಹಂತದ ಸಾರ್ವಜನಿಕ ಮನವಿ'ಯಾಗಿ ರೂಪಿಸಿತ್ತು. ಪಾಕ್ ಪ್ರಧಾನಿಯ ಪೋಸ್ಟ್ ಕೂಡ 'ಟ್ರಂಪ್ ಮಾತಿನ ಧಾಟಿಯಲ್ಲೇ ಇತ್ತು' ಎಂದು ನ್ಯೂಯಾರ್ಕ್ ಟೈಮ್ಸ್ ಹೇಳಿದೆ.

ಟ್ರಂಪ್ ಸಿದ್ಧಪಡಿಸಿಕೊಟ್ಟ ಹೇಳಿಕೆಯನ್ನು ಪಾಕ್ ಪ್ರಧಾನಿ ಪೋಸ್ಟ್ ಮಾಡಿದ್ದಾರೆ ಎಂಬ ಆರೋಪವನ್ನು ಶ್ವೇತಭವನ ಅಲ್ಲಗಳೆದಿದೆ.

ವಾಯುದಾಳಿ; ಕಮಲ್ ಖರಾಝಿ ಸಾವು

ದುಬೈ (ಎಪಿ): ಕಳೆದ ವಾರ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಇರಾನ್ ವಿದೇಶಾಂಗ ಇಲಾಖೆಯ ಮಾಜಿ ಸಚಿವ ಕಮಲ್ ಖರಾಝಿ ಶುಕ್ರವಾರ ಮೃತಪಟ್ಟಿದ್ದಾರೆ ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ ಮಾಧ್ಯಮಗಳು ವರದಿ ಮಾಡಿವೆ.



ಕಮಲ್ ಖರಾಝಿ

ಇರಾನ್‌ನ ಸುಧಾರಣಾವಾದಿ ಅಧ್ಯಕ್ಷ ಮೊಹಮ್ಮದ್ ಖತಾಮಿ ಸಂಪುಟದಲ್ಲಿ ಕಮಲ್ ಖರಾಝಿ ವಿದೇಶಾಂಗ ಮಂತ್ರಿಯಾಗಿದ್ದರು. ನಂತರ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಅವರಿಗೆ ವಿದೇಶಾಂಗ ಇಲಾಖೆಯ ಸಲಹೆಗಾರರಾಗಿದ್ದರು.

ಖ್ವಾಜಾ ಅಸಹ್ಯಕರ ಹೇಳಿಕೆ; ಇಸ್ರೇಲ್

ಜೆರುಸಲೇಂ (ಪಿಟಿಐ): ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅವರ ಅಸಹ್ಯಕರ ಹೇಳಿಕೆಯನ್ನು ಕಟುವಾಗಿ ಖಂಡಿಸಿರುವ ಇಸ್ರೇಲ್, ಪಾಕಿಸ್ತಾನವು ತಟಸ್ಥ ಮಧ್ಯಸ್ಥಿಕೆದಾರ ಪಾತ್ರ ವಹಿಸಿದ ಕುರಿತು ಅನುಮಾನ ವ್ಯಕ್ತಪಡಿಸಿದೆ.



ಖ್ವಾಜಾ ಆಸಿಫ್

'ಇಸ್ರೇಲ್ ಸರ್ವನಾಶದ ಕುರಿತು ಖ್ವಾಜಾ ಆಸಿಫ್ ಅವರ ಹೇಳಿಕೆಯು ಅತಿರೇಕವಾದುದು' ಎಂದು ಇಸ್ರೇಲ್‌ನ ಪ್ರಧಾನ ಮಂತ್ರಿ ಕಚೇರಿ 'ಎಕ್ಸ್'ನಲ್ಲಿ ತಿಳಿಸಿದೆ.

'ಶಾಂತಿ ಸ್ಥಾಪನೆಗಾಗಿ ತಟಸ್ಥ ಮಧ್ಯಸ್ಥಿಕೆದಾರ ಎಂದು ಹೇಳಿಕೊಳ್ಳುವ ರಾಷ್ಟ್ರದಿಂದ ಇಂತಹ ಹೇಳಿಕೆಯನ್ನು ನಿರೀಕ್ಷಿಸಿರಲಿಲ್ಲ' ಎಂದು ಗುರುವಾರ ರಾತ್ರಿ ಪಿಎಂಒ ಕಚೇರಿ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಅಮೆರಿಕ ಹಾಗೂ ಇರಾನ್ ನಡುವೆ ತಾತ್ಕಾಲಿಕ ಕದನ ವಿರಾಮ ಜಾರಿಯಾಗಲು ನಾವೇ ಕಾರಣ ಎಂದು ಪಾಕಿಸ್ತಾನ ಹೇಳಿಕೊಂಡಿತ್ತು. ಆದಾಗ್ಯೂ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ಖ್ವಾಜಾ ಆಸಿಫ್, ಇಸ್ರೇಲ್ 'ದುಷ್ಟ ರಾಷ್ಟ್ರ'ವಾಗಿದ್ದು, ಮಾನವೀಯತೆಗೆ ಶಾಪವಾಗಿದೆ. ಯುರೋಪಿಯನ್ ಯಹೂದಿಗಳನ್ನು ಹೊಡೆದು ಹಾಕಬೇಕು' ಎಂದು ಕರೆ ನೀಡಿದ್ದರು.

'ಅಮಾಯಕ ನಾಗರಿಕರನ್ನು ಇಸ್ರೇಲ್ ಹತ್ಯೆ ಮಾಡುತ್ತಿದೆ. ಮೊದಲಿಗೆ ಗಾಜಾ, ನಂತರ ಇರಾನ್, ಈಗ ಲೆಬನಾನ್‌ನಲ್ಲಿಯೂ ಹತ್ಯೆ ಮಾಡುವುದನ್ನು ಮುಂದುವರಿಸಿದೆ. ರಕ್ತಪಾತ ನಿರಂತರವಾಗಿ ಮುಂದುವರಿದಿದೆ. ಪ್ಯಾಲೆಸ್ಟೀನ್‌ನಲ್ಲಿ ಕ್ಯಾನ್ಸರ್ ರಾಜ್ಯ ಸೃಷ್ಟಿಸಿದವರು ನರಕದಲ್ಲಿ ಸುಟ್ಟು ಬೂದಿಯಾಗಬೇಕು' ಎಂದು ಕರೆ ನೀಡಿದ್ದರು.

ಆಸಿಫ್ ಹೇಳಿಕೆಯನ್ನು ಖಂಡಿಸಿರುವ ಇಸ್ರೇಲ್‌ನ ವಿದೇಶಾಂಗ ಸಚಿವ ಗಿಡಿಯಾನ್ ಸರ್, 'ಶಾಂತಿಯ ಮಧ್ಯಸ್ಥಿಕೆ ವಹಿಸಿದೆ ಎಂದು ಹೇಳಿಕೊಳ್ಳುವ ರಾಷ್ಟ್ರದಿಂದಲೇ ರಕ್ತಸಿಕ್ತ ಹೇಳಿಕೆಯು ಹೊರಬಿದ್ದಿರುವುದು ಖಂಡನೀಯ. ತನ್ನ ನಾಶಕ್ಕೆ ಪ್ರತಿಜ್ಞೆ ಮಾಡುವ ಭಯೋತ್ಪಾದಕರನ್ನು ಇಸ್ರೇಲ್ ನಾಶಪಡಿಸಿ, ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ' ಎಂದು ತಿಳಿಸಿದ್ದಾರೆ.

'ಪಶ್ಚಿಮ ಬಂಗಾಳ: ಯುಸಿಸಿ ಜಾರಿ–ಬಿಜೆಪಿ ಭರವಸೆ'

ಪ್ರಜಾ ಮತ
ಜನತಂತ್ರದ ಹಬ್ಬ

ಕೋಲ್ಕತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಅಂಗವಾಗಿ ಬಿಜೆಪಿ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ರಾಜ್ಯದಲ್ಲಿ ಪಕ್ಷವು ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿ, ಮಹಿಳೆಯರು, ಯುವಜನರು ಮತ್ತು ರಾಜ್ಯಸರ್ಕಾರಿ ನೌಕರರಿಗೆ ನೆರವು ಸೇರಿದಂತೆ ಹಲವು ಭರವಸೆಗಳನ್ನು ನೀಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ಸಂಕಲ್ಪ ಪತ್ರ' ಹೆಸರಿನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿ, ಇದು 'ಬಂಗಾರದ ಬಂಗಾಳ'ದ ನೀಲನಕ್ಷೆ ಎಂದು ವರ್ಣಿಸಿದರು.

ಬಂಗಾಳದ ಜನರ ಆಹಾರ ಕ್ರಮದ ಮೇಲೆ ಬಿಜೆಪಿ ಪ್ರಹಾರ ನಡೆಸಲಿದೆ ಎಂಬ ಟಿಎಂಸಿ ಆರೋಪಕ್ಕೆ ಪ್ರತ್ಯುತ್ತರ ನೀಡಿದ ಅಮಿತ್ ಶಾ, 'ಮೀನು ಮತ್ತು ಮೊಟ್ಟೆ ಸೇವಿಸಲು ಯಾವುದೇ ಅಭ್ಯಂತರವಿಲ್ಲ. ಇದು ಟಿಎಂಸಿ ಸೃಷ್ಟಿಸಿರುವ ವದಂತಿಯಷ್ಟೇ' ಎಂದು ಸ್ಪಷ್ಟಪಡಿಸಿದರು.

'ಬಿಜೆಪಿ ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ಯುಸಿಸಿ ಅನುಷ್ಠಾನಗೊಂಡಿದೆ. ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಆರು ತಿಂಗಳ ಒಳಗಾಗಿ ಜಾರಿ ಮಾಡುತ್ತೇವೆ' ಎಂದು ಹೇಳಿದರು.

'ನಮ್ಮದು ವಂಶಾಡಳಿತದ ಪಕ್ಷ ಅಲ್ಲ. ಬಂಗಾಳದ ಪ್ರಜೆಯನ್ನೇ ಮುಖ್ಯಮಂತ್ರಿಯನ್ನಾಗಿ ಮಾಡುವುದಾಗಿ ಭರವಸೆ ನೀಡುತ್ತೇನೆ' ಎಂದರು.

ಬಿಜೆಪಿ ಭರವಸೆಗಳು

- ಒಳನುಸುಳುವಿಕೆ ವಿರುದ್ಧ ಶೂನ್ಯ ಸಹಿಷ್ಣುತೆ
- ಸ್ತ್ರೀಯರಿಗೆ ತಿಂಗಳಿಗೆ ₹3,000 ನೆರವು
- ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ
- ಸಾರ್ವಜನಿಕ ಸಾರಿಗೆಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ
- ನಿರುದ್ಯೋಗಿ ಯುವಜನರಿಗೆ ತಿಂಗಳಿಗೆ ₹3,000 ಭತ್ಯೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ₹15,000 ನೆರವು
- ಅಧಿಕಾರಕ್ಕೆ ಬಂದ 45 ದಿನಗಳ ಒಳಗೆ 7ನೇ ವೇತನ ಆಯೋಗ ಜಾರಿ
- ಪ್ರಧಾನಮಂತ್ರಿ ಕಿಸಾನ್ ಯೋಜನೆಯ ನೆರವು ₹9,000ಕ್ಕೆ ಏರಿಕೆ (ರಾಜ್ಯದಿಂದ ₹3,000 ಮತ್ತು ಕೇಂದ್ರದಿಂದ ₹6,000)
- ರಾಜಕೀಯ ಹಿಂಸಾಚಾರ ಕುರಿತ ತನಿಖೆಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಿರುವ ಸಮಿತಿ ರಚನೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	23,775
ಇಂದಿನ ಅಂತ್ಯ	24,050
ದಿನದ ಗರಿಷ್ಠ	24,074
	275

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು 100 ಕ್ಕೆ	₹480
12 ಕ್ಕೆ	₹72
ಮೈಸೂರು: 100 ಕ್ಕೆ	₹495

ಎನ್‌.ಆರ್‌.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹226
ಆರ್‌ಎಸ್‌ಎಸ್-5	₹220
ಗುಡ್ ಲಾಟ್	₹199

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹478-730
ದ್ವಿತಳಿ (ಬಿ.ವಿ)	₹415-830

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹800-1300
ಮಧ್ಯಮ	₹500-800
ಸಣ್ಣ	₹200-500

ಬಿಇಎಂಎಲ್: ಮೈಸೂರು ಘಟಕದಿಂದ 35 ಟನ್ ಎಲೆಕ್ಟ್ರಿಕ್ ಡಂಪ್ ಟ್ರಕ್

ಪ್ರಜಾವಾಣಿ ವಾರ್ತೆ

ಮೈಸೂರು: ರಕ್ಷಣಾ ಸಚಿವಾಲಯದ ಪಿಎಸ್‌ಯು ಕಂಪನಿಯಾದ ಬಿಇಎಂಎಲ್ ದೇಶದ ಮೊದಲ ಸ್ವದೇಶಿ ನಿರ್ಮಿತ 35 ಟನ್ ಎಲೆಕ್ಟ್ರಿಕ್ ಡಂಪ್ ಟ್ರಕ್ ಅನ್ನು ಇಲ್ಲಿನ ತನ್ನ ಸಂಕೀರ್ಣದಲ್ಲಿ ಶುಕ್ರವಾರ ಅನಾವರಣಗೊಳಿಸಿತು.

ಬಿಇಎಂಎಲ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್, ಎಸ್‌ಬಿಯು ಮುಖ್ಯಸ್ಥರು, ನಿರ್ದೇಶಕರಾದ (ಗಣಿಗಾರಿಕೆ ಮತ್ತು ನಿರ್ಮಾಣ) ಸಂಜಯ್ ಸೋಮ್ ಮತ್ತು ಮೇಧಾ ಅವರು ಅನಾವರಣಗೊಳಿಸಿದರು.

'ಮೈಸೂರಿನ ಘಟಕದಲ್ಲಿ ನಿರ್ಮಿಸಲಾದ ಈ ಟ್ರಕ್, ಸುಸ್ಥಿರ ಗಣಿಗಾರಿಕೆ ಮತ್ತು ಮೂಲಸೌಕರ್ಯ ಪರಿಹಾರಗಳತ್ತ ಪ್ರಮುಖ ಹೆಜ್ಜೆಯಾಗಿದೆ. ಇದರೊಂದಿಗೆ ಮಹತ್ವದ ಮೈಲಿಗಲ್ಲು ಸ್ಥಾಪಿಸಿದಂತಾಗಿದೆ' ಎಂದು ಕಂಪನಿ ತಿಳಿಸಿದೆ.

'ಈ ಎಲೆಕ್ಟ್ರಿಕ್ ಡಂಪ್ ಟ್ರಕ್ ಅನ್ನು ಶೂನ್ಯ ಟೈಲ್‌ಪೈಪ್ ಹೊರಸೂಸುವಿಕೆಯೊಂದಿಗೆ ಹೆಚ್ಚಿನ ಉತ್ಪಾದಕತೆ ನೀಡಲು ವಿನ್ಯಾಸಗೊಳಿಸಲಾಗಿದೆ. ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ, ಇಂಗಾಲ ಕಡಿತ ಗುರಿಯೊಂದಿಗೆ ತಯಾರಿಸಲಾಗಿದೆ. ಹೆಚ್ಚಿನ ದಕ್ಷತೆಯ ಪರ್ಮನೆಂಟ್ ಮ್ಯಾಗ್ನೆಟ್ ಸಿಂಕ್ರೊನಸ್ ಮೋಟಾರ್ (ಪಿಎಂಎಸ್‌ಎಂ)ನಿಂದ ಚಾಲಿತವಾಗಿದೆ. ಗಣಿಗಾರಿಕೆ ಪರಿಸರದಲ್ಲಿ ಕಾರ್ಯಾಚರಣೆಗಾಗಿ ವಿನ್ಯಾಸಗೊಳಿಸಲಾಗಿದೆ' ಎಂದು ಮಾಹಿತಿ ನೀಡಿದೆ.

ಬಿಇಎಂಎಲ್ ಮೈಸೂರು ಘಟಕದಿಂದ ವಿನ್ಯಾಸಗೊಳಿಸಿದ 35 ಟನ್ ಎಲೆಕ್ಟ್ರಿಕ್ ಡಂಪ್ ಟ್ರಕ್

'35 ಟನ್‌ಗಳ ಪೇಲೋಡ್ ಸಾಮರ್ಥ್ಯ ಮತ್ತು ಸುಮಾರು 60 ಟನ್‌ಗಳ ಒಟ್ಟು ವಾಹನ ತೂಕ ಹೊಂದಿದೆ. ಸಾಂಪ್ರದಾಯಿಕ ಡೀಸೆಲ್-ಚಾಲಿತ ವಾಹನಗಳಿಗಿಂತ ಹೆಚ್ಚಿನ ದಕ್ಷತೆ ಹೊಂದಿದೆ. 60ರಿಂದ 90 ನಿಮಿಷಗಳಲ್ಲಿ ಶೇ 80ರಷ್ಟು ಚಾರ್ಜ್ ಆಗುತ್ತದೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಎಲ್‌ಪಿಜಿ ಸ್ಟವ್ ಮಾದರಿಯ ವಿದ್ಯುತ್ ಸ್ಟವ್

ಪ್ರಜಾವಾಣಿ ವಾರ್ತೆ

ನವದೆಹಲಿ: ಎಲ್‌ಪಿಜಿಗೆ ಪರ್ಯಾಯವಾಗಿ ಗ್ಯಾಸ್ ಸ್ಟವ್ ಮಾದರಿಯಲ್ಲೇ ಜ್ವಾಲೆ ಹರಡುವ ವಿದ್ಯುತ್ ಸ್ಟವ್ ಪರಿಚಯಿಸಲು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆ ಮುಂದಾಗಿದೆ.

ದೇಶದಲ್ಲಿ ಈ ವಿದ್ಯುತ್ ಸ್ಟವ್ ಅನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಲು ಸಿದ್ಧತೆ ನಡೆಸುವಂತೆ ಪ್ರಲ್ಹಾದ ಜೋಶಿ ಅವರು ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ಈ ವಿದ್ಯುತ್ ಸ್ಟವ್ ಅಡುಗೆ ಅನಿಲದ ಕೊರತೆ ನೀಗಿಸುವ ಆಶಾಭಾವ ಮೂಡಿಸಿದೆ. ಹೋಟೆಲ್, ಬೇಕರಿ ಮುಂತಾದ ಆಹಾರೋದ್ಯಮಿಗಳಿಗೆ ಪರ್ಯಾಯ ಇಂಧನ ಮೂಲದ ಒಲೆಯಾಗಿ ಕಾಣಿಸುತ್ತಿದೆ. ಈ ಸ್ಟವ್ ದೊಡ್ಡ ಮಟ್ಟದಲ್ಲಿ ತಯಾರಾದರೆ 'ಆತ್ಮನಿರ್ಭರ ಭಾರತ' ಸಾಕಾರಕ್ಕೆ ಮತ್ತೊಂದು ಗರಿ ಆಗಲಿದೆ ಎಂದು ಅವರು ಹೇಳಿದರು.

ಸ್ಟವ್‌ನ ಕಾರ್ಯನಿರ್ವಹಣೆಯ ಪರಿಶೀಲಿಸಿದ ಸಚಿವ ಪ್ರಲ್ಹಾದ ಜೋಶಿ

ಈ ಸ್ಟವ್‌ನಲ್ಲಿ ಹೆಚ್ಚು ಶಾಖವೂ ಇರುತ್ತದೆ. ಮಾತ್ರವಲ್ಲದೆ, ಕಾರ್ಬನ್ ಸಹ ಹೊರ ಸೂಸುವುದಿಲ್ಲ. ನಿಜವಾಗಿ ನಾನು ಸಹ ಈ ಹೊಸ ತಂತ್ರಜ್ಞಾನದಿಂದ ಪ್ರಭಾವಿತನಾಗಿದ್ದೇನೆ ಎಂದಿದ್ದಾರೆ ಪ್ರಲ್ಹಾದ ಜೋಶಿ.

ಚುನಾವಣೆ ಪ್ರಣಾಳಿಕೆಯಲ್ಲಿ ಉಚಿತ ಭರವಸೆ ನೀಡುವ ರಾಜಕೀಯ ಪಕ್ಷಗಳ ಕ್ರಮ ಸರಿಯೇ?

● ಸರಿ ● ತಪ್ಪು ● ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	32969-37029
ಕೋಕ	16869-34029
ಫ್ಯಾಕ್ಟರಿ	12019-29589
ಹಳೆಚಾಲಿ	48999-50599
ಹೊಸಚಾಲಿ	44029-48699
ಪುತ್ತೂರು	
ಕೋಕ	20000-34500
ಹೊಸತು	30000-50000
ಶಿವಮೊಗ್ಗ	
ಸರಕು	60119-97340
ಬೆಟ್ಟೆ	46119-64500
ರಾಶಿ	41669-55699
ಗೊರಬಲು	19010-40501
ಸಿದ್ದಾಪುರ	
ಬಿಳಿಗೋಟು	26599-39619
ಚಾಲಿ	42099-49399
ಕೋಕ	20012-34569
ಕೆಂಪುಗೋಟು	23699-34299
ರಾಶಿ	42899-53899
ತಟ್ಟಿಬೆಟ್ಟೆ	35089-50211
ಶಿರಸಿ	
ಬೆಟ್ಟೆ	40699-52399
ಬಿಳಿಗೋಟು	26100-39169
ಚಾಲಿ	44099-49511
ಕೆಂಪುಗೋಟು	24011-36899
ರಾಶಿ	50410-55199
ಯಲ್ಲಾಪುರ	
ಅಪಿ	58870-58870
ಬಿಳಿಗೋಟು	18899-42969
ಚಾಲಿ	39119-49809
ಕೋಕ	18000-35262
ಕೆಂಪುಗೋಟು	18899-42969
ರಾಶಿ	49621-57899
ತಟ್ಟಿಬೆಟ್ಟೆ	38761-50469

ಜಿಡಿಪಿ: ಶೇ 6.9ರಷ್ಟು ಪ್ರಗತಿ–ಎಡಿಬಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ 6.9 ಮತ್ತು 2027–28ರಲ್ಲಿ ಶೇ 7.3ರಷ್ಟಾಗಲಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಅಂದಾಜಿಸಿದೆ.

ದೇಶದಲ್ಲಿ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಸದೃಢವಾಗಿರುವುದೇ ಪ್ರಗತಿ ಏರಿಕೆಗೆ ಕಾರಣವಾಗಿದೆ ಎಂದು ಶುಕ್ರವಾರ ತಿಳಿಸಿದೆ. ಈ ಮೊದಲು 2026–27ರಲ್ಲಿ ಜಿಡಿಪಿ ಬೆಳವಣಿಗೆ ಶೇ 6.5ರಷ್ಟು ಇರಲಿದೆ ಎಂದು ಹೇಳಿತ್ತು.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ದರ ಹೆಚ್ಚಳವಾಗಿದೆ ಮತ್ತು ವ್ಯಾಪಾರಕ್ಕೆ ಅಡಚಣೆ ಉಂಟಾಗಿದೆ. ಇದು ದೇಶದ ಬೆಳವಣಿಗೆಯ ಮೇಲೆ ಒತ್ತಡ ಉಂಟು ಮಾಡಬಹುದು ಎಂದು ಹೇಳಿದೆ.

ಚುನಾವಣೆ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮ ಬೀರಲಿದೆ ಬಿಜೆಪಿ ನಡೆ: ಖರ್ಗೆ ಕಳವಳ

ಕ್ಷೇತ್ರ ಮರುವಿಂಗಡಣೆ: ರಾಜಕೀಯ ಲಾಭಕ್ಕೆ ಹುನ್ನಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಹಾಗೂ ವಿಧಾನಸಭೆಗಳ ಸ್ಥಾನ ಹೆಚ್ಚಿಸುವ ಕೇಂದ್ರ ಬಿಜೆಪಿ ಸರ್ಕಾರದ ಪ್ರಸ್ತಾವಿತ ಕ್ಷೇತ್ರ ಮರು ವಿಂಗಡಣೆಯು ಭಾರತದ ಚುನಾವಣಾ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಳವಳ ವ್ಯಕ್ತಪಡಿಸಿದರು.

ಮಹಿಳಾ ಮೀಸಲಾತಿ ಮಸೂದೆ ಹಾಗೂ ಕ್ಷೇತ್ರ ಮರುವಿಂಗಡಣೆ ಮಸೂದೆಗಳ ಅಂಗೀಕಾರಕ್ಕಾಗಿ ನಡೆಯುವ ಸಂಸತ್‌ನ ಬಜೆಟ್ ಅಧಿವೇಶನದ ಕುರಿತು ಕಾರ್ಯತಂತ್ರ ರೂಪಿಸಲು ಶುಕ್ರವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ವಿಧಾನಸಭಾ ಚುನಾವಣೆಗಳಲ್ಲಿ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಮಹಿಳಾ ಮೀಸಲು ಮಸೂದೆಗೆ ಅವಸರದಿಂದ ಅಂಗೀಕಾರ ಪಡೆಯಲು ಹೊರಟಿದೆ. ದೀರ್ಘ ಮೌನದ ನಂತರ ಮಹಿಳಾ ಮೀಸಲಾತಿ ವಿಷಯದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಇದ್ದಕ್ಕಿದ್ದಂತೆ ಸಕ್ರಿಯವಾಗಿದೆ ಎಂದು ಅವರು ಹೇಳಿದರು.

ವಿಧಾನಸಭಾ ಚುನಾವಣೆಗಳ ಮಧ್ಯದಲ್ಲಿ ಮಸೂದೆಗಳನ್ನು ಅಂಗೀಕರಿಸುವ ಸರ್ಕಾರದ ಉದ್ದೇಶವು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಆದರೆ, ಗೃಹ ಸಚಿವಾಲಯದ ಅಧೀನ ಕಚೇರಿಯಂತೆ ಕಾರ್ಯನಿರ್ವಹಿಸುತ್ತಿರುವ ಚುನಾವಣಾ ಆಯೋಗವು ನಮ್ಮ ಕಳವಳಗಳನ್ನು ಗಮನಿಸುತ್ತದೆ ಎಂಬ ನಿರೀಕ್ಷೆಯೂ ಇಲ್ಲ ಎಂದರು.

ಮಸೂದೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಲೇಖನದಿಂದ ಕೆಲವು ವಿವರಗಳನ್ನು ತಿಳಿದುಕೊಂಡಿದ್ದೇವೆ. ಆದರೆ, ಯಾವುದೇ ಔಪಚಾರಿಕ ಪ್ರಸ್ತಾವನೆ ಸ್ವೀಕರಿಸಿಲ್ಲ ಎಂದು ಒತ್ತಿ ಹೇಳಿದ ಅವರು, ಲೋಕಸಭಾ ಕ್ಷೇತ್ರಗಳನ್ನು ಶೇ 50ರಷ್ಟು ಹೆಚ್ಚಿಸುವ ಯೋಜನೆ ಬಗ್ಗೆ ಆಳವಾದ ಹಾಗೂ ಎಚ್ಚರಿಕೆಯ ಚರ್ಚೆ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಏಪ್ರಿಲ್ 29ರಂದು ವಿಧಾನಸಭೆಗಳ ಚುನಾವಣೆ ಮುಗಿದ ನಂತರ ಈ ವಿಷಯದ ಬಗ್ಗೆ ಸರ್ವಪಕ್ಷ ಸಭೆ ಕರೆಯಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸಿದ್ದವು. ಸರ್ಕಾರವು ನಮ್ಮ ಮನವಿಯನ್ನು ನಿರ್ಲಕ್ಷಿಸಿತು. ಸರ್ಕಾರದ ವಿರುದ್ಧದ ಅಭಿಪ್ರಾಯವನ್ನು ಬದಲಾಯಿಸುವ ಉದ್ದೇಶದಿಂದ ಮಸೂದೆ ಮಂಡನೆಗೆ ಮುಂದಾಗಿದೆ ಎಂದು ಅವರು ಹೇಳಿದರು.

ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದಲ್ಲಿ ಹೆಚ್ಚಿನ ಸಂಸದರು ಪ್ರಚಾರ ಕಾರ್ಯದಲ್ಲಿ ನಿರತವಾಗಿರುವ ಸಂದರ್ಭದಲ್ಲಿ ಅಧಿವೇಶನ ಕರೆಯುವ ಅಗತ್ಯ ಏನಿತ್ತು ಎಂದು ಪ್ರಶ್ನಿಸಿದ ಅವರು, 'ಮೋದಿ ನೇತೃತ್ವದ ಸರ್ಕಾರಕ್ಕೆ ಇದು ಹೊಸದೇನಲ್ಲ. ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವುದು ಮತ್ತು ಅನಿಯಂತ್ರಿತ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಭ್ಯಾಸವಾಗಿದೆ. ಇಂತಹ ಧೋರಣೆಯನ್ನು ನಾವು ನಿರಂತರವಾಗಿ ವಿರೋಧಿಸುತ್ತಿದ್ದೇವೆ' ಎಂದು ಅವರು ಹೇಳಿದರು.

'ಮಹಿಳೆಯರು ಮತ್ತು ಸಮಾಜದ ದುರ್ಬಲ ವರ್ಗಗಳ ಕಲ್ಯಾಣದಂತಹ ವಿಷಯಗಳ ಬಗ್ಗೆ ನಮಗೆ ಯಾರಿಂದಲೂ ಪ್ರಮಾಣಪತ್ರದ ಅಗತ್ಯ ಇಲ್ಲ. 2023ರಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ನೀಡಿದ ಬೆನ್ನಲ್ಲೇ, ಶೇ 33 ಕೋಟಾವನ್ನು ತಕ್ಷಣವೇ ಜಾರಿಗೆ ತರಬೇಕೆಂದು ಒತ್ತಾಯಿಸಿದ್ದೆವು' ಎಂದರು.

ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು. ಪಕ್ಷ ನಾಯಕ ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ಪ್ರಿಯಾಂಕಾ ಗಾಂಧಿ ವಾದ್ರಾ, ಜೈರಾಮ್ ರಮೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಇದ್ದರು

ಕ್ಷೇತ್ರ ಮರುವಿಂಗಡಣೆ ವಿರುದ್ಧ ಜಂಟಿ ಕಾರ್ಯತಂತ್ರ

ಸಂಸತ್ತಿನ ಅಧಿವೇಶನಕ್ಕೂ ಮುನ್ನ ಜಂಟಿ ಕಾರ್ಯತಂತ್ರ ರೂಪಿಸಲು ವಿರೋಧ ಪಕ್ಷಗಳ ಸಭೆ ಕರೆಯುವುದಾಗಿ ಕಾಂಗ್ರೆಸ್ ಶುಕ್ರವಾರ ತಿಳಿಸಿದೆ.

ಸಂಸತ್ತು ಮತ್ತು ವಿಧಾನಸಭಾ ಕ್ಷೇತ್ರಗಳನ್ನು ಶೇ 50ರಷ್ಟು ಹೆಚ್ಚಿಸುವ ಕ್ಷೇತ್ರ ಮರುವಿಂಗಡಣಾ ಸೂತ್ರವನ್ನು ಪ್ರಶ್ನಿಸಲು ಕಾಂಗ್ರೆಸ್ ಮುಂದಾಗಿದೆ. ಈ ಸೂತ್ರವು ಸಣ್ಣ ರಾಜ್ಯಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಪಕ್ಷ ಕಳವಳ ವ್ಯಕ್ತಪಡಿಸಿದೆ.

ಖರ್ಗೆ ಅವರು ಇದೇ 15ರಂದು ವಿಪಕ್ಷ ನಾಯಕರ ಸಭೆ ಕರೆಯಲಿದ್ದಾರೆ. ಆ ಸಭೆಯಲ್ಲಿ ವಿಪಕ್ಷ ನಾಯಕರ ಅಭಿಪ್ರಾಯ ಪಡೆದು ಸಾಮಾನ್ಯ ಕಾರ್ಯತಂತ್ರ ರೂಪಿಸಲು ಪಕ್ಷ ಯೋಜಿಸಿದೆ.

ಕಾರ್ಯಕಾರಿ ಸಮಿತಿ ಸಭೆ ಬಳಿಕ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಸುದ್ದಿಗೋಷ್ಠಿ ನಡೆಸಿ, 'ನಮಗೆ ಕಳವಳ ಇರುವುದು ಕ್ಷೇತ್ರ ಮರುವಿಂಗಡಣೆಯ ಸೂತ್ರದ ಬಗ್ಗೆ. ಈ ವಿಷಯದ ಬಗ್ಗೆ ನಮ್ಮ ಜತೆಗೆ ಯಾವುದೇ ಮಾಹಿತಿ ಹಂಚಿಕೊಂಡಿಲ್ಲ' ಎಂದರು.

ಕರ್ನಾಟಕ ಮತ್ತು ತೆಲಂಗಾಣದಂತಹ ದೊಡ್ಡ ರಾಜ್ಯಗಳು ಮಾತ್ರವಲ್ಲದೆ ಹಿಮಾಚಲ ಪ್ರದೇಶದಂತಹ ಸಣ್ಣ ರಾಜ್ಯಗಳು ಶೇ 50 ಪ್ರಸ್ತಾವನೆಯ ಬಗ್ಗೆ ಕಳವಳ ವ್ಯಕ್ತಪಡಿಸಿವೆ. ಸರ್ಕಾರದ ಈಗಿನ ಪ್ರಸ್ತಾವನೆ ಅಸಂವಿಧಾನಿಕ, ಕಾನೂನುಬಾಹಿರ ಎಂದು ಅವರು ಹೇಳಿದರು.

ಈಕ್ವಿಟಿ ಎಂ.ಎಫ್: ಶೇ 56ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): 'ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್ (ಎಂ.ಎಫ್) ಯೋಜನೆಗಳಲ್ಲಿ ಮಾರ್ಚ್ ತಿಂಗಳಿನಲ್ಲಿ ₹40,450 ಕೋಟಿ ನಿವ್ವಳ ಒಳಹರಿವು ಆಗಿದೆ' ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಶುಕ್ರವಾರ ತಿಳಿಸಿದೆ.

ಫೆಬ್ರುವರಿ ತಿಂಗಳಿನಲ್ಲಿ ₹25,978 ಕೋಟಿ ಹೂಡಿಕೆ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 56ರಷ್ಟು ಹೆಚ್ಚು ಒಳಹರಿವಾಗಿದೆ. ಮಾರುಕಟ್ಟೆಯಲ್ಲಿನ ಏರಿಳಿತ ಮತ್ತು ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಅನಿಶ್ಚಿತತೆಯ ನಡುವೆಯೂ ಹೂಡಿಕೆದಾರರು ಈಕ್ವಿಟಿ ಮಾರುಕಟ್ಟೆಯ ಮೇಲೆ ಇಟ್ಟಿರುವ ನಂಬಿಕೆಯನ್ನು ಇದು ಪ್ರತಿಬಿಂಬಿಸುತ್ತಿದೆ ಎಂದು ತಿಳಿಸಿದೆ. 2025ರ ಜುಲೈನಲ್ಲಿ ಈಕ್ವಿಟಿ ಎಂ.ಎಫ್ ನಲ್ಲಿ ₹42,702 ಕೋಟಿ ಒಳಹರಿವಾಗಿತ್ತು. ಇದಾದ ಬಳಿಕ ಮಾರ್ಚ್‌ನಲ್ಲಿ ಹೆಚ್ಚು ಹೂಡಿಕೆ ಆಗಿದೆ.

ಫ್ಲೆಕ್ಸಿ ಕ್ಯಾಪ್ ಫಂಡ್‌ನಲ್ಲಿ ₹10 ಸಾವಿರ ಕೋಟಿ ಒಳಹರಿವಾಗಿದೆ. ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ₹6,263 ಕೋಟಿ ಮತ್ತು ಮಿಡ್ ಕ್ಯಾಪ್‌ನಲ್ಲಿ ₹6,063 ಕೋಟಿ ಮತ್ತು ಹೂಡಿಕೆಯು ಹೆಚ್ಚಿದೆ. ಇದು ಒಟ್ಟಾರೆ ಒಳಹರಿವಿನ ಪ್ರಮಾಣದ ಏರಿಕೆಗೆ ಕಾರಣವಾಗಿದೆ ಎಂದು ಹೇಳಿದೆ.

ಮಾರ್ಚ್‌ನಲ್ಲಿ ಈ ಉದ್ಯಮದ ಸಂಪತ್ತಿನ ನಿವ್ವಳ ನಿರ್ವಹಣಾ ಮೌಲ್ಯವು (ಎಯುಎಂ) ₹73.73 ಲಕ್ಷ ಕೋಟಿಯಾಗಿದೆ.

ಮ್ಯೂಚುವಲ್ ಫಂಡ್‌ನಲ್ಲಿನ ಖಾತೆಗಳ ಸಂಖ್ಯೆಯು ಮಾರ್ಚ್‌ನಲ್ಲಿ 27.39 ಕೋಟಿಗೆ ಹೆಚ್ಚಳವಾಗಿದೆ. ಫೆಬ್ರುವರಿಯಲ್ಲಿ 27.05 ಕೋಟಿಯಷ್ಟಿದ್ದು, 33.63 ಲಕ್ಷ ಖಾತೆಗಳು ಹೊಸದಾಗಿ ಸೇರ್ಪಡೆ ಆಗಿವೆ.

'ಮ್ಯೂಚುವಲ್ ಫಂಡ್ ಉದ್ಯಮದಲ್ಲಿ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಸ್ಥಿರವಾಗಿ ಹೆಚ್ಚುತ್ತಿದೆ. ಇದು ಹೂಡಿಕೆದಾರರು ಮ್ಯೂಚುವಲ್ ಫಂಡ್ ಮೂಲಕ ದೀರ್ಘಾವಧಿ ಸಂಪತ್ತು ಸೃಷ್ಟಿಗೆ ಆದ್ಯತೆ ನೀಡುತ್ತಿರುವುದನ್ನು ಪ್ರತಿಬಿಂಬಿಸುತ್ತಿದೆ' ಎಂದು ಎಎಂಎಫ್‌ಐನ ಮುಖ್ಯ ಕಾರ್ಯನಿರ್ವಾಹಕ ವೆಂಕಟ್ ಚಲಸಾನಿ ಹೇಳಿದ್ದಾರೆ.

ಎಸ್‌ಐಪಿ: ಫೆಬ್ರುವರಿ ತಿಂಗಳಿನಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆಯಲ್ಲಿ (ಎಸ್‌ಐಪಿ) ₹29,845 ಕೋಟಿ ಹೂಡಿಕೆ ಆಗಿತ್ತು. ಇದು ಮಾರ್ಚ್‌ನಲ್ಲಿ ₹32,087 ಕೋಟಿಗೆ ಏರಿಕೆಯಾಗಿದೆ. ಇದು ಶಿಸ್ತುಬದ್ಧ, ವ್ಯವಸ್ಥಿತ ಹೂಡಿಕೆಗೆ ಹೆಚ್ಚುತ್ತಿರುವ ಆದ್ಯತೆಯನ್ನು ತೋರಿಸುತ್ತಿದೆ ಎಂದು ಎಎಂಎಫ್‌ಐ ತಿಳಿಸಿದೆ. ಎಸ್‌ಐಪಿಯ ಒಟ್ಟು ಎಯುಎಂ ₹15.10 ಲಕ್ಷ ಕೋಟಿಯಷ್ಟಾಗಿದೆ. ಖಾತೆಗಳ ಸಂಖ್ಯೆ 9.71 ಕೋಟಿಯಾಗಿದೆ.

ಚಿನ್ನದ ಇಟಿಎಫ್ ಇಳಿಕೆ: ಮಾರ್ಚ್ ತಿಂಗಳಿನಲ್ಲಿ ಚಿನ್ನದ ಇಟಿಎಫ್‌ನಲ್ಲಿ ₹2,266 ಕೋಟಿಯಷ್ಟು ಒಳಹರಿವಾಗಿದೆ. ಫೆಬ್ರುವರಿಯಲ್ಲಿ ₹5,255 ಕೋಟಿ ಮತ್ತು ಜನವರಿಯಲ್ಲಿ ₹24,040 ಕೋಟಿಯಷ್ಟಿತ್ತು.

ಮೈತ್ರಿಯಿಂದ ಎಐಎಂಐಎಂ ಹೊರಕ್ಕೆ

ಹೈದರಾಬಾದ್: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೂ ಮುನ್ನ ಹುಮಾಯೂನ್ ಕಬೀರ್ ಅವರ ಆಮ್ ಜನತಾ ಉನ್ನಯನ್ ಪಕ್ಷದ (ಎಜೆಯುಪಿ) ಜತೆಗಿನ ಮೈತ್ರಿಯನ್ನು ಕಡಿದುಕೊಂಡಿರುವುದಾಗಿ ಅಸಾದುದ್ದೀನ್ ಓವೈಸಿ ನೇತೃತ್ವದ ಎಐಎಂಐಎಂ ಶುಕ್ರವಾರ ಘೋಷಿಸಿದೆ.

ಕಬೀರ್ ಅವರು ಬಿಜೆಪಿಯ ಹಿರಿಯ ನಾಯಕರ ಜತೆ ಮಾತನಾಡಿದ್ದಾರೆ ಎನ್ನಲಾದ ವಿಡಿಯೊವನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪ್ರಸಾರ ಮಾಡಿದ ನಂತರ ಈ ಕುರಿತು ವಿವಾದ ಉಂಟಾಗಿದೆ. ಇದರ ನಡುವೆಯೇ ಎಐಎಂಐಎಂ ಈ ನಿರ್ಧಾರ ತೆಗೆದುಕೊಂಡಿದೆ.

ಮುಸ್ಲಿಮರ ಸಮಗ್ರತೆಯನ್ನು ಹಾಳು ಮಾಡುವುದಕ್ಕೆ ಸಂಬಂಧಿಸಿದಂತೆ ವ್ಯಕ್ತವಾಗಿರುವ ಹೇಳಿಕೆಗಳು ಕಳವಳ ಮೂಡಿಸುತ್ತವೆ ಎಂದಿರುವ ಎಐಎಂಐಎಂ ಪಕ್ಷವು, ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ದೃಢಪಡಿಸಿದೆ.

'ಹೆದ್ದಾರಿ: ಶೇ 100ರಷ್ಟು ಭೂ ಸ್ವಾಧೀನ ಅಗತ್ಯ'

ನವದೆಹಲಿ (ಪಿಟಿಐ): 'ಹೊಸ ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ನಿರ್ಮಿಸಲು ಶೇ 100ರಷ್ಟು ಭೂಸ್ವಾಧೀನ ಅಗತ್ಯ. ಇಲ್ಲದಿದ್ದಲ್ಲಿ ಯಾವುದೇ ಹೊಸ ಯೋಜನೆಗಳಿಗೆ ಅನುಮತಿ ನೀಡಲಾಗುವುದಿಲ್ಲ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನ, ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ಅನುಮತಿ ಪಡೆಯುವುದು ಹೆದ್ದಾರಿ ಯೋಜನೆಗಳಿಗೆ ಇರುವ ಅತಿದೊಡ್ಡ ಸವಾಲುಗಳಾಗಿವೆ ಎಂದು ಶುಕ್ರವಾರ ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯ ಹೊಸ ಯೋಜನೆಗಳನ್ನು ನಿರ್ಮಿಸಬೇಕಿದ್ದರೆ ಶೇ 90ರಷ್ಟು ಭೂ ಸ್ವಾಧೀನ ಮಾಡಿಕೊಂಡಿರಬೇಕಿರುವುದು ಕಡ್ಡಾಯವಾಗಿದೆ. ಆದರೆ, ಈ ಪ್ರಮಾಣವನ್ನು ಶೇ 100ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ALTERNATE TO LPG - GO ELECTRIC
LIMITED Stock!
V-GUARD KAFF Prestige Tefal Butterfly Preethi Pigeon
Coolest Summer Finance Mela
UPTO ₹15,000 ಕ್ಯಾಶ್ ಬ್ಯಾಕ್* ಫೈನಾನ್ಸ್ ಮೇಲೆ
ನಾವು ಇ.ಎಮ್.ಐ ಕಾರ್ಡ್ ಅನ್ನು ಸ್ವೀಕರಿಸುತ್ತೇವೆ*
1 ಇ.ಎಮ್.ಐ ಉಚಿತ*
ಎಕ್ಸ್ಚೇಂಜ್ ಬೊನಾಂಜಾ
Upto 25,000
ಕಡಿತ ಎಕ್ಸ್ಚೇಂಜ್ ಮೇಲೆ*
ಕ್ಯಾಶ್ ಬ್ಯಾಕ್ ಬೊನಾಂಜಾ
Upto 20% ಕ್ಯಾಶ್ ಬ್ಯಾಕ್*
FREE HOLIDAY PACKAGE WITH FAMILY
2 NIGHTS 3 DAYS
HOLIDAY PACKAGE WORTH ₹5000
STORE LOCATOR
ನಮ್ಮ ಮಳಿಗೆಗಳು 10.00AM - 10.00PM ತೆರೆದಿರುತ್ತದೆ
Godrej 1.0 TON 3 STAR INVERTER SPLIT AIR CONDITIONER ಇ.ಎಮ್.ಐ ₹2,141
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Haier 1.0 TON 4 STAR INVERTER SPLIT AIR CONDITIONER ಇ.ಎಮ್.ಐ ₹2,691
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
VOLTAS 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,799
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
SAMSUNG 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,483
LG 1.5TON 3 STAR INVERTER SPLIT AIR CONDITIONER ಇ.ಎಮ್.ಐ ₹2,924
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
DAIKIN AIR CONDITIONERS 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,674
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
LLOYD 2.0 TON 3STAR INVERTER SPLIT AIR CONDITIONER ಇ.ಎಮ್.ಐ ₹3,583
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
WIDEST RANGE OF AIRCOOLERS & FANS
Crompton orient USHA V-GUARD KENSTAR Symphony VOLTAS BAJAJ HAVELLS
ಕೆಟಲ್ ಕುದಿಯಲು LIMITED Stock!
ರೈಸ್ ಕುಕ್ಕರ್ ಅಡುಗೆಗಾಗಿ LIMITED Stock!
ಮೈಕ್ರೋವೇವ್ ಮತ್ತು ಒಟಿಜಿ ಬೇಕಿಂಗ್‌ಗಾಗಿ LIMITED Stock!
ಏರ್ ಫ್ರೈಯರ್ ಆರೋಗ್ಯಕರ ಅಡುಗೆಗಾಗಿ LIMITED Stock!
ಗೀಸರ್ ಗ್ಯಾಸ್ ಗೀಸರ್ ಬದಲಿಗೆ LIMITED Stock!
Panasonic 27ಲೀ ಕನ್ವೆಕ್ಷನ್ ಮೈಕ್ರೋವೇವ್ ಓವನ್ ಇ.ಎಮ್.ಐ ₹1,421
LG 650ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ GL-B257DBM3 ಇ.ಎಮ್.ಐ ₹4,999
ಉಚಿತ: ₹3,315 ಮೌಲ್ಯದ BUTTERFLY PRESSURE COOKER
SAMSUNG 653ಲೀ CONVERTIBLE 5IN1 SIDE BY SIDE REFRIGERATOR RS76CG8103S9HL ಇ.ಎಮ್.ಐ ₹4,990
Godrej 600ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ ಇ.ಎಮ್.ಐ ₹5,653
ಉಚಿತ: ₹4,245 ಮೌಲ್ಯದ PREETHI MIXER GRINDER
BOSCH 334ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,791
ಉಚಿತ: ₹3,315 ಮೌಲ್ಯದ BUTTERFLY PRESSURE COOKER
Whirlpool 308ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ ಇ.ಎಮ್.ಐ ₹3,058
ಉಚಿತ: ₹4,470 ಮೌಲ್ಯದ PREETHI INDUCTION COOKTOP
Haier 190ಲೀ ಡೈರೆಕ್ಟ್ ಕೂಲ್ ಸಿಂಗಲ್ ಡೋರ್ ರೆಫ್ರಿಜರೇಟರ್ ಇ.ಎಮ್.ಐ ₹1,724
ಉಚಿತ: ₹1,895 ಮೌಲ್ಯದ PHILIPS TOASTER*
iPhone 17 /17 PRO / 17 PRO MAX ₹4,000* CASH BACK STARTS FROM ₹81,500* EMI STARTS FROM ₹3,454
SAMSUNG S26/S26+/ S26 ULTRA EFFECTIVE PRICE ₹79,999* (AFTER CASH BACK) EMI STARTS FROM ₹3,667
oppo F31 / OPPO F31/ OPPO F31+ 10% CASH BACK STARTS FROM ₹25,800* EMI STARTS FROM ₹2,150
Redmi NOTE15 / NOTE15 PRO/ NOTE15 PRO+ ₹2,000* CASH BACK ₹1,908 ONWARDS
Lenovo SLIM 3i 10% CASH BACK INTEL CORE i7 13620H 16GB RAM 512GB SSD 15.6" FHD WIN 11 MSO 24
ಇ.ಎಮ್.ಐ ₹6,333 OFFER PRICE ₹75,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
hp 15 10% CASH BACK INTEL CORE i5 16GB, 512 GB SSD 15.6 FHD WIN 11 MSO 24
ಇ.ಎಮ್.ಐ ₹5,916 OFFER PRICE ₹64,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
LG 75 INCH ULTRA HD (4K) SMART ಎಲ್ಇಡಿ 75NANO83A6A ಇ.ಎಮ್.ಐ ₹6,999
ಉಚಿತ: ₹20000 ಮೌಲ್ಯದ FIREBOLTT SMART CALLING WATCH
SAMSUNG 65 4K QLED SMART ಎಲ್ಇಡಿ QN65Q7FAAFXZA ಇ.ಎಮ್.ಐ ₹6,990
SONY 55 4K ULTRA HD SMART ಎಲ್ಇಡಿ K-55S25M2 ಇ.ಎಮ್.ಐ ₹5,500
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,166 ECO INVERTER
LG 9 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹1,897
LG SOUNDBAR S40T 2.1 CH, 300W, AI Sound Pro, Dolby Digital OFFER PRICE ₹11,990 EMI ₹1,000 MRP ₹26,990
LG SAMSUNG SONY Haier Panasonic ONIDA IFB Godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo OPPO ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS HITACHI voltas beko Butterfly Preethi ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA V-GUARD ZEBRONICS KAFF OZONE
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. EMI offers the above products based on 12,18,24 & fixed emi schemes .*Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
181 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಕಿಶೋರಿಯರ ಮೊರೆಗೆ ಕಿವಿಯಾಗೋಣ

ಋತುಮತಿಯಾದ ಹೆಣ್ಣುಮಗಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಎಷ್ಟು ಮುಖ್ಯವೋ ಆಕೆಯಲ್ಲಿ ಮೂಡುವ ಪ್ರಶ್ನೆಗಳಿಗೆ ವೈಜ್ಞಾನಿಕ ನೆಲೆಯಲ್ಲಿ ಉತ್ತರ ಸಿಗುವಂತೆ ನೋಡಿಕೊಳ್ಳುವುದೂ ಅಷ್ಟೇ ಮುಖ್ಯ.

• ಕೆ.ಎನ್.ಶ್ರೀಲತಾ

ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಯೊಂದರ ವತಿಯಿಂದ 'ಹದಿಹರೆಯದವರ ಆರೋಗ್ಯ' ಕುರಿತು ತರಬೇತಿ ಆಯೋಜಿಸಲಾಗಿತ್ತು. ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಗೆ ಪ್ರತ್ಯೇಕವಾಗಿ ಆಪ್ತಸಮಾಲೋಚನೆಯನ್ನು ವ್ಯವಸ್ಥೆಗೊಳಿಸಲಾಗಿತ್ತು. ಹೆಣ್ಣುಮಕ್ಕಳು ಆಪ್ತ ಸಮಾಲೋಚಕರ ಬಳಿ ತೆರಳಿ ಮಾತನಾಡಲು ಸಂಕೋಚಪಡುತ್ತಿದ್ದರು. 'ನಾವು ಒಬ್ಬೊಬ್ಬರಾಗಿ ಹೋಗುವುದಿಲ್ಲ, ಸ್ನೇಹಿತೆಯರ ಜೊತೆ ಹೋಗಲು ಅವಕಾಶ ಮಾಡಿಕೊಡಿ' ಎಂದು ವಿನಂತಿಸುತ್ತಿದ್ದರು. ಆದರೆ ಖಾಸಗಿತನ, ಗೋಪ್ಯತೆ ಪಾಲನೆಗೆ ಒತ್ತುಕೊಡುವ ಉದ್ದೇಶವನ್ನು ಸಂಘಟಕರು ಸ್ಪಷ್ಟಪಡಿಸಿದ ನಂತರ ಅವರು ಸಹಕರಿಸುವಂತೆ ಕಂಡುಬಂತು.

ಕೊಠಡಿಯೊಳಗೆ ತೆರಳುವ ಮುನ್ನ ಹೆಣ್ಣುಮಕ್ಕಳ ಸಂಕೋಚವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡೋಣವೆಂಬ ಉದ್ದೇಶದಿಂದ 'ಏನೆಲ್ಲಾ ಪ್ರಶ್ನೆಗಳು, ಸಮಸ್ಯೆಗಳನ್ನು ಆಪ್ತಸಮಾಲೋಚಕರ ಬಳಿ ಕೇಳುವಿರಿ?' ಎಂದು ಪ್ರಶ್ನಿಸಿದೆ. ಅವರು ಪರಸ್ಪರ ಮುಖ ನೋಡಿಕೊಂಡು ನಗುತ್ತಾ ನಾಚಿ ತಲೆ ತಗ್ಗಿಸುತ್ತಿದ್ದರೇ ವಿನಾ ಮಾತನಾಡಲಿಲ್ಲ. 'ನೀವು ಸ್ನೇಹಿತೆಯರು ಮುಟ್ಟಿನ ಸಮಸ್ಯೆಗಳ ಬಗ್ಗೆ ಗುಟ್ಟಾಗಿ ಮಾತನಾಡಿಕೊಳ್ಳುತ್ತಿರುತ್ತೀರಿ, ಅಲ್ಲವೇ? ಅಂತಹವುಗಳನ್ನು ಕೇಳಬಹುದು' ಎಂದೆ. ಅದಕ್ಕೆ ಒಬ್ಬಾಕೆ 'ಇವಳಿಗೆ ಎರಡು ತಿಂಗಳಿಂದಲೂ ಮುಟ್ಟಾಗುತ್ತಿಲ್ಲ' ಎಂದು ಸ್ನೇಹಿತೆಯೊಬ್ಬಳತ್ತ ಕೈತೋರಿದಳು. 'ಆಯಿತು, ಚಿಂತೆ ಬೇಡ. ಅದಕ್ಕೆ ಕಾರಣ ಏನೆಂದು ಒಳಗೆ ಹೋದಾಗ ತಿಳಿಸುತ್ತಾರೆ. ನಾಚಿಕೆ ಇಲ್ಲದೆ ಮಾತನಾಡಿ' ಎಂದೆ.

'ಇವತ್ತು ಕ್ಲಾಸಲ್ಲಿ ಸರ್ ಹೇಳಿರೋ ವಿಚಾರಗಳಲ್ಲಿ ನಿಮಗೆ ಏನಿಷ್ಟವಾಯಿತು?' ಎಂದು ಹುಡುಗರ ಬಳಿ ತೆರಳಿ ಪ್ರಶ್ನಿಸಿದೆ. ಯಾರೊಬ್ಬರೂ ಪ್ರತಿಕ್ರಿಯಿಸಲಿಲ್ಲ. 'ಅದೇ, ಸರ್ ಹೇಳಿದ್ರಲ್ಲಾ ಮೇಡಂ, ಅದು' ಎಂದು ಒಬ್ಬ ಹೇಳುತ್ತಿದ್ದ ಹಾಗೆ ಎಲ್ಲರೂ ಘೊಳ್ ಎಂದು ನಗಲಾರಂಭಿಸಿದರು. 'ಆಪ್ತ ಸಮಾಲೋಚನೆಯಲ್ಲಿ ಯಾವ್ಯಾವ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳಬಹುದು?' ಎಂದು ಕೇಳಿದರೂ ಪ್ರಯೋಜನವಾಗಲಿಲ್ಲ. ಹುಡುಗರು ಕೂಡ ಇಂತಹ ವಿಷಯಗಳ ಬಗ್ಗೆ ಮಾತನಾಡಲು ಸಂಕೋಚಪಡುತ್ತಾರೆಯೇ ಎಂದು ಆಶ್ಚರ್ಯವಾಯಿತು. ನಾನು ಮಹಿಳೆ ಎಂಬ ಕಾರಣ ಇರಬಹುದು ಅಥವಾ ಎಲ್ಲರ ಮುಂದೆ ಹೇಳಿಕೊಳ್ಳಲು ಸಂಕೋಚ ಎನಿಸುತ್ತಿರಬಹುದು ಎನಿಸಿತು. 'ಒಳಗೆ ಸರ್ ಇರುತ್ತಾರೆ, ಅವರೊಂದಿಗೆ ಮಾತನಾಡಲು ಸಂಕೋಚಪಡಬೇಡಿ' ಎಂದು ಹೇಳಿ ತೆರಳಿದೆ.

ಮತ್ತೊಂದು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಇದೇ ಬಗೆಯ ಚರ್ಚೆಯಲ್ಲಿ ಹೈಸ್ಕೂಲ್ ಹುಡುಗ, ಹುಡುಗಿಯರ ಜೊತೆಗೆ ವಯಸ್ಕ ಪುರುಷ ಮತ್ತು ಮಹಿಳೆಯರು ಕೂಡ ಭಾಗವಹಿಸಿದ್ದರು. 'ಹದಿಹರೆಯದವರಲ್ಲಿ ಆಗುವ ದೈಹಿಕ ಬದಲಾವಣೆಗಳು ಯಾವುವು?' ಎಂಬ ಪ್ರಶ್ನೆಗೆ ಯಥಾಪ್ರಕಾರ ಹುಡುಗಿಯರು ನಗಲಾರಂಭಿಸಿದರು. ನಾಚಿಕೆ ಬಿಟ್ಟು ಮಾತನಾಡುವಂತೆ ಪ್ರೋತ್ಸಾಹಿಸಿದ ನಂತರ ಹೆಣ್ಣುಮಕ್ಕಳು ಚರ್ಚೆಯಲ್ಲಿ ಪಾಲ್ಗೊಳ್ಳತೊಡಗಿದರು. ಆದರೆ ಹುಡುಗರು ಮಾತ್ರ ಅಚ್ಚರಿ ಎನಿಸುವಷ್ಟರ ಮಟ್ಟಿಗೆ ತಲೆ ತಗ್ಗಿಸಿ ಕುಳಿತಿದ್ದರು. ಪುರುಷ ಸಂಪನ್ಮೂಲ ವ್ಯಕ್ತಿಗಳು ಅವರನ್ನು ಮಾತನಾಡಿಸಲೇಬೇಕೆಂದು ನಡೆಸಿದ ಪ್ರಯತ್ನ ಯಶ ಸಾಧಿಸಲೇ ಇಲ್ಲ.

ಶಾರೀರಿಕ ಬದಲಾವಣೆಗಳ ಬಗ್ಗೆ ಮುಕ್ತ ಸಂವಾದದಲ್ಲಿ ತೊಡಗಲು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಷ್ಟೇ ಅಲ್ಲ ಕಾಲೇಜು ವಿದ್ಯಾರ್ಥಿಗಳಲ್ಲಿಯೂ ಹಿಂಜರಿಕೆ, ಮುಜುಗರ ಕಂಡುಬರುತ್ತದೆ. ಅದರಲ್ಲೂ ಹುಡುಗರು, ಹುಡುಗಿಯರಿಬ್ಬರನ್ನೂ ಒಂದೇ ಕಡೆ ಕಲೆಹಾಕಿ ಚರ್ಚೆ ನಡೆಸುವಾಗ, ತರಬೇತುದಾರರು ಮುಕ್ತ ಸಂವಾದದತ್ತ ಕೊಂಡೊಯ್ಯಲು ಪ್ರಜ್ಞಾಪೂರ್ವಕವಾಗಿಯೇ ಬಹಳಷ್ಟು ಪ್ರಯತ್ನ ನಡೆಸಬೇಕಾಗುತ್ತದೆ. ಆದ್ದರಿಂದ ಇಂಥ ವಿಷಯಗಳ ಬಗ್ಗೆ ತರಬೇತಿಗಳನ್ನು ಆಯೋಜಿಸುವಾಗ ಹುಡುಗರು ಮತ್ತು ಹುಡುಗಿಯರಿಗೆ ಸಂಘಟಕರು ಪ್ರತ್ಯೇಕವಾಗಿಯೇ ಚರ್ಚೆಗಳನ್ನು ಏರ್ಪಡಿಸಲು ಬಯಸುತ್ತಾರೆ.

ಇದೇಕೆ ಹೀಗೆ?

ಭಾರತದಂಥ ದೇಶದಲ್ಲಿ ಮುಟ್ಟು, ಸಂತಾನೋತ್ಪತ್ತಿ, ಲೈಂಗಿಕತೆಯಂತಹ ಸಂಗತಿಗಳು ಮಡಿವಂತಿಕೆಯ ಗಡಿಗಳ ಒಳಗೆ ಬಂಧಿಸಲ್ಪಟ್ಟಿವೆ. ಹೆಣ್ಣುಮಕ್ಕಳು ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಸಣ್ಣ ವಯಸ್ಸಿನಲ್ಲಿಯೇ ಋತುಮತಿಯರಾಗುತ್ತಿದ್ದಾರೆ. ಅಮ್ಮನ ಸೆರಗಿನ ಹಿಂದೆ ಬಚ್ಚಿಟ್ಟುಕೊಳ್ಳುತ್ತಿದ್ದವಳು ಒಮ್ಮಿಂದೊಮ್ಮೆಲೇ ಪ್ರೌಢೆ ಎನಿಸಿಕೊಳ್ಳುತ್ತಾಳೆ. 'ನೀನಿನ್ನೂ ಚಿಕ್ಕವಳು, ನಿಂಗೇನು ಗೊತ್ತಾಗುತ್ತದೆ?' ಎಂದು ಗದರುತ್ತಾ ಆಕೆಯ ಮಾತಿಗೆ ಲಕ್ಷ್ಯ ಕೊಡದೇ ಇದ್ದವರು, ಆಕೆ ಋತುಮತಿಯಾದ ಕೂಡಲೇ 'ನೀನು ದೊಡ್ಡವಳಾದೆ' ಎಂದೆನ್ನತೊಡಗುತ್ತಾರೆ. ಓಡಾಡುವ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಒಂದು ಪಟ್ಟಿಯೇ ಅವಳೆದುರು ಬರುತ್ತದೆ.

ಆಕೆಯ ಮುಜುಗರ, ನಾಚಿಕೆ, ಅಂಜಿಕೆಯಂತಹ ಭಾವನಾತ್ಮಕ ಅಂಶಗಳಿಗೆ ಸ್ಪಂದನೆಯಾಗಲೀ ಅವಳ ಅಭಿಪ್ರಾಯಕ್ಕೆ ಮನ್ನಣೆಯಾಗಲೀ ಸಿಗುವುದಿಲ್ಲ. ಈ ಸಂದರ್ಭದಲ್ಲಿ ಎದುರಾಗುವ ಅವಳ ಪ್ರಶ್ನೆಗಳಿಗೆ 'ಹಿಂದಿನಿಂದ ನಡೆಸಿಕೊಂಡು ಬಂದಿದ್ದೇವೆ', 'ನಮ್ಮ ದೇವರುಗಳಿಗೆ ಆಗಿಬರುವುದಿಲ್ಲ', 'ನೀನೊಬ್ಬೇನಾ ಹೆಣ್ಣಾಗಿದ್ದು, ನಾವೆಲ್ಲಾ ಅನುಭವಿಸಲಿಲ್ವಾ, ಅನುಸರಿಸಿಕೊಂಡು ಹೋಗಬೇಕು' ಎನ್ನುವಂತಹ ಉತ್ತರಗಳು ಸಿಗುತ್ತವೆಯೇ ವಿನಾ ವೈಜ್ಞಾನಿಕ ನೆಲೆಯಲ್ಲಿ ಉತ್ತರಿಸುವ ಪ್ರಯತ್ನಗಳು ನಡೆಯುವುದಿಲ್ಲ. ಶಾರೀರಿಕ, ಮಾನಸಿಕ, ಭಾವನಾತ್ಮಕ ಬದಲಾವಣೆಗಳನ್ನು ಎದುರಿಸುವ ದಿಸೆಯಲ್ಲಿ ಹೆಣ್ಣುಮಕ್ಕಳನ್ನು ಸಜ್ಜುಗೊಳಿಸಿರುವುದಿಲ್ಲ.

ಈ ಸಂದರ್ಭದಲ್ಲಿ ಹೆಣ್ಣುಮಕ್ಕಳಿಗೆ ಪ್ರಮುಖವಾಗಿ ಬೇಕಿರುವುದು ವ್ಯವಸ್ಥಿತ ಶೌಚಾಲಯಗಳು. ಆದರೆ ಸ್ವಚ್ಛತೆ ಇಲ್ಲದ ಶೌಚಾಲಯ, ಯಥೇಚ್ಛ ಪ್ರಮಾಣದಲ್ಲಿ ನೀರು, ಪೌಷ್ಟಿಕಾಹಾರ, ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಕೊರತೆ, ರಕ್ತ ಹೀರಲು ಬಳಸಿದ ವಸ್ತುಗಳ ವಿಲೇವಾರಿಯಲ್ಲಿ ಅವ್ಯವಸ್ಥೆ, ಮುಟ್ಟಿನ ಬಟ್ಟೆಗಳನ್ನು ಶುಚಿಯಾಗಿ ಒಗೆದು ಒಣಗಿಸಿ ಎತ್ತಿಡುವ ಅಗತ್ಯವನ್ನು ಮನಗಾಣದಿರುವುದು, ಏಕಾಂತದ ಕೊರತೆ, ಅಸುರಕ್ಷತೆಯಂತಹ ಸಮಸ್ಯೆಗಳನ್ನು ಹೆಚ್ಚಿನ ಹೆಣ್ಣುಮಕ್ಕಳು ಎದುರಿಸುತ್ತಾರೆ. ಹಲವರು ನೈರ್ಮಲ್ಯ ಪಾಲನೆಯ ಅಭಾವದಿಂದ ಸಂತಾನೋತ್ಪತ್ತಿ ಭಾಗದ ಸೋಂಕುಗಳು, ಅಸಹಜ ಡಿಸ್ಚಾರ್ಜ್‌ನಂತಹ ಸಂಕಷ್ಟಗಳಿಗೆ ಒಳಗಾಗುತ್ತಾರೆ. ಇಂತಹ ಪರಿಸ್ಥಿತಿಗಳು ಬಹುತೇಕ ಹೆಣ್ಣುಮಕ್ಕಳಲ್ಲಿ ಮುಟ್ಟೆಂಬುದು ಬೇಡದ ಪ್ರಕ್ರಿಯೆ ಎಂಬಷ್ಟರ ಮಟ್ಟಿಗೆ ಜುಗುಪ್ಸೆಯನ್ನು ಮೂಡಿಸುತ್ತವೆ. ಈ ಬಗೆಯ ತೊಂದರೆಗಳನ್ನೆಲ್ಲ ಮೌನವಾಗಿ ಸಹಿಸುವಂತೆ ಹೆಣ್ಣುಮಕ್ಕಳನ್ನು ಸಾಮಾಜೀಕರಣ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಆದ್ದರಿಂದಲೇ ಅವರು ಸಮಸ್ಯೆಗಳನ್ನು ಸಹಜವೆಂಬಂತೆ ಸ್ವೀಕರಿಸುತ್ತಾರೆ ಮತ್ತು ಮುಂದಿನ ಪೀಳಿಗೆಯನ್ನು ಸಹ ಇದೇ ರೀತಿ ಸಜ್ಜುಗೊಳಿಸಲು ಸಿದ್ಧರಾಗುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಬಾಲ ಗರ್ಭಿಣಿಯರ ಸಂಖ್ಯೆ ಏರಿಕೆಯಾಗಿರುವುದನ್ನು ತಿಳಿಸುವ ಅಂಕಿಅಂಶಗಳು, ನಾವು ಎಷ್ಟರ ಮಟ್ಟಿಗೆ ಕಿಶೋರಿಯರೊಂದಿಗೆ ಮುಕ್ತ ಸಂವಾದದಲ್ಲಿ ತೊಡಗಬೇಕಾಗಿದೆ ಎಂಬುದನ್ನು ಎತ್ತಿ ತೋರಿಸುತ್ತವೆ.

ಕಿಶೋರಾವಸ್ಥೆಯ ಮುಂದಿನ ವಯಸ್ಕ ಹಂತದ ಕೌಟುಂಬಿಕ ಜೀವನಕ್ಕೆ ಸಜ್ಜುಗೊಳಿಸುವ ದಿಸೆಯಲ್ಲಿ ಆರೋಗ್ಯ, ಲೈಂಗಿಕತೆ, ಸಂತಾನೋತ್ಪತ್ತಿ ಕುರಿತ ಜ್ಞಾನವನ್ನು, ಇಂಥ ವಿಷಯಗಳ ಬಗ್ಗೆ ಅವರು ಮುಕ್ತವಾಗಿ ಮಾತನಾಡುವಂತಹ ವಾತಾವರಣವನ್ನು ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಇಬ್ಬರಿಗೂ ಒದಗಿಸಬೇಕಾಗಿದೆ. ಸಮುದಾಯ, ಕುಟುಂಬದ ಸದಸ್ಯರು, ಶಾಲಾ ಕಾಲೇಜುಗಳು ಕಿಶೋರಿಯರ ಪ್ರಶ್ನೆಗಳಿಗೆ ಕಿವಿಯಾಗಬೇಕಾಗಿದೆ. ಅವರ ಸಮಸ್ಯೆಗಳನ್ನು ಅರಿತು, ಲಿಂಗ ಸೂಕ್ಷ್ಮಜ್ಞರಾಗಿ, ಸ್ಪಂದಿಸಿ ಪ್ರವರ್ತಿಸುವ ಸಮಾಜವೊಂದರ ನಿರ್ಮಾಣ ನಮ್ಮೆಲ್ಲರ ಹೊಣೆ. ಹಾಗಾದಾಗ ಮಾತ್ರ ಹೆಣ್ಣುಮಕ್ಕಳು ಸೃಷ್ಟಿಗೆ ಕಾರಣವಾಗುವ ಮುಟ್ಟಿನ ಬಗ್ಗೆ ಹೆಮ್ಮೆಪಡುವಂತಹ ಧೋರಣೆಯನ್ನು ಹೊಂದುವ ವಾತಾವರಣ ಸೃಷ್ಟಿಯಾಗಬಹುದು.

ಲೇಖಕಿ: ಕಾರ್ಯನಿರ್ವಾಹಕ ಟ್ರಸ್ಟಿ, ಜನನಿ ಸಮಗ್ರ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಟ್ರಸ್ಟ್

ಏನಾಯಿತು ಮೀನಾ ಕ್ಲಬ್?

ಶಾಲೆಗಳಲ್ಲಿ ಕೆಲವು ವರ್ಷಗಳ ಹಿಂದೆ ಮೀನಾ ಕ್ಲಬ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ಇದರ ಫಲವಾಗಿ ತಾಯಂದಿರ ಸಭೆಗಳು ನಡೆಯುತ್ತಿದ್ದವು. ಹೈಸ್ಕೂಲು ಹಂತದ ವಿಜ್ಞಾನ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ಋತುಸ್ರಾವ, ಸಂತಾನೋತ್ಪತ್ತಿ ಕುರಿತ ಪಾಠಗಳ ಮೂಲಕ ಹೆಣ್ಣುಮಕ್ಕಳನ್ನು ಪ್ರಜ್ಞಾವಂತರನ್ನಾಗಿಸುವ ಅವಕಾಶಗಳಿವೆ. ಆದರೆ ಇದು ವಿಜ್ಞಾನ ಶಿಕ್ಷಕರ ಆಸಕ್ತಿಯನ್ನು ಅವಲಂಬಿಸಿರುತ್ತದೆ. ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವನ್ನು ಒದಗಿಸಬೇಕೆಂಬ ಪ್ರಸ್ತಾಪ ಕೂಡ ಕೇಳಿಬರುತ್ತಿದೆ. ಮುಟ್ಟಿನ ನೈರ್ಮಲ್ಯ ನಿರ್ವಹಣೆ ಹಾಗೂ ಈ ಸಂದರ್ಭದಲ್ಲಿ ಅನುಭವಿಸುವ ದೈಹಿಕ ತೊಂದರೆಗಳ ಬಗ್ಗೆ ಹೆಣ್ಣುಮಕ್ಕಳು ಮುಕ್ತವಾಗಿ ಮಾತನಾಡುವ ವಾತಾವರಣ ಸೃಷ್ಟಿಸಿ, ಸೂಕ್ತ ತಿಳಿವಳಿಕೆ ನೀಡಬೇಕಾದ ಅಗತ್ಯವಿದೆ.

'ಎಲ್ಲಾ ನಂಗೆ ಗೊತ್ತು!'

2019ರಲ್ಲಿ ಬೆಳಗಾವಿಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಹೈಸ್ಕೂಲುಗಳ 600 ಹುಡುಗಿಯರಲ್ಲಿ 'ರಜಸ್ ಸ್ವಚ್ಛತೆಯ ಕುರಿತು ತಿಳಿವಳಿಕೆ, ಮನೋಭಾವ ಹಾಗೂ ಆಚರಣೆಗಳ ಪ್ರಾಬಲ್ಯ' ಎಂಬ ಒಂದು ಸಮೀಕ್ಷಾ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ಋತುಚಕ್ರದ ಬಗ್ಗೆ ಪೂರ್ವ ಮಾಹಿತಿ ಇಲ್ಲದ ವಿದ್ಯಾರ್ಥಿನಿಯರ ಪ್ರಮಾಣ ಶೇ 43.33ರಷ್ಟಿದ್ದರೆ, ಈ ಸಂದರ್ಭದಲ್ಲಿ ಪಾಲಿಸಬೇಕಾದ ಸ್ವಚ್ಛತೆಯ ಬಗ್ಗೆ ಶೇ 55.69ರಷ್ಟು ಹೆಣ್ಣುಮಕ್ಕಳು ಮಾತ್ರ ತಿಳಿವಳಿಕೆ ಹೊಂದಿದ್ದರು. ಶೇ 38.80ರಷ್ಟು ವಿದ್ಯಾರ್ಥಿನಿಯರು ಮೂತ್ರದ್ವಾರ ಮತ್ತು ಋತುಸ್ರಾವದ ದ್ವಾರ ಭಿನ್ನವೆಂದು ತಿಳಿದಿದ್ದರು.

ಇಂತಹ ವಿಷಯಗಳ ಬಗ್ಗೆ ತಮ್ಮ ಮಕ್ಕಳನ್ನು ಸಜ್ಜುಗೊಳಿಸಲು ಇರಬೇಕಾದ ವೈಜ್ಞಾನಿಕ ಜ್ಞಾನ ತಾಯಂದಿರಿಗೂ ಇರುವುದಿಲ್ಲ. ನಗರ ಪ್ರದೇಶಗಳ ತಾಯಂದಿರು ಈ ಬಗ್ಗೆ ಮಾತನಾಡಲು ಪ್ರಾರಂಭಿಸಿದರೆ 'ಅದೆಲ್ಲ ನಂಗೆ ಗೊತ್ತು' ಎಂದು ಹೆಣ್ಣುಮಕ್ಕಳು ಹೇಳುವುದಿದೆ. ಅಲ್ಲಿಗೆ ಬಹುತೇಕ ತಾಯಂದಿರು ಮತ್ತು ಮಕ್ಕಳ ಮಧ್ಯೆ ಈ ಬಗೆಗಿನ ಆಳವಾದ ಚರ್ಚೆಗಳು ನಡೆಯುವುದೇ ಇಲ್ಲ. ಇನ್ನು ಗಂಡುಮಕ್ಕಳನ್ನು ಈ ಬಗ್ಗೆ ಪ್ರಜ್ಞಾವಂತರನ್ನಾಗಿಸಲು ಅಪ್ಪನಾಗಲಿ, ಅಮ್ಮನಾಗಲಿ ಪ್ರಜ್ಞಾಪೂರ್ವಕವಾಗಿ ತೊಡಗುವುದು ವಿರಳ.

ಮಕ್ಕಳಾಗದಂತೆ ಇಂಜೆಕ್ಷನ್ ಅಡ್ಡಪರಿಣಾಮ ಇದೆಯೇ?

ಸ್ಪಂದನ

ಡಾ. ವೀಣಾ ಎಸ್. ಭಟ್

• **ನನಗೀಗ 29 ವರ್ಷ. ಮೊದಲ ಹೆರಿಗೆಯಾದ ಆರು ತಿಂಗಳಿಗೆ ಮುಟ್ಟಾಗಲು ಶುರುವಾಯಿತು. ಇನ್ನೂ ಎರಡು ವರ್ಷ ಮಕ್ಕಳು ಬೇಡವೆಂದು ಹತ್ತಿರದ ಆಸ್ಪತ್ರೆಯ ವೈದ್ಯರಿಂದ 'ಡಿಎಂಪಿಎ' ಚುಚ್ಚುಮದ್ದು ಹಾಕಿಸಿಕೊಂಡಿರುವೆ. ಆದರೆ, ಈಗ ನನಗೆ ಪ್ರತಿ ತಿಂಗಳು ಸರಿಯಾಗಿ ಮುಟ್ಟಾಗುತ್ತಿಲ್ಲ. ಗರ್ಭ ಧರಿಸಿರಬಹುದೇನೋ ಎಂಬ ಆತಂಕದಿಂದ ಮನೆಯಲ್ಲೇ ಪದೇ ಪದೇ ಗರ್ಭಧಾರಣೆಯ ಪರೀಕ್ಷೆ ಮಾಡಿಕೊಳ್ಳುವಂತಾಗಿದೆ. ಉತ್ತರ ನೆಗೆಟಿವ್ ಬರುತ್ತಿದೆ. ಆದರೂ ಯಾಕೆ ಹೀಗಾಗುತ್ತದೆ? ಸಂತಾನಶಕ್ತಿ ನಿಯಂತ್ರಣ ಕ್ರಮಗಳಲ್ಲಿ ಯಾವುದು ಉತ್ತಮ ತಿಳಿಸುವಿರಾ?**

ಮಾನಸ, ಹೆಗ್ಗೋಡು

ನೀವು ಇನ್ನೆರಡು ವರ್ಷ ಮಗು ಬೇಡವೆಂದು ನಿರ್ಧರಿಸಿರುವುದು ಉತ್ತಮ ವಿಚಾರ. ಎರಡು ಗರ್ಭಧಾರಣೆಗಳ ನಡುವೆ ಕನಿಷ್ಠ ಎರಡು ವರ್ಷವಾದರೂ ಅಂತರ ಇರಬೇಕು. ಆಗ ಮಾತ್ರ ತಾಯಿ ಹಾಗೂ ಮಗುವಿನ ಆರೋಗ್ಯ ಚೆನ್ನಾಗಿರುತ್ತದೆ. ಎರಡು ವರ್ಷ ಮಗುವಿಗೆ ಎದೆಹಾಲುಣಿಸಿ, ಜತೆಗೆ ಪೂರಕ ಆಹಾರವನ್ನು ನೀಡಿ. ಮೊದಲ ಸಾವಿರ ದಿನಗಳ ಕಾಲ ಮಗುವಿನ ಪೋಷಣೆ ಸರಿಯಾದರೆ, ಆ ಮಗುವಿನ ಆರೋಗ್ಯ ಸದೃಢವಾಗಿರುತ್ತದೆ ಎಂಬುದನ್ನು ನೆನಪಿಡಿ.

ಇನ್ನು ನೀವು ಹಾಕಿಸಿಕೊಂಡಿರುವ 'ಡಿಎಂಪಿಎ' ಚುಚ್ಚುಮದ್ದು ತಾತ್ಕಾಲಿಕ ಸಂತಾನಶಕ್ತಿ ನಿಯಂತ್ರಣ ಕ್ರಮವಾಗಿದೆ. ಇದನ್ನು ಮೂರು ತಿಂಗಳಿಗೊಮ್ಮೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಮುಖ್ಯವಾಗಿ ಪ್ರೊಜೆಸ್ಟಿರಾನ್ ಹಾರ್ಮೋನ್ ಇರುವ ಚುಚ್ಚುಮದ್ದಾಗಿದೆ. ಹಾಗಾಗಿ, ಹೆಚ್ಚಿನ ಮಹಿಳೆಯರಲ್ಲಿ ಗರ್ಭಕೋಶದ ಒಳಪದರವು ಸರಿಯಾಗಿ ಬೆಳೆಯದೆ ಮುಟ್ಟು ನಿಯಮಿತವಾಗಿ ಆಗದೇ ಇರಬಹುದು. ಈ ಬಗ್ಗೆ ಆರೋಗ್ಯ ಕಾರ್ಯಕರ್ತರು ತಿಳಿಸಿರಬೇಕಲ್ಲವೇ?

'ಡಿಎಂಪಿಎ' ಅಥವಾ 'ಅಂತರ' ಚುಚ್ಚುಮದ್ದು ತೆಗೆದುಕೊಂಡಾಗ ಆಗುವ ಸಾಮಾನ್ಯ ಅಡ್ಡಪರಿಣಾಮ ಇದು. ದೀರ್ಘಾವಧಿಯಲ್ಲಿ ತೆಗೆದುಕೊಂಡಾಗ ಮೂಳೆಯ ಸಾಂದ್ರತೆ ತುಸು ಕಡಿಮೆಯಾಗಬಹುದು. ಈ ಬಗ್ಗೆ ಆತಂಕವಿದ್ದರೆ ಕಾಪರ್-ಟಿ ಹಾಕಿಸಿಕೊಳ್ಳಬಹುದು. ಹೆರಿಗೆಯಾದ ತಕ್ಷಣ ಅಥವಾ ನಂತರವೂ ಕಾಪರ್-ಟಿ ಅಳವಡಿಸಿಕೊಳ್ಳಬಹುದು. ಇನ್ನೊಂದು ಮಗು ಬೇಕು ಎನಿಸಿದಾಗ, ಎರಡು ತಿಂಗಳ ಮೊದಲು ಇದನ್ನು ತೆಗೆಸಿದರೆ ಸಾಕು. ಪತಿಯೂ ಕಾಂಡೋಮ್ ಬಳಸಬಹುದು. ಇದಲ್ಲದೇ ನೀವು ತಾತ್ಕಾಲಿಕವಾಗಿ ಗರ್ಭನಿರೋಧಕ ಗುಳಿಗೆಗಳನ್ನು ಬಳಸಬಹುದು. ಆದರೆ, ಇದನ್ನು ತಪ್ಪದೆ ದಿನವೂ ಸೇವಿಸಬೇಕಾಗುತ್ತದೆ. ತಾತ್ಕಾಲಿಕವಾಗಿ ಸಂತಾನಶಕ್ತಿ ನಿಯಂತ್ರಣ ಕ್ರಮಗಳು ಹಲವಾರು ಇವೆ. ಸರ್ಕಾರದಿಂದಲೂ ಉಚಿತವಾಗಿ ಲಭ್ಯ ಇವೆ. ವೈದ್ಯರು ಅಥವಾ ಆರೋಗ್ಯ ಕಾರ್ಯಕರ್ತರೊಡನೆ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಿ.

ವಯಸ್ಸು ದೇಹಕ್ಕಷ್ಟೆ

• ಮಂಜುಳಾ ಎಚ್.ವಿ.

ನಾವು ಗೆಳತಿಯರು, ಸ್ನೇಹ ಸಿಂಚನದ ಒಡತಿಯರು

ನನ್ನ ತವರೂರು ಪುಟ್ಟದೊಂದು ಹಳ್ಳಿ. ಅಲ್ಲಿದ್ದ ನಮ್ಮ ಗೆಳತಿಯರ ಬಳಗದ್ದೇ ಒಂದು ಪ್ರಪಂಚವಾಗಿತ್ತು. 1990-95ರ ಹೊತ್ತಿಗೆ ಒಬ್ಬೊಬ್ಬರಾಗಿ ಮದುವೆಯಾಗಿ ದೂರದೂರುಗಳಿಗೆ ತೆರಳಿದ ಬಳಿಕ, ನಮ್ಮ ನಮ್ಮ ಸಂಸಾರದಲ್ಲಿ ಮುಳುಗಿಹೋದೆವು. ಗಂಡ, ಮನೆ, ಮಕ್ಕಳು ಅನ್ನುತ್ತಲೇ ದಶಕಗಳನ್ನು ಕಳೆದಿದ್ದಾಯಿತು.

ಹೀಗೇ ಒಮ್ಮೆ ಒಂದಿಬ್ಬರು ಗೆಳತಿಯರು ಫೋನ್‌ನಲ್ಲಿ ಸಂಪರ್ಕಕ್ಕೆ ಬಂದಾಗ ಆದ ಸಂತಸ ಅಷ್ಟಿಷ್ಟಲ್ಲ. ಮತ್ತೊಮ್ಮೆ ಬಾಲ್ಯಕ್ಕೆ ಮರಳಿದಂತಹ ಅನುಭವ. ವಾಟ್ಸ್‌ಆ್ಯಪ್ ಡಿ.ಪಿ.ಯಲ್ಲಿನ ಅವರ ಭಾವಚಿತ್ರಗಳನ್ನು ನನ್ನ ಯಜಮಾನರಿಗೆ ತೋರಿಸಿ, ನಮ್ಮ ಶಾಲಾ ದಿನಗಳ ಬಗ್ಗೆ ಸಂಭ್ರಮ ಹಂಚಿಕೊಂಡೆ.

ಕ್ರಮೇಣ ಇತರ ಗೆಳತಿಯರೂ ಸಂಪರ್ಕಕ್ಕೆ ಬಂದು, ಮೊಬೈಲ್ ನಂಬರ್‌ಗಳ ವಿನಿಮಯ ಮಾಡಿಕೊಂಡೆವು. ಮನೆ, ಮಕ್ಕಳ ವಿಷಯ ಮಾತನಾಡಿ ಖುಷಿಪಟ್ಟದ್ದಾಯಿತು. ಆಮೇಲೆ ಎಲ್ಲರೂ ಸೇರಿ ಒಂದು ವಾಟ್ಸ್‌ಆ್ಯಪ್ ಗುಂಪು ರಚಿಸಿಕೊಂಡೆವು. ಈಗ ದಿನವೂ ಈ ಗುಂಪಿನ ಮೂಲಕ ಮಾತನಾಡಿಕೊಳ್ಳುತ್ತೇವೆ.

ಮಕ್ಕಳ ಮದುವೆಗೆ ಹೋಗಿ ಸಂಭ್ರಮಪಡುತ್ತೇವೆ, ಊರಿನ ಜಾತ್ರೆಗೆ ಹೋಗಿ ಖುಷಿ ಪಡುತ್ತೇವೆ. ಇನ್ನು ಮೊಮ್ಮಕ್ಕಳ ನಾಮಕರಣ, ಚೌಳ, ಮುಂಜಿಯಂತಹವುಗಳ ಸಂಭ್ರಮ ನಮ್ಮ ಮುಂದಿದೆ. ಈ ನಮ್ಮ ಸ್ನೇಹಕ್ಕೆ ಐವತ್ತರ ಸಂಭ್ರಮವೂ ಸೇರುತ್ತದೆ. ನಾವೆಲ್ಲರೂ ಈಗ ಅರವತ್ತರ ಆಸುಪಾಸಿನಲ್ಲಿದ್ದೇವೆ. ಆದರೂ ನಮ್ಮ ಮನಸ್ಸು ಮಾತ್ರ ಹದಿನಾರರಿಂದ ಮುಂದಕ್ಕೆ ಹೋಗಿಲ್ಲ. ನಮ್ಮ ಕಷ್ಟ ಸುಖಗಳೇನೇ ಇರಲಿ, ಪರಸ್ಪರ ಹಂಚಿಕೊಂಡು ಸಮಾಧಾನ ಪಟ್ಟುಕೊಳ್ಳುತ್ತೇವೆ. ಸ್ನೇಹದ ಮಹತ್ವ ಎಷ್ಟೆಂಬುದು ಅರಿವಾಗಿದೆ.

ಅಮ್ಮ ಹೇಳ್ತಾಳೆ

ಅಡುಗೆ ಮನೆಯ ಯಾವುದೇ ಮೂಲೆಯಲ್ಲಿ ಸಕ್ಕರೆ ಡಬ್ಬ ಇಟ್ಟರೂ ಇರುವೆ ಸರಕ್ಕನೆ ಬರುತ್ತದೆಯೇ? ಹಾಗಿದ್ದರೆ ಹೀಗೆ ಮಾಡು. ಸಕ್ಕರೆ ಡಬ್ಬದಲ್ಲಿ ಎರಡು ಲವಂಗಗಳನ್ನು ಹಾಕಿ ಮುಚ್ಚಿಡು. ಇರುವೆ ಬಂದರೆ ಕೇಳು.

ಭಾವಯಾನ

ಹಕ್ಕಿಯ ಬಾಣಂತನ ಮಾಡಿದ್ದೀರಾ?

• ಟಿ.ಎಸ್.ಪ್ರತಿಭಾ

ಬೆಂಗಳೂರಿನ ಮೈಲಸಂದ್ರದ ನನ್ನ ಸಹೋದರಿ ಸೌಭಾಗ್ಯಾ ಜಗದೀಶ್ ಮನೆಗೆ ಈಚೆಗೆ ಹೋಗಿದ್ದಾಗ, ಅವರ ಪುಟ್ಟ ಹೂತೋಟದ ಕಣಗಲ ಗಿಡದಲ್ಲಿ ಬುಲ್ ಬುಲ್ ಪಕ್ಷಿಗಳು ಗೂಡು ಕಟ್ಟುವ ಕಾಯಕ ಶುರು ಮಾಡಿದ್ದನ್ನು ನೋಡಿದ್ದೆ. ನಂತರದ ಸಂಗತಿಯನ್ನು ನನ್ನ ಸಹೋದರಿಯ ಮಾತಿನಲ್ಲೇ ಕೇಳಿ: ಬುಲ್ ಬುಲ್ ಪಕ್ಷಿಗಳ ಕಲರವ ಕೇಳಿಸಿಕೊಂಡೇ ನನ್ನ ಬೆಳಗಿನ ದಿನಚರಿ ಪ್ರಾರಂಭವಾಗುತ್ತಿತ್ತು. ನೋಡ ನೋಡುತ್ತಿದ್ದಂತೆಯೇ ಗಂಡು- ಹೆಣ್ಣುಪಕ್ಷಿಗಳ ಜೋಡಿಯು ಒಂದು ಸುಂದರ ಗೂಡನ್ನು ಕೇವಲ ಐದು ದಿನಗಳೊಳಗೆ ಕಟ್ಟೇಬಿಟ್ಟಿತು (ಆರ್ಕಿಟೆಕ್ಚರಲ್ ಎಂಜಿನಿಯರಿಂಗ್ ಕೋರ್ಸನ್ನು ಎಲ್ಲಿ ಮಾಡಿದ್ದವೋ!).

ಸಂಗ್ರಹ ಚಿತ್ರ

ಕೆಲವೇ ದಿನಗಳಲ್ಲಿ ತಿಳಿಗೆಂಪು ಬಣ್ಣದ ಮೊಟ್ಟೆಗಳನ್ನು ಕಂಡು ಬಹಳ ಖುಷಿಯಾಯಿತು. ಮೊಟ್ಟೆಗಳು ಒಡೆದು ಮರಿಗಳಾದವು. ಅವುಗಳಿಗೆ ನಾನು ದಿನಾ ಕಲ್ಲಂಗಡಿ, ದಾಳಿಂಬೆ ಹಣ್ಣುಗಳನ್ನು ಚಿಪ್ಪಿನೊಳಗೆ ಹಾಕಿ ಇಡುತ್ತಿದ್ದೆ. ತಾಯಿ ಹಕ್ಕಿ ಬಹಳ ಜತನದಿಂದ ಹಣ್ಣುಗಳನ್ನು ಮರಿಗಳಿಗೆ ತಿನ್ನಿಸುತ್ತಿತ್ತು. ವಾರದ ನಂತರ ಕೊಕ್ಕಿನಿಂದ ಚಿಕ್ಕ ಚಿಕ್ಕ ಹುಳುಗಳನ್ನು ತಂದು ತಿನ್ನಿಸತೊಡಗಿತು. ಇಷ್ಟೆಲ್ಲಾ ಆಗುವಾಗ ಗಂಡುಹಕ್ಕಿ ಹೊರಗೆ ಮರಿಗಳಿಗೆ ಕಾವಲಾಗಿ ಕೂರುತ್ತಿತ್ತು.

ಅದೊಂದು ದಿನ ಬೆಳಿಗ್ಗೆ ಎದ್ದು ನೋಡಿದಾಗ, ಪಕ್ಷಿ ತನ್ನ ಮರಿಗಳೊಂದಿಗೆ ಮನೆ ಖಾಲಿ ಮಾಡಿಕೊಂಡು ಹೋಗಿಬಿಟ್ಟಿತ್ತು. ಆ ಪಕ್ಷಿಗಳ ಕಲರವ ಕೇಳದೆ ಏನನ್ನೋ ಕಳೆದುಕೊಂಡಂತೆ ಆಗಿ, ಆ ಗುಂಗಿನಿಂದ ಹೊರಬರಲು ಕೆಲ ದಿನಗಳೇ ಬೇಕಾಯಿತು. ನನ್ನ ಮಗಳು 'ಹಣ್ಣುಕೊಟ್ಟು ಹಕ್ಕಿಗಳ ಬಾಣಂತನ ಚೆನ್ನಾಗಿ ಮಾಡಿದೆ ಅಮ್ಮ' ಅಂತ ಆಗಾಗ ರೇಗಿಸುತ್ತಿರುತ್ತಾಳೆ.

ಹೋಯ್! ಗೊತ್ತೇ 'ಹೊಯ್ ಹಪ್ಪಳ?'

• ಸುಮಾ ಬಿ.

ರಸಾಸ್ವಾದ

ಸೂರ್ಯ ತನ್ನ ಪ್ರಖರತೆ ಹೆಚ್ಚಿಸಿಕೊಳ್ಳುತ್ತಾ ಹೋದಂತೆ ಮಲೆನಾಡಿನ ಮನೆಗಳಲ್ಲಿ ಹಪ್ಪಳ, ಸಂಡಿಗೆ ಮಾಡುವ ಚಟುವಟಿಕೆಗಳೂ ಗರಿಗೆದರುತ್ತವೆ. ಮಾರ್ಚ್– ಏಪ್ರಿಲ್ ತಿಂಗಳು ಮನೆಮನೆಯಲ್ಲೂ ಹಪ್ಪಳ– ಸಂಡಿಗೆಯದ್ದೇ ಸದ್ದು. ಆಗೆಲ್ಲ ಒಟ್ಟು ಕುಟುಂಬದಲ್ಲಿ 30ರಿಂದ 40 ಸೇರು ಅಕ್ಕಿ ನೆನೆಹಾಕಿ ವರ್ಷಕ್ಕಾಗುವಷ್ಟು 'ಹೊಯ್ಯಪ್ಪಳ'ವನ್ನು ತಿಂಗಳು ಪೂರ್ತಿ ಮಾಡಿಟ್ಟುಕೊಳ್ಳುತ್ತಿದ್ದರು. ಮಧ್ಯರಾತ್ರಿ ಅಥವಾ ಮುಂಜಾವಿನಿಂದಲೇ ಹಪ್ಪಳ ಹೊಯ್ಯುವ ಕಾಯಕಕ್ಕೆ ಮುನ್ನುಡಿ ಬರೆಯುತ್ತಿದ್ದರು.

ತಿನ್ನಲು ರುಚಿಕರವಾದ, ಎಣ್ಣೆಯಲ್ಲಿ ಕರಿದು ಅಥವಾ ಕೆಂಡದಲ್ಲಿ ಸುಟ್ಟು ಬಾಯಲ್ಲಿಟ್ಟರೆ ಕರಗುವ 'ಹೊಯ್' ಹಪ್ಪಳದ ತಯಾರಿ ವಾರದಿಂದಲೇ ನಡೆಯುತ್ತದೆ. ಅಮ್ಮ ಹಪ್ಪಳಕ್ಕೆ ಅಕ್ಕಿ ನೆನೆಹಾಕಿದಳೆಂದರೆ ನಮ್ಮದು ಮುತ್ತುಗದ ಎಲೆ ಕೊಯ್ದುಕೊಂಡು ಬರುವ ಕಾಯಕ. ಇಡೀ ಊರಿಗೂರೇ ಈ ಹಪ್ಪಳ ಮಾಡುತ್ತಿದ್ದ ಕಾರಣಕ್ಕೆ, ಆಗತಾನೇ ಗಿಡದಲ್ಲಿ ನೋಡಿದ್ದ ಮುತ್ತುಗದ ಎಲೆ ಮತ್ತೊಂದು ಗಳಿಗೆಗೆ ಮಾಯವಾಗಿರುತ್ತಿತ್ತು. ಹೊಲ– ಗದ್ದೆಗಳನ್ನು ತಿರುಗಿ, ಏರಿ– ಮಟ್ಟಿಗಳನ್ನು ಹತ್ತುತ್ತ ಇಳಿಯುತ್ತ ಮುತ್ತುಗದ ಎಲೆ ಹುಡುಕುವುದೇ ಕೆಲಸ. ಬೆಳಿಗ್ಗೆಯಿಂದ ಸಂಜೆವರೆಗೆ ಅಲೆದಾಡಿ ಅಂತೂ ಒಂದಷ್ಟು ಎಲೆಗಳನ್ನು ಹರಿದುಕೊಂಡು ಮನೆ ತಲುಪುತ್ತಿದ್ದೆವು.

ಮುತ್ತುಗದ ಎಲೆಗೂ ಹೊಯ್ ಹಪ್ಪಳಕ್ಕೂ ಎಲ್ಲಿಲ್ಲದ ನಂಟು. ಒಂದೊಂದು ಹಪ್ಪಳ ಹೊಯ್ದಾಗಲೂ ಒಂದೊಂದು ಮುತ್ತುಗದ ಎಲೆ ಜೊತೆಯಾಗುತ್ತಿತ್ತು. ಹಬೆಯಲ್ಲಿ ಬೆಂದ ಹಪ್ಪಳವನ್ನು ತಟ್ಟೆಯಿಂದ ತೆಗೆದುಹಾಕಿದರೆ ಒಂದಕ್ಕೊಂದು ಅಂಟಿಕೊಂಡು ಹರಿದುಬಿಡುತ್ತವೆ ಎಂಬ ಕಾರಣಕ್ಕೆ ಮುತ್ತಜ್ಜಿಯರು ಈ ಎಲೆಯ ನಂಟು ಬೆಳೆಸಿರಬಹುದು. ಅಗಲಕ್ಕೆ ಹರಡಿಕೊಂಡು ಎರಡು ಅಂಗೈಗಳಿಗಿಂತಲೂ ದೊಡ್ಡದಾಗಿರುತ್ತಿದ್ದ ಮುತ್ತುಗದ ಎಲೆ ಮೇಲೆ ಒಂದು ಹಪ್ಪಳವನ್ನು ಆರಾಮಾಗಿ ಹಾಕಬಹುದಿತ್ತು. ಹಾಗಾಗಿ, ಮುತ್ತಜ್ಜಿಯರ ಈ ಎಲೆಯ ಆಯ್ಕೆಯೂ ತೂಕದ್ದೇ ಆಗಿತ್ತೆನ್ನಿ.

ಈರುಳ್ಳಿ ಹಪ್ಪಳ (ಹಬೆಯಲ್ಲಿ ಬೇಯುವ ಮೊದಲು, ಬೆಂದ ನಂತರ)

ಮಲೆನಾಡಿನ ಮನೆಗಳಲ್ಲಿ ಹೊಯ್ ಹಪ್ಪಳ, ಅಕ್ಕಿ ಹಪ್ಪಳ, ಹಬೆ ಹಪ್ಪಳ, ಹಸಿ ಹಪ್ಪಳ, ಖಾರದ ಹಪ್ಪಳ, ನೆರೆ ಹಪ್ಪಳ, ಉಗಿ ಹಪ್ಪಳ... ಹೀಗೆ ವಿವಿಧ ನಾಮಾವಳಿಗಳನ್ನು ಹಚ್ಚಿಕೊಂಡು ಬೀಗುತ್ತಿದ್ದ ಈ ಹಪ್ಪಳ ಬೇಕೆಂದಾಗ ದಿಢೀರ್ ಎಂದು ಮಾಡುವಂಥದ್ದಲ್ಲ. ನಾಲ್ಕು ದಿನಗಳ ಹಿಂದೆಯೇ ದೊಡ್ಡ ಸ್ವಾರೆಯಲ್ಲಿ ಅಕ್ಕಿ ನೆನೆಹಾಕಿ, ದಿನವೂ ನೀರು ಬದಲಾಯಿಸುತ್ತ ಮತ್ತೆ ನೀರು ಹಾಕಿ ನೆನೆ ಇಡಬೇಕು (ಕೆಲವರು ಐದು ದಿನ, ಇನ್ನು ಕೆಲವರು ಮೂರು ದಿನ ಅಕ್ಕಿ ನೆನೆಸುತ್ತಾರೆ). ನಾಲ್ಕನೇ ದಿನಕ್ಕೆ ಅಕ್ಕಿ ನುಚ್ಚಿನಂತಾದರೆ ಚೆನ್ನಾಗಿ ನೆನೆದಿದೆ ಎಂದರ್ಥ. ಅದನ್ನು ಒರಳುಕಲ್ಲಿನಲ್ಲಿ ರುಬ್ಬುವುದೇ ಅಮ್ಮಂದಿರಿಗೆ ದೊಡ್ಡ ಕೆಲಸ. ಹಿಟ್ಟು ನುಣುಪಾಗುವಂತೆ ರುಬ್ಬಬೇಕಿದ್ದರಿಂದ ಬೆಳಿಗ್ಗೆಯಿಂದ ಸಂಜೆವರೆಗೂ ಈ ಕಾಯಕ ಸಾಗುತ್ತಿತ್ತು. ಒಮ್ಮೆಗೇ 15ರಿಂದ 20 ಸೇರು ಅಕ್ಕಿ ರುಬ್ಬುತ್ತಿದ್ದ ಅಮ್ಮಂದಿರ ಶ್ರಮಕ್ಕೆ ತಲೆಬಾಗಲೇಬೇಕು.

ಈಗೆಲ್ಲ ಮಿಕ್ಸಿ, ಗ್ರೈಂಡರ್‌ಗಳು ಈ ಕೆಲಸವನ್ನು ಸುಲಭವಾಗಿಸಿವೆ. ಹಪ್ಪಳ ಹೊಯ್ಯಲು ಅರ್ಧ ದಿನ ಒಲೆಯ ಮುಂದೆಯೇ ಕುಳಿತುಕೊಳ್ಳಬೇಕಾದ ಕಾರಣಕ್ಕೆ ಮುಂಜಾವು ಅಥವಾ ಇಳಿ ಸಂಜೆ ಹೊತ್ತನ್ನೇ ಅಮ್ಮಂದಿರು ಆಯ್ಕೆಮಾಡಿಕೊಳ್ಳುತ್ತಿದ್ದರು.

ಈರುಳ್ಳಿ ಹಪ್ಪಳದ ಗಮ್ಮತ್ತು: ಹಬೆಯಲ್ಲಿ ಬೆಂದ ಹಪ್ಪಳ ಹಸಿಯಾಗಿರುವಾಗಲೇ ತಿನ್ನಲು ಬಲು ರುಚಿ. ಇನ್ನು ಹಪ್ಪಳದ ಹಿಟ್ಟಿಗೆ ಈರುಳ್ಳಿ, ಕೊತ್ತಂಬರಿ ಸೊಪ್ಪು ಹಾಕಿ ಹೊಯ್ದರೆ ಅದರ ಗಮ್ಮತ್ತೇ ಬೇರೆ. ಹಿಟ್ಟು ಇನ್ನೇನು ಖಾಲಿಯಾಗುವ ಹೊತ್ತಿಗೆ ಈರುಳ್ಳಿ ಹಪ್ಪಳದ ಘಮ ಏಳುತ್ತಿತ್ತು. ಈ ಸಮಯಕ್ಕಾಗಿ ಬಕಪಕ್ಷಿಗಳಂತೆ ಕಾಯುತ್ತಿದ್ದ ನಮಗೆ ಅಂದು ಅದೇ ಬೆಳಗಿನ ಉಪಾಹಾರ. ಈಗಲೂ ಹಸಿ ಹಪ್ಪಳ ತಿನ್ನಲೆಂದೇ ಅಕ್ಕಿ ನೆನೆಹಾಕಿ ವರ್ಷಕ್ಕೆರಡು ಬಾರಿಯಾದರೂ ಈರುಳ್ಳಿ ಹಪ್ಪಳ ಸವಿಯುವುದುಂಟು.

ನದಿಯಲ್ಲಿ ಹೊಸ ನೀರು ಹರಿಯುವಂತೆ ಈ ಹಪ್ಪಳ ತಯಾರಿಯಲ್ಲೂ ಬಹಳಷ್ಟು ಬದಲಾವಣೆಯ ಗಾಳಿ ಬೀಸಿದೆ. ಅಂದಿನಂತೆ ಇಂದು ಮುತ್ತುಗದ ಎಲೆಯ ನಂಟನ್ನು ಹಪ್ಪಳ ದೂರ ಮಾಡಿದೆ. ದಿನವಿಡೀ ಹಿಟ್ಟು ರುಬ್ಬುವ ತಾಪತ್ರಯ ಈಗಿಲ್ಲ. ಹತ್ತು– ಇಪ್ಪತ್ತು ಸೇರು ತಯಾರಾಗುತ್ತಿದ್ದ ಜಾಗದಲ್ಲಿ ನಾಲ್ಕೈದು ಸೇರಿನ ಹಪ್ಪಳ ಸಾಕೆನಿಸುತ್ತದೆ. ಹೊಯ್ ಹಪ್ಪಳದ ರುಚಿ ಕಂಡವರಿಗೆ ವರ್ಷಕ್ಕೊಮ್ಮೆಯಾದರೂ ಅದನ್ನು ಸವಿಯಬೇಕೆನ್ನುವ ಇರಾದೆ ಇದ್ದೇ ಇರುತ್ತದೆ. ಬಲ್ಲವರೇ ಬಲ್ಲರು 'ಹೊಯ್ ಹಪ್ಪಳ'ದ ರುಚಿಯ!

ನೀವೂ ಮಾಡಿನೋಡಿ

ಏನೇನು ಬೇಕು? ಅಕ್ಕಿ ಒಂದು ಸೇರು (ದಪ್ಪ ಅಕ್ಕಿ ಅಥವಾ ರೇಷನ್ ಅಕ್ಕಿ ಬಳಸಿದರೆ ಉತ್ತಮ), ತಲಾ ಮೂರು ಟೀ ಚಮಚ ದನಿಯಾ ಮತ್ತು ಜೀರಿಗೆ, ರುಚಿಗೆ ತಕ್ಕಷ್ಟು ಖಾರದ ಪುಡಿ, ಉಪ್ಪು, ಕರಿಬೇವು, ಒಂದು ದಪ್ಪ ಗೆಡ್ಡೆ ಬೆಳ್ಳುಳ್ಳಿ.

ಹೀಗೆ ಮಾಡಿ: ಅಕ್ಕಿಯನ್ನು ಒಂದು ಪಾತ್ರೆಯಲ್ಲಿ ಚೆನ್ನಾಗಿ ತೊಳೆದು ಮೂರು ದಿನ ನೆನೆಯಲು ಬಿಡಬೇಕು. ಪ್ರತಿದಿನವೂ ನೀರನ್ನು ತೆಗೆದು ಬೇರೆ ನೀರನ್ನು ಹಾಕಿಡಿ. ಮೂರನೇ ದಿನ ಅಕ್ಕಿಯನ್ನು ಮಿಕ್ಸಿಯಲ್ಲಿ ಹಾಕಿ ಸ್ವಲ್ಪವೇ ನೀರು ಹಾಕಿ ನುಣ್ಣಗೆ ರುಬ್ಬಿಕೊಳ್ಳಬೇಕು. ದನಿಯಾ, ಜೀರಿಗೆಯನ್ನು ಒಣಗಿದ ಮಿಕ್ಸಿಯಲ್ಲಿ ಹಾಕಿ ಪುಡಿ ಮಾಡಿಕೊಳ್ಳಬೇಕು. ಬಳಿಕ ಬೆಳ್ಳುಳ್ಳಿ, ಕರಿಬೇವು, ಖಾರದಪುಡಿ, ಉಪ್ಪು, ದನಿಯಾ, ಜೀರಿಗೆ ಪುಡಿಯನ್ನು ಸೇರಿಸಿ ಸ್ವಲ್ಪವೇ ನೀರು ಹಾಕಿ ನುಣ್ಣಗೆ ರುಬ್ಬಿಕೊಂಡು ಅಕ್ಕಿಹಿಟ್ಟಿಗೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು. ದೋಸೆ ಹಿಟ್ಟಿಗಿಂತ ಸ್ವಲ್ಪ ಗಟ್ಟಿಯಾಗಿರಲಿ ಮಿಶ್ರಣ. ಇದನ್ನು ಒಂದು ಪಾತ್ರೆಯಲ್ಲಿ ಹಾಕಿ ಒಂದು ದಿನ ನೆನೆಯಲು ಬಿಡಬೇಕು. ಮಾರನೇ ದಿನ ಹಪ್ಪಳ ಹೊಯ್ಯಬೇಕು.

ಹೀಗೆ ಹೊಯ್ಯಿರಿ: ದಪ್ಪ ತಳವಿರುವ ಅಗಲವಾದ ಪಾತ್ರೆ ಅಥವಾ ದಬರಿಯಲ್ಲಿ ತಳಭಾಗಕ್ಕೆ ಅರ್ಧದಷ್ಟು ನೀರು ಹಾಕಿ. ನೀರು ಕುದಿಯುವಾಗ ಆ ಪಾತ್ರೆ ಹಿಡಿಸುವಷ್ಟು ಅಗಲವಾದ ತಟ್ಟೆಗೆ ಮಧ್ಯದಲ್ಲಿ ಹಿಟ್ಟು ಹಾಕಿ ತಟ್ಟೆ ತುಂಬ ಹರಡಬೇಕು. ಬಳಿಕ ಕುದಿಯುವ ನೀರಿನ ಪಾತ್ರೆ ಮೇಲೆ ಅರ್ಧ ನಿಮಿಷ ಇಟ್ಟು, ಬಳಿಕ ಆ ತಾಟನ್ನು ಬೋರಲು ಹಾಕಬೇಕು. ಎರಡು ನಿಮಿಷ ಬಿಟ್ಟು ತೆಗೆದರೆ ಹಪ್ಪಳ ಸಿದ್ಧ. ತಟ್ಟೆ ಸ್ವಲ್ಪ ತಣಿದ ಬಳಿಕ ನಾಜೂಕಿನಿಂದ ಹಪ್ಪಳವನ್ನು ಬಿಡಿಸಿ ಬಿಸಿಲಿನಲ್ಲಿ ಒಣಗಿಸಬೇಕು.

ಇದೇ ರೀತಿ ನಾಲ್ಕು ತಟ್ಟೆಗಳನ್ನು ಇಟ್ಟುಕೊಂಡು ಒಂದಾದ ಮೇಲೊಂದರಂತೆ ಬೇಯಿಸಬೇಕು. ತಟ್ಟೆಗೆ ಹಾಕಿದ ಹಿಟ್ಟಿನ ಮೇಲೆ ಸಣ್ಣಗೆ ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪನ್ನು ಉದುರಿಸಿ ಅಥವಾ ಹಿಟ್ಟಿನಲ್ಲಿ ಮಿಕ್ಸ್ ಮಾಡಿ ಹೊಯ್ದರೆ ರುಚಿಕರ ಈರುಳ್ಳಿ ಹಪ್ಪಳ ಸವಿಯಲು ಸಿದ್ಧ.

ನಾಯಕನ ವಿಜೃಂಭಣೆಗಷ್ಟೇ ಒತ್ತು


ಆದಿತ್ಯ

ಕಥೆಯ ನಾಯಕನ ವಿಜೃಂಭಣೆಗೆ ಒತ್ತು ನೀಡಿ, ಕಥೆ–ಚಿತ್ರಕಥೆಯತ್ತ ಹೆಚ್ಚಿನ ಗಮನಹರಿಸದೇ ಹೋದರೆ ಸಿನಿಮಾವು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಳೆದು-ಕೊಳ್ಳುತ್ತದೆ. 'ಟೆರರ್' ಸಿನಿಮಾದಲ್ಲಿ ಹೀಗೇ ಆಗಿದೆ. ಚಿತ್ರದ ಮೊದಲಾರ್ಧದಲ್ಲಿ ಗೊಂದಲಮಯವಾದ ಚಿತ್ರಕಥೆಯಿದ್ದು, ಮಧ್ಯಂತರದಿಂದ ಕಥೆ ತೆರೆದುಕೊ-ಳ್ಳುತ್ತದೆ.

ವಿಜಯ್ ಆದಿತ್ಯ ರಾಯ್(ಆದಿತ್ಯ) ದೇವಸ್ಥಾನದ ಅರ್ಚಕನ ಮಗ. ಬಾಲ್ಯದಲ್ಲೇ ತಂದೆ–ತಾಯಿಯನ್ನು ಕಳೆದುಕೊಂಡಾತ. ಇಂತಹ ವಿಜಯ್ ಯುವಕನಾದಾಗ ರಾಜಕಾರಣಿಗಳ, ಉದ್ಯಮಿಗಳ ಕೋಟ್ಯಂತರ ರೂಪಾಯಿ ಬ್ಲ್ಯಾಕ್‌ಮನಿಯನ್ನು ಕಾಪಾಡುವ ದಂಧೆ ಶುರುಮಾಡುತ್ತಾನೆ. ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ವಿಜಯ್‌ಗೆ ಎದುರಾಳಿಗಳು ಹೆಚ್ಚಾಗುತ್ತಾರೆ. ಆತನ ಕಥೆ ಮುಂದೇನಾಗುತ್ತದೆ ಎನ್ನುವುದೇ ಚಿತ್ರದ ಕಥಾಹಂದರ.

ನಿರ್ದೇಶಕರು ತನ್ನ ಕಥೆಯ ನಾಯಕನ ಪಾತ್ರಕ್ಕಷ್ಟೇ ಪ್ರಾಮುಖ್ಯತೆ ನೀಡಿರುವುದು ಸ್ಪಷ್ಟವಾಗಿ ತೆರೆ ಮೇಲೆ ಕಾಣುತ್ತದೆ. ನಾಯಕನ ಪ್ರತಿ ಪ್ರವೇಶಕ್ಕೂ ಹಿನ್ನೆಲೆ ಸಂಗೀತ, ಸ್ಲೋಮೋಷನ್ ದೃಶ್ಯಗಳಿವೆ. ಮೊದಲಾರ್ಧದ ಚಿತ್ರಕಥೆ ಹಾಗೂ ಸಂಕಲನ ಗೊಂದಲದ ಗೂಡು. ಸಂಭಾಷಣೆ ಕೃತಕವಾಗಿದೆ. ಅದರ ಪ್ರಸ್ತುತಿಯೂ ಅಷ್ಟೇ. ನಾಯಕನನ್ನು ವಿಜೃಂಭಿಸಲೆಂದೇ ಅಗತ್ಯವಿ-ಲ್ಲದ ಸಾಹಸ ದೃಶ್ಯಗಳು ಚಿತ್ರದುದ್ದಕ್ಕೂ ಹಾಕಲಾಗಿದೆ. ಕಥೆ ದ್ವಿತೀಯಾರ್ಧದಲ್ಲಿ ತೆರೆದುಕೊಳ್ಳುತ್ತದೆ. ಹೀಗಿದ್ದರೂ ಅದಕ್ಕೊಂದು ನಿರ್ದಿಷ್ಟವಾದ ಹರಿವು ಇಲ್ಲ. ಚಿತ್ರಕಥೆ, ಕಥೆಯನ್ನು ಸರಳ ಮಾಡುವ, ಅನಗತ್ಯವಾದ ಪಾತ್ರಗಳಿಗೆ ಕತ್ತರಿ ಹಾಕುವ ಅವಕಾಶ ನಿರ್ದೇಶಕರಿಗಿತ್ತು. ಕಥೆಯಲ್ಲಿ ನೈಜತೆಯ ಕೊರತೆ ಎದ್ದು ಕಾಣುತ್ತದೆ. ಬೇಕಾದಷ್ಟು ತಪ್ಪು, ಕೊಲೆ ಮಾಡಿ ನಂತರ ಜ್ಞಾನೋದಯವಾಗಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದರೆ ಸಿಬಿಐಯಂಥ ಸಂಸ್ಥೆಯೂ ಶಿಕ್ಷೆ ನೀಡುವುದಿಲ್ಲ ಎನ್ನುವಂಥ ಸಂದೇಶ ಚಿತ್ರದಲ್ಲಿದೆ!

ನಟನೆಯಲ್ಲಿ ಆದಿತ್ಯ ತಮ್ಮ ಪಾತ್ರವನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ಶ್ರೀನಗರ ಕಿಟ್ಟಿ, ದೇವರಾಜ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

–ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಟೆರರ್ (ಕನ್ನಡ)
- ನಿರ್ಮಾಣ: ಸಿಲ್ಕ್ ಮಂಜು, ರವಿ ಹಾಗೂ ಸ್ಮಿತಾ ವಸಿಷ್ಠ
- ನಿರ್ದೇಶನ: ರಂಜನ್ ಶಿವರಾಮ ಗೌಡ
- ತಾರಾಗಣ: ಆದಿತ್ಯ, ಶ್ರೀನಗರ ಕಿಟ್ಟಿ, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ ಮತ್ತಿತರರು.

ಸಿನಿಮಾದಲ್ಲಿ ಇಮ್ಮಡಿ ಪುಲಕೇಶಿ

ಕೆ.ಎಂ. ಚೈತನ್ಯ

ಇಮ್ಮಡಿ ಪುಲಕೇಶಿ ಕುರಿತ ಕಥೆಯನ್ನು ಹೊಂದಿರುವ 'ಎರೆಯ' ಚಿತ್ರ ಸೆಟ್ಟೇರಲು ಸಜ್ಜಾಗಿದೆ. ಈ ಚಿತ್ರಕ್ಕೆ ಕೆ.ಎಂ.ಚೈತನ್ಯ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ವಿಂಗ್‌ಸ್ಪ್ಯಾನ್ ಮೋಷನ್ ಪಿಕ್ಚರ್ಸ್ ಬಂಡವಾಳ ಹೂಡುತ್ತಿದೆ.

'ಎರೆಯ' ನಮ್ಮ ನಿರ್ಮಾಣ ಸಂಸ್ಥೆಯ ಮೂರನೇ ಚಿತ್ರ. ಭೂಷಣ್ ಶ್ಯಾನುಭೋಗ್ ಸಾಕಷ್ಟು ಅಧ್ಯಯನ ಮಾಡಿ ಈ ಕಥೆಯನ್ನು ಸಿದ್ಧಪಡಿಸಿದ್ದಾರೆ. ಆರನೇ ಶತಮಾನದ ಕಥೆಯಿದು. ಚಿತ್ರದ ಪ್ರಮುಖ ನಟರು ಮತ್ತು ತಾಂತ್ರಿಕ ತಂಡದ ವಿವರಗಳನ್ನು ಶೀಘ್ರದಲ್ಲೇ ಅಧಿಕೃತವಾಗಿ ಪ್ರಕಟಿಸಲಾಗುವು-ದು. ಪ್ಯಾನ್-ಇಂಡಿಯಾ ಮಟ್ಟದ ಸಿನಿಮಾವಾಗಿದ್ದು, ಹಿಂದಿ ಜತೆಗೆ ದಕ್ಷಿಣ ಭಾರತೀಯ ಭಾಷೆಗಳಲ್ಲಿ ನಿರ್ಮಾಣಗೊಳ್ಳಲಿದೆ' ಎಂದು ನಿರ್ಮಾಣ ಸಂಸ್ಥೆ ಹೇಳಿದೆ.

ಚಿತ್ರಕ್ಕೆ ಸಾಕಷ್ಟು ಜನಪ್ರಿಯ ಕಲಾವಿದರನ್ನು ಆಯ್ಕೆ ಮಾಡಿಕೊಳ್ಳಲು ನಿರ್ಮಾಣ ಸಂಸ್ಥೆ ಆಲೋಚಿಸಿದೆ. ಶೀಘ್ರದಲ್ಲಿಯೇ ಚಿತ್ರೀಕರಣ ಪ್ರಾ-ರಂಭವಾಗಲಿದ್ದು, ಈ ವರ್ಷದ ಅಂತ್ಯಕ್ಕೆ ಚಿತ್ರ ತೆರೆಗೆ ಬರುವ ನಿರೀಕ್ಷೆಯಿದೆ. ❖

ಮುಗಿಯದ 'ಜನ ನಾಯಗನ್' ಸಂಕಷ್ಟ!


ದಳಪತಿ ವಿಜಯ್

ದಳಪತಿ ವಿಜಯ್ ನಟನೆಯ 'ಜನ ನಾಯಗನ್' ಚಿತ್ರಕ್ಕೆ ಒಂದರ ಹಿಂದೊಂದು ಸಂಕಷ್ಟ ಎದುರಾಗುತ್ತಲೇ ಇದೆ. ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯ ಸೇರಿದಂತೆ, ಸುಮಾರು ಐದು ನಿಮಿಷಗಳ ತುಣುಕು ಸೋರಿಕೆಯಾಗಿದೆ. ಈ ಕೃತ್ಯಕ್ಕೆ ವಿಜಯ್ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರದ ಪ್ರಮುಖ ದೃಶ್ಯಗಳು ಹರಿದಾಡುತ್ತಿವೆ. ಇದರಿಂದ ಎಚ್ಚೆತ್ತುಕೊಂಡ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ಸ್ ಆ ಲಿಂಕ್‌ಗಳನ್ನು ಬ್ಲಾಕ್ ಮಾಡಲು ಪ್ರಯತ್ನಿಸುತ್ತಿದೆ. ಜತೆಗೆ ಸೈಬರ್ ಕ್ರೈಂ ಪೊಲೀಸರಿಗೆ ಈ ಬಗ್ಗೆ ದೂರು ನೀಡಿದೆ.

ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ದಳಪತಿ ವಿಜಯ್ ನಟನೆಯ ಚಿತ್ರ ಈ ವರ್ಷ ಜನವರಿ-ಯಲ್ಲಿಯೇ ತೆರೆ ಕಾಣಬೇಕಿತ್ತು. ಎಚ್.ವಿನೋತ್ ನಿರ್ದೇಶಿಸಿ, ಅನಿರುದ್ಧ್ ರವಿಚಂದರ್ ಸಂಗೀತ ನೀಡಿರುವ ಈ ಸಿನಿಮಾ ತಮಿಳು ಚಿತ್ರೋದ್ಯಮಕ್ಕೆ ಬಹುನಿರೀಕ್ಷಿತ ಚಿತ್ರ. ವಿಜಯ್ ಅವರ ಕೊನೆಯ ಸಿನಿಮಾ ಎಂಬ ಕಾರಣಕ್ಕೆ ಬಿಡುಗಡೆಗೆ ಮೊದಲೇ ದುಬಾರಿ ಮೊತ್ತಕ್ಕೆ ಟಿಕೆಟ್‌ಗಳು ಮಾರಾಟಗೊಂ-ಡಿದ್ದವು. ಆದರೆ ಸೆನ್ಸಾರ್ ಸಮಸ್ಯೆಯಿಂದಾಗಿ ಚಿತ್ರ ತೆರೆಗೆ ಬರಲಿಲ್ಲ. ಅಲ್ಲಿಂದ ನಂತರ ಚಿತ್ರಕ್ಕೆ ಸಂಕಷ್ಟಗಳು ಎದುರಾದವು.

ಡಿಸೆಂಬರ್‌ನಲ್ಲಿಯೇ ಕೆವಿಎನ್ ಪ್ರೊಡಕ್ಷನ್ಸ್ ಚಿತ್ರದ ಸೆನ್ಸಾರ್‌ಗೆ ಅರ್ಜಿ ಸಲ್ಲಿಸಿ, ಸೆನ್ಸಾರ್ ಮಂಡಳಿ ಚಿತ್ರವನ್ನು ವೀಕ್ಷಿಸಿತ್ತು. ಬಳಿಕ ಕೆಲವು ಬದಲಾವಣೆ-ಗಳನ್ನು ಸೂಚಿಸಿದ್ದು, ಆ ಆವೃತ್ತಿಯನ್ನು ನೋಡಲು ಮಂಡಳಿ ಹಿಂದೇಟು ಹಾಕುತ್ತಿತ್ತು. ವಿಜಯ್ ಅವರ ರಾಜಕೀಯದ ನಡೆ, ತಮಿಳುನಾಡು ಚುನಾವಣೆಯಿಂದ ಸೆನ್ಸಾರ್ ವಿಳಂಬವಾಗುತ್ತಿದೆ ಎಂಬ ಮಾತುಗಳು ಕೇಳಿಬಂದಿದ್ದವು. ಸದ್ಯ ಸೆನ್ಸಾರ್ ಸಮಸ್ಯೆಗೆ ಪರಿಹಾರ ಸಿಕ್ಕಿದ್ದು, ಅಂತಿಮವಾಗಿ ಪರಿಷ್ಕೃತ ಆವೃತ್ತಿಯನ್ನು ನೋಡಲು ಮಂಡಳಿ ಅನುಮತಿಸಿದೆ.

ಆದಾಗ್ಯೂ ಸಿನಿಮಾ ಸದ್ಯಕ್ಕೆ ತೆರೆಗೆ ಬರುವ ಲಕ್ಷಣ ಕಾಣುತ್ತಿಲ್ಲ. ತಮಿಳುನಾಡಿನಲ್ಲಿ ಚುನಾವಣಾ ಫಲಿತಾಂಶ ಬರುವವರೆಗೂ ತಾಂತ್ರಿಕ ಕಾರಣದಿಂದ ಸಿನಿಮಾ ಬಿಡುಗಡೆ ಸಾಧ್ಯವಿಲ್ಲ. ಅದಾದ ಬಳಿಕ ನಿರ್ಮಾಣ ಸಂಸ್ಥೆಯ 'ಟಾಕ್ಸಿಕ್' ಚಿತ್ರ ತೆರೆ ಕಾಣುತ್ತಿದೆ. ಹೀಗಾಗಿ ಜುಲೈ–ಸೆಪ್ಟೆಂಬರ್‌ನಲ್ಲಿ ಈ ಚಿತ್ರ ತೆರೆ ಕಾಣಲಿದೆ ಎಂದು ಅಂದಾಜಿಸಲಾಗಿದೆ. ಆದರೆ ಅದಕ್ಕೂ ಮೊದಲೇ ಸಿನಿಮಾ ದೃಶ್ಯಗಳು ಸೋರಿಕೆಯಾಗಿರುವುದು ಚಿತ್ರತಂಡದ ಆತಂಕವನ್ನು ಇನ್ನಷ್ಟು ಹೆಚ್ಚಿಸಿದೆ. ❖

ಪದಚ್ಯುತಿ ಪ್ರಕ್ರಿಯೆ: ವರ್ಮಾ ರಾಜೀನಾಮೆ

ನಿವಾಸದಲ್ಲಿ ಹಣ ಪತ್ತೆಯಾಗಿದ್ದ ಪ್ರಕರಣ
- ರಾಷ್ಟ್ರಪತಿಗೆ ರಾಜೀನಾಮೆ ಸಲ್ಲಿಕೆ

ನವದೆಹಲಿ (ಪಿಟಿಐ): ತಮ್ಮ ನಿವಾಸದಲ್ಲಿ ಸುಟ್ಟ ನೋಟುಗಳ ರಾಶಿ ಪತ್ತೆಯಾದ ಆರೋಪಗಳನ್ನು ಎದುರಿಸುತ್ತಿರುವ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ ವರ್ಮಾ ಅವರು ರಾಜೀನಾಮೆ ನೀಡಿದ್ದಾರೆ.

ಯಶವಂತ ವರ್ಮಾ

ಇದರಿಂದ, ಅವರನ್ನು ಪದಚ್ಯುತಗೊಳಿಸುವ ಪ್ರಕ್ರಿಯೆ ನಿಷ್ಪ್ರಯೋಜಕವಾದಂತಾಗಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಏಪ್ರಿಲ್ 9ರಂದು ರಾಜೀನಾಮ ಪತ್ರ ಸಲ್ಲಿಸಿರುವ 57 ವರ್ಷದ ವರ್ಮಾ ಅವರು, 'ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜೀನಾಮೆ ಸಲ್ಲಿಸಲು ತೀವ್ರ ದುಃಖವಾಗುತ್ತಿದೆ. ಈ ಕಚೇರಿಯಲ್ಲಿ ಸೇವೆ ಸಲ್ಲಿಸುವುದು ಗೌರವದ ಸಂಗತಿಯಾಗಿತ್ತು' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ವರ್ಮಾ ಅವರ ದೆಹಲಿ ನಿವಾಸದಲ್ಲಿ 2025ರ ಮಾರ್ಚ್ 14ರಂದು ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ನಂದಿಸುವ ಕಾರ್ಯ ಕೈಗೊಂಡ ಅಗ್ನಿಶಾಮಕ ದಳದ ಸಿಬ್ಬಂದಿಗೆ ಸ್ಥಳದಲ್ಲಿ ಭಾರಿ ಪ್ರಮಾಣದ ಹಣ ಸಂಗ್ರಹ ವಾಗಿದ್ದು ಪತ್ತೆಯಾಗಿತ್ತು.

ಆದರೆ, ವರ್ಮಾ ಅವರು ಆ ನಗದು ತನಗೆ ಸೇರಿದ್ದಲ್ಲ ಎಂದು ಪ್ರತಿಪಾದಿಸಿದ್ದರು. ಅಲ್ಲದೆ ತಾನಾಗಲಿ, ತನ್ನ ಕುಟುಂಬದ ಸದಸ್ಯರಾಗಲಿ ಯಾವುದೇ ಹಣವನ್ನು ಸ್ಟೋರ್ ರೂಂನಲ್ಲಿ ಇರಿಸಿರಲಿಲ್ಲ ಎಂದು ಸಮರ್ಥಿಸಿಕೊಂಡಿದ್ದರು.

ವರ್ಮಾ ಅವರ ವಿರುದ್ಧದ ಎರಡು ಖಂಡನಾ ವರದಿಗಳು ಸಲ್ಲಿಕೆಯಾದ ಬಳಿಕ, ಆಗಿನ ಸಿಜೆಐ ಸಂಜೀವ್ ಖನ್ನಾ ಅವರು ವರ್ಮಾ ಅವರಿಗೆ ರಾಜೀನಾಮೆ ನೀಡುವಂತೆ ಸಲಹೆ ನೀಡಿದ್ದರು. ಆದರೆ, ಅವರು ಅದನ್ನು ನಿರ್ಲಕ್ಷಿಸಿದರು. ಅನ್ಯ ಮಾರ್ಗವಿಲ್ಲದೆ ವರ್ಮಾ ಅವರ ಪದಚ್ಯುತಿ ಪ್ರಕ್ರಿಯೆ ಆರಂಭಿಸುವಂತೆ ಸಿಜೆಐ ಅವರು ರಾಷ್ಟ್ರಪತಿ ಅವರಿಗೆ ಪತ್ರ ಬರೆದಿದ್ದರು. ಬಳಿಕ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾಯಿಸಲಾಯಿತು.

ಬಳಿಕ, ವರ್ಮಾ ಅವರನ್ನು ಪದಚ್ಯುತಗೊಳಿಸುವ ಪ್ರಕ್ರಿಯೆ ಆರಂಭಿಸುವ ನಿರ್ಣಯವನ್ನು ಲೋಕಸಭಾ ಸ್ಪೀಕರ್ ಅಂಗೀಕರಿಸಿದರು. ಅಲ್ಲದೆ ವರ್ಮಾ ಅವರ ವಿರುದ್ಧ ಭ್ರಷ್ಟಾಚಾರ ಆರೋಪಗಳ ವಿಚಾರಣೆಗಾಗಿ ಸಮಿತಿ ರಚಿಸಿದರು. ಸ್ಪೀಕರ್ ನಿರ್ಧಾರ ಮತ್ತು ಸಮಿತಿಯ ಸಿಂಧುತ್ವವನ್ನು ಪ್ರಶ್ನಿಸಿ ವರ್ಮಾ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಜನವರಿ 16ರಂದು ವಜಾಗೊಳಿಸಿತ್ತು.

ಪದಚ್ಯುತಿ ಪ್ರಕ್ರಿಯೆ ಏನಾಗಲಿದೆ?

ನ್ಯಾಯಮೂರ್ತಿ ಯಶವಂತ ವರ್ಮಾ ಅವರ ರಾಜೀನಾಮೆಯಿಂದಾಗಿ, ಈಗಾಗಲೇ ಲೋಕಸಭೆಯಲ್ಲಿ ಆರಂಭವಾಗಿರುವ ಪದಚ್ಯುತಿಯ ಪ್ರಕ್ರಿಯೆಗಳು ನಿಷ್ಪ್ರಯೋಜಕವಾಗಲಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಭ್ರಷ್ಟಾಚಾರ ಆರೋಪ ಹೊತ್ತಿರುವ ನ್ಯಾಯಮೂರ್ತಿಗೆ ಸಂಸತ್ತಿನಲ್ಲಿ ಪದಚ್ಯುತಿ ಪ್ರಕ್ರಿಯೆಯನ್ನು ತಡೆಯಲು ಉಳಿದಿದ್ದ ಏಕೈಕ ಮಾರ್ಗ ರಾಜೀನಾಮೆಯಾಗಿತ್ತು ಎಂದು ವಿವರಿಸಿದ್ದಾರೆ.

ಪಿಂಚಣಿ, ಸೌಲಭ್ಯಕ್ಕೆ ಅರ್ಹರು: ನ್ಯಾಯಮೂರ್ತಿಯು ರಾಜೀನಾಮೆ ಮೂಲಕ ಹುದ್ದೆ ತೊರೆದರೆ, ಅವರು ಪಿಂಚಣಿ ಮತ್ತು ಸೌಲಭ್ಯಗಳಿಗೆ ಅರ್ಹರಾಗುತ್ತಾರೆ. ಆದರೆ ಸಂಸತ್ತು ಪದಚ್ಯುತಗೊಳಿಸಿದರೆ ಪಿಂಚಣಿ ಮತ್ತು ಇತರ ಸೌಲಭ್ಯಗಳಿಂದ ವಂಚಿತರಾಗುತ್ತಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಂವಿಧಾನದ 217ನೇ ವಿಧಿಯ ಪ್ರಕಾರ ನ್ಯಾಯಮೂರ್ತಿ-ಗಳು ರಾಷ್ಟ್ರಪತಿಯವರಿಗೆ ತಮ್ಮ ಕೈಬರಹದ ಮೂಲಕ ರಾಜೀನಾಮೆ ಪತ್ರ ಬರೆದು ಸಲ್ಲಿಸಬಹುದು. ಇದಕ್ಕೆ ಯಾವುದೇ ಅನುಮೋದನೆಯ ಅಗತ್ಯ ಇರುವುದಿಲ್ಲ. ಆದರೆ ನ್ಯಾಯಮೂರ್ತಿಯವರು ರಾಜೀನಾಮೆ ಪತ್ರದಲ್ಲಿ ನಿರ್ದಿಷ್ಟ ದಿನಾಂಕವನ್ನು ಉಲ್ಲೇಖಿಸಿ-ದ್ದರೆ, ಆ ದಿನಾಂಕಕ್ಕೂ ಮುನ್ನ ಅವರು ರಾಜೀನಾಮೆಯನ್ನು ಹಿಂಪಡೆಯಲು ಅವಕಾಶ ಹೊಂದಿರುತ್ತಾರೆ ಎಂದು ಅವರು ಹೇಳಿದ್ದಾರೆ.

ಕ್ರಿಮಿನಲ್ ಪ್ರಕರಣ ದಾಖಲಿಸ ಬಹುದು: ರಾಜೀನಾಮೆ ನೀಡಿರುವುದರಿಂದ ನ್ಯಾ. ವರ್ಮಾ ಅವರು ಈಗ ಸಾಂವಿಧಾನಿಕ ಹುದ್ದೆಯಲಿಲ್ಲ. ಹೀಗಾಗಿ ಸರ್ಕಾರ ಅಗತ್ಯವೆನಿಸಿದರೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಬಹುದು ಎಂದು ಅವರು ತಿಳಿಸಿದ್ದಾರೆ. ಈ ಹಿಂದೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ. ರಾಮಸ್ವಾಮಿ ಮತ್ತು ಕಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿ ಸೌಮಿತ್ರ ಸೇನ್ ಅವರೂ ಸಂಸತ್ತಿನಲ್ಲಿ ಪದಚ್ಯುತ ಪ್ರಕ್ರಿಯೆ ಎದುರಿಸಿದ್ದರು. ಆದರೆ ಈ ಇಬ್ಬರೂ ತಮ್ಮ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದ್ದರು.

ಮಗುಚಿದ ದೋಣಿ: 10 ಮಂದಿ ಸಾವು

ಮಥುರಾ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ವೃಂದಾವನದ ಯಮುನಾ ನದಿಯಲ್ಲಿ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ದೋಣಿಯೊಂದು ಮಗುಚಿದ ಪರಿಣಾಮ 10 ಮಂದಿ ಮೃತಪಟ್ಟಿದ್ದಾರೆ.

ಇನ್ನೂ ಐವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೋಣಿಯಲ್ಲಿ ಸುಮಾರು 25 ರಿಂದ 30 ಮಂದಿ ಪ್ರವಾಸಿಗರಿದ್ದರು. ಅವರೆಲ್ಲರೂ ಪಂಜಾಬ್‌ನವರು ಎನ್ನಲಾಗಿದೆ. ಇದುವರೆಗೆ 10 ಶವ ಪತ್ತೆಯಾಗಿದ್ದು, 12 ಮಂದಿಯನ್ನು ರಕ್ಷಿಸಲಾಗಿದೆ.

ನಾಪತ್ತೆಯಾದವರಿಗಾಗಿ ಹುಡು ಕಾಟ ನಡೆಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಚಂದ್ರಪ್ರಕಾಶ್ ಸಿಂಗ್ ತಿಳಿಸಿದ್ದಾರೆ.

'ದೋಣಿಯು ಕೇವಲ 15 ಮಂದಿಯನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿತ್ತು. ಆದರೆ. 25ಕ್ಕೂ ಹೆಚ್ಚು ಮಂದಿಯನ್ನು ಕರೆದೊಯ್ಯಲಾಗುತ್ತಿತ್ತು. ಜತೆಗೆ ಪ್ರವಾಸಿಗರು ಯಾರೂ ಜೀವ ರಕ್ಷಕ ಜಾಕೆಟ್‌ಗಳನ್ನು ಧರಿಸಿರಲಿಲ್ಲ ಎಂದು ಪ್ರತ್ಯಕ್ಷದರ್ಶಿಯೊಬ್ಬ-ರು ತಿಳಿಸಿದ್ದಾರೆ.

